ಜಗತ್ತಿನ ಕಾರ್ಮಿಕರೇ ಒಂದಾಗಿರಿ

ವಿಶ್ವ ಶಾಂತಿಗಾಗಿ ಹೋರಾಡಿರಿ



ಮೇ

ವಿಶೇಷಾಂಕ

1983

ಐಕ್ಯರಂಗ

ಬೆಲೆ ರೂ. 1-50

ಭಾರತ ಕಮ್ಯೂನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ : 5 ಸಂಚಿಕೆ : 21-22 ಮೇ 29, 1983 ಬೆಲೆ : ರೂ. 1-50

ಸಂಪಾದಕೀಯ :

ವಿಶಿಷ್ಟ ಪರಿಸ್ಥಿತಿ - ನಮ್ಮ ಕರ್ತವ್ಯ

ಹೋದ ಮೇ ದಿನಾಚರಣೆಯ ನಂತರ ಜಗತ್ತು, ದೇಶ ಮತ್ತು ನಮ್ಮ ರಾಜ್ಯದಲ್ಲಿ ಬಹಳ ಬದಲಾವಣೆಗಳಾಗಿವೆ. ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ಬೆಂಬಲಿಗರ ಬೆಂಬಲದಿಂದ ಆಧುನಿಕ ಶಸ್ತ್ರಾಸ್ತ್ರಗಳಿಂದ ಮೂರನೇ ಮಹಾ ಯುದ್ಧದ ಮೂಲಕ ಇಡೀ ಸಮತಾವಾದಿ ಜಗತ್ತನ್ನೇ ನಾಶ ಮಾಡುವ ತಯಾರಿ ನಡೆಸುತ್ತಿರುವಾಗ ಸೋವಿಯತ್ ರಷ್ಯಾ, ಸಮತಾವಾದಿ ದೇಶಗಳ, ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಸಹಾಯದಿಂದ ಯುದ್ಧ ವಿರೋಧಿ ಪ್ರಕ್ಷೋಭೆ ನಡೆಸುತ್ತಿದೆ. ಸಂಘಟಿತ ಕಾರ್ಮಿಕ ವರ್ಗ, ದುಡಿಯುವ ಜನತೆ ಇದರ ಮುಂಚೂಣಿಯಲ್ಲಿದೆ. ಅಕಸ್ಮಾತ್ ರೇಗನ್ ಯುದ್ಧ ಹೂಡಿದ್ದೇ ಆದರೆ ಅದನ್ನೆದುರಿಸಲು ರಷ್ಯಾ ದೇಶ ಎಲ್ಲ ತಯಾರಿ ನಡೆಸುತ್ತಿದೆ.

ಆಂಧ್ರ-ಕರ್ನಾಟಕ ರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಇಂದಿರಾಗಾಂಧಿಯ ಸರ್ವಾಧಿಕಾರತ್ವವನ್ನು ಸಂಪೂರ್ಣ ಸೋಲಿಸಲಾಗಿದೆ. ಪ. ಬಂಗಾಳ, ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರ್ಕಾರ ಹೆಚ್ಚು ಮತಗಳಿಂದ ಗೆದ್ದು ಬಂದು ತನ್ನ ಐದು ವರ್ಷಗಳ ಅಧಿಕಾರವನ್ನು ಳಿಸಿಕೊಂಡಿದೆ. ಪ. ಬಂಗಾಳ, ತ್ರಿಪುರಾ ಸರ್ಕಾರಗಳ ಜೊತೆಯಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿ ಕೇಂದ್ರ-ರಾಜ್ಯಗಳ ಸಂಬಂಧ ಪುನರ್ವಿಮರ್ಶೆಯಾಗಿ ಹೆಚ್ಚಿನ ಸ್ವಾಯತ್ತತೆ ಮತ್ತು ಧನ ಸಹಾಯ ಸಿಗಬೇಕೆಂದು ಒಮ್ಮತದ ನಿರ್ಣಯ ಕೈಗೊಂಡ ಹಿನ್ನೆಲೆಯಲ್ಲಿ ಇದರ ಕುರಿತು ವರದಿ ಸಲ್ಲಿಸಲು ಕೇಂದ್ರ ಸರ್ಕಾರ ಸರ್ಕಾರಿಯಾ ಸಮಿತಿ ನೇಮಿಸಬೇಕಾಯಿತು. ಕೇಂದ್ರ ಸರ್ಕಾರದ ಆರ್ಥಿಕ-ರಾಜಕೀಯ ನೀತಿಯ ವಿರುದ್ಧ ರೈತ-ಕಾರ್ಮಿಕ, ಯುವ ಜನತೆ ಹಲವಾರು ಹೋರಾಟಗಳನ್ನು ಮಾಡಿದ್ದಾರೆ, ಯಶಸ್ಸು ಪಡೆದಿದ್ದಾರೆ. ರೇಗನ್‌ರ ಯುದ್ಧಕೋರ ನೀತಿಯ ವಿರುದ್ಧ ಮತಪ್ರದರ್ಶನ ನಡೆಸಿದ್ದಾರೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹೆಚ್ಚು ಒಮ್ಮತದಿಂದ ಸಂಯುಕ್ತ ಹೋರಾಟ ನಡೆಸುವಂತಾಗಿದೆ.

ಅಸ್ಸಾಂ-ಪಂಜಾಬ್‌ಗಳಲ್ಲಿ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಕೇಂದ್ರ ಸರ್ಕಾರ ತನ್ನ ವಿಫಲತೆ ತೋರಿಸುತ್ತಿದೆ. ಸಮಸ್ಯೆಗಳ ಪರಿಹಾರಕ್ಕೆ ಧೈರ್ಯದ ನಿಲುವು ತಾಳುತ್ತಿಲ್ಲ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ, ಸಂಘಟಿತ ರೈತ-ಕಾರ್ಮಿಕರ ಬೆಂಬಲದಿಂದ ಈ ಛಿದ್ರಕಾರಿ ಶಕ್ತಿಗಳನ್ನು ಧೈರ್ಯದಿಂದ ಎದುರಿಸುತ್ತಿದೆ. ಪಾರ್ಟಿಯ, ಹಾಗೆಯೇ ವಿದ್ಯಾರ್ಥಿ, ಕಾರ್ಮಿಕ ಕಾರ್ಯಕರ್ತರು ವಿಛಿದ್ರಕಾರಿಗಳ ಗೂಂಡಾಗಿರಿಗೆ ಬಲಿಯಾಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಜನತಾ ಪಾರ್ಟಿ ಅಧಿಕಾರಕ್ಕೆ ಬಂದಿದೆ. ಜನರ ಪರವಾದ ಕೆಲವು ಕಾರ್ಯಗಳನ್ನು ಕೈಗೊಂಡಿದೆ. ಆದರೆ ಬೆಲೆಯೇರಿಕೆ ತಡೆಯುವಲ್ಲಿ, ಭ್ರಷ್ಟಾಚಾರ ನಿಲ್ಲಿಸುವಲ್ಲಿ, ಉತ್ತಮ ಆಡಳಿತ ನೀಡುವಲ್ಲಿ ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ಕೈವಾಡ ತಡೆಯುವಲ್ಲಿ ಜನತಾ ಸರ್ಕಾರ ವಿಫಲವಾಗಿದೆ. ದಾಂಡೇಲಿ, ಹರಿಹರ, ಬೆಂಗಳೂರು ಮತ್ತಿನ್ನಿತರ ಕಾರ್ಮಿಕ ಕೇಂದ್ರಗಳಲ್ಲಿ ನಡೆಯುತ್ತಿರುವ ಕಾರ್ಮಿಕ ಹೋರಾಟಗಳಲ್ಲಿ ಪೋಲೀಸರು ಮಾಲೀಕರಿಗೆ ಸಹಾಯವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಕನಿಷ್ಟ ವೇತನ, ಯೂನಿಯನ್ ಮಾನ್ಯತೆ, ನೌಕರಿ ರಕ್ಷಣೆ, ಸರ್ಕಾರದ ಕಾನೂನುಗಳನ್ನು ಜಾರಿಗೊಳಿಸುವಿಕೆ ಮುಂತಾದವುಗಳ ಕುರಿತು ಸರ್ಕಾರ ಮಧ್ಯ ಪ್ರವೇಶಿಸಿ ಕಾರ್ಮಿಕರಿಗೆ ನ್ಯಾಯ ಕೊಡಿಸುತ್ತಿಲ್ಲ.

ಕ್ಯಾಪಿಟೇಶನ್ ಫೀ ರದ್ದಾಗದೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಸ್ಟೈಫೆಂಡಗಳ ಸಮಸ್ಯೆ ಬಗೆಹರಿದಿಲ್ಲ. ಸರ್ಕಾರಿ ಖಾತೆಗಳಲ್ಲಿ 50 ಸಾವಿರಕ್ಕೂ ಮೇಲ್ಪಟ್ಟು ಖಾಲಿ ಬಿದ್ದಿರುವ ಸ್ಥಾನಗಳನ್ನು ತುಂಬಿರುವುದಿಲ್ಲ. ರೈತರ ಸಮಸ್ಯೆಗಳು ಬೆಳಕು ಕಾಣುತ್ತಿಲ್ಲ. ರೈತ, ಕಾರ್ಮಿಕರ, ವಿದ್ಯಾರ್ಥಿಗಳ ಮೇಲೆ ಹೇರಲ್ಪಟ್ಟ ಖಟ್ಲೆಗಳ ವಾಪಸಾತಿಯಾಗಿಲ್ಲ.

ಇಂಥ ವಿಶಿಷ್ಟ ಪರಿಸ್ಥಿತಿಯಲ್ಲಿ ನಾವು ಐಕ್ಯರಂಗದ ಮೇ ವಿಶೇಷಾಂಕವನ್ನು ಪ್ರಕಟಿಸಿ ದುಡಿಯುವ ಜನತೆಗೆ ಅರ್ಪಿಸುತ್ತಿದ್ದೇವೆ. ದುಡಿಯುವ ಜನತೆಯ ಬೇಡಿಕೆಗಳ, ಹೋರಾಟಗಳ ಮುಖಪತ್ರವಾಗಿ ಐಕ್ಯರಂಗ ಬೆಳೆದು ಬಂದಿದೆ.

ಮೇ ವಿಶೇಷಾಂಕವನ್ನು ಸ್ವೀಕಾರ ಮಾಡುತ್ತಿದ್ದಂತೆಯೇ ದುಡಿಯುವ ವಿಶಾಲ ಜನತೆ, ವಿದ್ಯಾರ್ಥಿ-ಯುವಕರೆಲ್ಲ, ಅಣ್ವಸ್ತ್ರ ಯುದ್ಧದ ವಿರುದ್ಧ, ಕೇಂದ್ರ ಸರ್ಕಾರದ ಬಂಡವಾಳದಾರ-ಭೂಮಾಲಿಕ ಪರ ಆರ್ಥಿಕ ರಾಜಕೀಯ ನೀತಿಯ ವಿರುದ್ಧ, ರಾಜ್ಯ ಸರ್ಕಾರದ ಪೋಲೀಸ್ ಮತ್ತು ಜನವಿರೋಧಿ ನೀತಿಗಳ ವಿರುದ್ಧ ಪ್ರಬಲ ಸಂಘಟನೆ ಕಟ್ಟಿ ಹೋರಾಟ ನಡೆಸಬೇಕೆಂದೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೂ ಅವುಗಳ ಐಕ್ಯತೆಯನ್ನೂ ಇಮ್ಮಡಿಗೊಳಿಸಿ ಜನರ ರಕ್ಷಣೆಗೆ ಮುಂದಾಗಬೇಕೆಂದೂ, ಜನತಾ ಪ್ರಜಾಪ್ರಭುತ್ವ ರಂಗದ ಮೂಲಕ ಸಮತಾವಾದಿ ಕ್ರಾಂತಿಯತ್ತ ಕೆಚ್ಚೆದೆಯಿಂದ ಸಾಗಬೇಕೆಂದೂ ಕೇಳಿಕೊಳ್ಳುತ್ತೇವೆ.

ಕಾ|| ಎಂ. ಆರ್. ವೆಂಕಟರಾಮನ್ ನಿಧನ

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರೂ, ಪಕ್ಷದ ತಮಿಳುನಾಡು ಘಟಕದ ಸೆಕ್ರೆಟಾರಿಯೇಟ್ ಸದಸ್ಯರೂ, ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದ ಹಿರಿಯ ಧುರೀಣರೂ ಆಗಿದ್ದ 78 ವರ್ಷ ವಯಸ್ಸಿನ ಕಾ| ಎಂ. ಆರ್. ವೆಂಕಟರಾಮನ್ ದಿನಾಂ 23-5-1983ರ ಮುಂಜಾನೆ ಕೊನೆಯುಸಿರೆಳೆದರು.

ಕಳೆದ ಸಂಚಿಕೆಯಲ್ಲಷ್ಟೇ ನಾವು ಕಾ| ಎಂ. ಆರ್. ವಿ. ಚೇತರಿಸಿಕೊಳ್ಳುತ್ತಿದ್ದಾರೆಂದು ಪ್ರಕಟಿಸಿದ್ದೆವು. ಆದರೆ ದುರದೃಷ್ಟವಶಾತ್ ಅವರು ನಮ್ಮನ್ನಗಲಿದ್ದಾರೆ. ಕ್ಯಾನ್ಸರ್‌ಗಾಗಿ ಶಸ್ತ್ರಚಿಕಿತ್ಸೆಗೊಳಪಟ್ಟು ಕಳೆದ ತಿಂಗಳು ಖಾಸಗೀ ಆಸ್ಪತ್ರೆಯೊಂದಕ್ಕೆ ಸೇರಿಸಲ್ಪಟ್ಟಿದ್ದ ಕಾ| ಎಂ. ಆರ್. ವಿ. ಅವರು ಅನೇಕ ದಿನಗಳ ಕಾಲ ಪ್ರಜ್ಞಾಹೀನರಾಗಿಯೇ ಇದ್ದರು. ನಂತರ ಅವರು ಕೊಂಚಮಟ್ಟಿಗೆ ಚೇತರಿಸಿಕೊಂಡಿದ್ದರು. ಆದರೆ ಅವರ ಸ್ಥಿತಿ ಮತ್ತೆ ವಿಷಮಗೊಂಡು ದಿನಾಂಕ 23-5-1983ರ ಮುಂಜಾನೆ ನಾಲ್ಕೂ ಮುಕ್ಕಾಲು ಗಂಟೆಗೆ ಸಾವಿಗೀಡಾದರು.

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾ| ಪಿ. ರಾಮಮೂರ್ತಿ ಅವರು ಕಳೆದ ಒಂದು ತಿಂಗಳಿನಿಂದಲೂ ಕಾ| ಎಂ. ಆರ್. ವಿ. ಅವರೊಡನಿದ್ದು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಡಾಕ್ಟರುಗಳು ಕಾ| ಎಂ. ಆರ್. ವಿ. ಅವರನ್ನುಳಿಸಲು ಕೊನೆಯವರೆಗೂ ತೀವ್ರ ಹೋರಾಟ ನಡೆಸಿದರು. ಆದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ.

ಕಾ| ಎಂ. ಆರ್. ವಿ. ಅವರ ಮರಣ ಪಕ್ಷಕ್ಕೂ, ದೇಶದ ಎಡ-ಪ್ರಜಾಸತ್ತಾತ್ಮಕ ಚಳವಳಿಗೂ ತುಂಬಲಾರದ ನಷ್ಟವಾಗಿ ಪರಿಣಮಿಸಿದೆ.

ಕಾ| ಎಂ. ಆರ್. ವಿ. ಅವರು 1938ರಲ್ಲಿ ಮದ್ರಾಸ್ ಹೈಕೋರ್ಟಿನ ಪ್ರಸಿದ್ಧ ವಕೀಲರಾಗಿ ಕಾರ್ಯೋನ್ಮುಖರಾಗಿದ್ದ ಸಂದರ್ಭದಲ್ಲೇ ಕಮ್ಯುನಿಸ್ಟ್ ಚಳವಳಿಯೊಡನೆ ಅವರ ಸಂಬಂಧ ಪ್ರಾರಂಭವಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದ ಕಾ| ಎಂ. ಆರ್. ವಿ. ಅನೇಕ ವರ್ಷಗಳ ಕಾಲ ಜೈಲುವಾಸವನ್ನನುಭವಿಸಿದರು. ತಮ್ಮ ಜೀವಿತದ ಕೊನೆಯವರೆಗೂ ಅವರು ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿ ಉಳಿದಿದ್ದರು. ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ರಾಜ್ಯ ಕಾರ್ಯದರ್ಶಿಯಾಗಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿ ನಂತರ ಸಿ. ಪಿ. ಐ. (ಎಂ)ನ ರಾಜ್ಯ ಕಾರ್ಯದರ್ಶಿಯಾಗಿ 1964ರಿಂದ 1971ರವರೆಗೆ ಏಳು ವರ್ಷಗಳ ಕಾಲ ಇವರು ಪಾರ್ಟಿಗೆ ಸೇವೆ ಸಲ್ಲಿಸಿದರು.

ಕಾ| ಎಂ. ಆರ್. ವೆಂಕಟರಾಮನ್ ಅವರ ನಿಧನಕ್ಕೆ ಐಕ್ಯರಂಗ ಸಂಪಾದಕ ಮಂಡಳಿ ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸಿದೆ.

ಕಾ| ವೆಂಕಟರಾಮನ್ ಅವರು ಯಾವ ತತ್ವಕ್ಕಾಗಿ ತಮ್ಮ ಇಡೀ ಜೀವಮಾನವನ್ನು ಸಮರ್ಪಿಸಿಕೊಂಡಿದ್ದರೋ ಅದನ್ನು ಮುಂದುವರಿಸುವುದೇ ನಾವು ಅವರಿಗೆ ಸಲ್ಲಿಸಬಹುದಾದ ಅತ್ಯಂತ ಮಹತ್ತರವಾದ ಶ್ರದ್ಧಾಂಜಲಿಯಾಗುತ್ತದೆ.

—ಐಕ್ಯರಂಗ
ಸಂಪಾದಕ ಮಂಡಳಿ

ಶುಭಾಶಯಗಳು

'ಐಕ್ಯರಂಗ' ಮೇ ವಿಶೇಷಾಂಕವನ್ನು ನಿಮಗೆ ನೀಡುತ್ತಿರುವ ಈ ಸಂದರ್ಭದಲ್ಲಿ 'ಐಕ್ಯರಂಗ' ಸಂಪಾದಕ ಮಂಡಳಿ ನಿಮಗೆ ತನ್ನ ಕ್ರಾಂತಿಕಾರೀ ಶುಭಾಶಯಗಳನ್ನು ಸಲ್ಲಿಸುತ್ತದೆ.

ಈ ವಿಶೇಷಾಂಕವನ್ನು ಹೊರ ತರುವಲ್ಲಿ ಅನೇಕರು ತಮ್ಮ ಕೈಲಾದ ರೀತಿಯಲ್ಲಿ ಸಹಕರಿಸಿದ್ದಾರೆ, ಜಾಹಿರಾತುಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ, ಲೇಖನ, ಕವನ, ಕಥೆಗಳನ್ನು ನೀಡಿದ್ದಾರೆ. ಇವರೆಲ್ಲರಿಗೂ ನಾವು ಆಭಾರಿಯಾಗಿದ್ದೇವೆ.

ವಿಶೇಷಾಂಕವನ್ನು ಶೀಘ್ರವಾಗಿಯೂ, ಅಂದವಾಗಿಯೂ ಸಕಾಲಕ್ಕೆ ಮುದ್ರಿಸಿಕೊಟ್ಟು ಸಹಕರಿಸಿದ ಕರ್ನಾಟಕ ಪ್ರೆಸ್‌ಮೆನ್ ಅಸೋಸಿಯೇಟ್ಸ್‌ನ ಕಾರ್ಮಿಕ ಬಾಂಧವರಿಗೂ ನಮ್ಮ ಕೃತಜ್ಞತೆಗಳು.

ಓದುಗರಿಗೂ, ಜಾಹೀರಾತುದಾರರಿಗೂ, ಸಹಕರಿಸಿದ ಎಲ್ಲ ಗೆಳೆಯರಿಗೂ ಸಂಪಾದಕ ಮಂಡಳಿ ಮತ್ತೊಮ್ಮೆ ಶುಭಾಶಯಗಳನ್ನು ಸಲ್ಲಿಸುತ್ತದೆ.

ಮಾಲಕರ ಗುಂಡುಗಳು
ಶೋಷಿತರ ಗುಂಡಿಗೆಯ ಸೀಳಿ
ನೆತ್ತರ ಚಿಲುಮೆಗಳ
ಚಿಲ್ಲನೆ ಚಿಮ್ಮಿಸಿದಾಗ
ಚಿಕಾಗೋದ ಬೀದಿಗಳಲ್ಲಿ
ಹೊಸ ಚರಿತೆಯ
ಚಿತ್ತಾರಗಳ ಬರಹ

'ಎಂಟು ಗಂಟೆ ಮಾತ್ರ ಕೆಲಸ'
ಎಂಬ ಗುಡುಗಿನ
ಅಲೆಗಳ ಮೇಲೆ
ಲಕ್ಷ ಲಕ್ಷ ಕಾರ್ಮಿಕರು
ಬೆಂಕಿಯ ಗೆರೆ ಬರೆದಾಗ
ಸುಲಿಗೆಯ ಕೋಟೆಗೆ
ಸಿಡಿಲುಗಳ ಬಡಿತ

ಹಗಲಿರುಳು ದುಡಿಮೆ
ತುಂಬದ ತುತ್ತಿನ ಚೀಲ
ಹಸಿವಿನುರಿಯಲ್ಲಿ
ಕೆಂಡಗಳು ಮಿನುಗಿದಾಗ
ಹೋರಾಟಗಳ ಜನನ

ದುಡಿಯುವ ಜನತೆಯ
ಎದೆಯಾಳದೊಳಗೆ
ವಿಶ್ವಭಾವನೆಯು ಜೀವ
ಸಮರಶೀಲತೆಯ ಭಾವ
ಕುಡಿಯೊಡೆಯ ತೊಡಗಿದಾಗ
ಕ್ರಾಂತಿ ಸೂರ್ಯನ ಕಿರಣ ಕಾಣಲು
ಕಾದು ನಿಂತಿತು 'ಮೇ ದಿನ'

'ಉದಯ'

ಆಳುವ ವರ್ಗಗಳ ವಿಚ್ಛಿದ್ರಕಾರಿ ತಂತ್ರಗಳನ್ನು ಸೋಲಿಸಿರಿ

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಂದಿನಿಂದ ಆಳುವ ವರ್ಗಗಳ ಸರ್ಕಾರಗಳು ನಮ್ಮ ದೇಶದಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ನಿರ್ಮಿಸುವ ಧೋರಣೆಯನ್ನು ಅನುಸರಿಸಿಕೊಂಡು ಬಂದುದರಿಂದ ಆರ್ಥಿಕ ಬಿಕ್ಕಟ್ಟು ತೀವ್ರವಾಗಿ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಬೆಲೆ ಏರಿಕೆ, ತೆರಿಗೆ ಏರಿಕೆ, ನಿರುದ್ಯೋಗ, ಹಣದುಬ್ಬರ, ಬಡತನ, ಕಪ್ಪುಹಣ, ಕಾಳಸಂತೆ, ಕಳ್ಳಸಾಗಾಣಿಕೆ, ಭ್ರಷ್ಟಾಚಾರ–ಇತ್ಯಾದಿ ಪಿಡುಗುಗಳು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿವೆ. ಇನ್ನೊಂದು ಕಡೆ ಏಕಸ್ವಾಮ್ಯಸ್ಥ ಬಂಡವಾಳಗಾರರ, ಹಿರಿಯ ಬಂಡವಾಳಗಾರರ ಆದಾಯ, ಆಸ್ತಿಗಳು ಅನೇಕ ಪಟ್ಟು ಹೆಚ್ಚಾಗುತ್ತಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನ್ದಾರರ ದಮನಕೋರ ದಬ್ಬಾಳಿಕೆ ಮುಂದುವರೆದಿದೆ.

ಈ ಹಿನ್ನೆಲೆಯಲ್ಲಿ 'ನಮ್ಮ ದೇಶದ ಕಾರ್ಮಿಕ ಚಳುವಳಿಯಲ್ಲಿ ಆರ್ಥಿಕವಾದವು ತುಂಬಿದ್ದು ಹಲವು ಟೀಕೆಗಳಿಗೆ ಅದು ಗುರಿಯಾಗಿದ್ದಿತು. ಕಾರ್ಮಿಕ ಸಂಘಗಳು ತೀರಾ ಸ್ವಾರ್ಥಪರತೆಯಿಂದ ಕೂಡಿಯುವೆಂದು, ಸಂಬಳ ಹೆಚ್ಚಳ, ತುಟ್ಟಿಭತ್ತೆಯ ಹೆಚ್ಚಳ, ಬೋನಸ್‌ಗಳನ್ನು ಬಿಟ್ಟರೆ, ಜನಸಾಮಾನ್ಯರ–ಇತರ ಜನವಿಭಾಗಗಳ ಕಷ್ಟನಷ್ಟಗಳ ಬಗ್ಗೆ, ದೇಶದ ಸಮಸ್ಯೆಗಳ ಬಗ್ಗೆ ಏನೇನೂ ಕಾಳಜಿ–ಇಲ್ಲ ಎಂಬ ಧಾಟಿಯ ಟೀಕೆಗಳು ಹಲವು ವೇದಿಕೆಗಳಿಂದ ಕೇಳಿ ಬರುತ್ತಿದ್ದುವು. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಲೇಖನಗಳ ರೂಪದಲ್ಲಿ. ಬಂಡವಾಳಗಾರರ ಹಿತರಕ್ಷಕರ ಭಾಷಣಗಳಲ್ಲಿ ಈ ಟೀಕೆಗಳು ವ್ಯಕ್ತವಾಗುತ್ತಿದ್ದುವು. ಕಾರ್ಮಿಕ ಚಳುವಳಿಯು ಆರ್ಥಿಕವಾದದ ಚೌಕಟ್ಟನ್ನು ದಾಟಿ ರೈತರ ಮತ್ತು ಇತರ ಜನವಿಭಾಗದ ಮತ್ತು ದೇಶವನ್ನು ಬಾಧಿಸುತ್ತಿರುವ ಸಮಸ್ಯೆಗಳತ್ತ ಗಮನ ಹರಿಸಲಿ ಎಂಬುದು ಸಹೃದಯ ಟೀಕಾಕಾರರ ಉದ್ದೇಶವಾದರೆ, ಕಾರ್ಮಿಕ ಚಳುವಳಿಯ ವಿರುದ್ಧ ಇತರ ಜನವಿಭಾಗವನ್ನು ಎತ್ತಿಕಟ್ಟುವುದೇ ಆಳುವ ವರ್ಗಗಳ ಹಸ್ತಕರಾದ ಟೀಕಾಕಾರರ ಉದ್ದೇಶವಾಗಿದ್ದಿತು.

ಕಾರ್ಮಿಕ-ನೌಕರರ ಸಂಬಳ ಹೆಚ್ಚಳದಿಂದ ಬೆಲೆಏರಿಕೆಯುಂಟಾಗುತ್ತದೆ ಎಂಬ ಭಾವನೆಯನ್ನು ಬೆಳೆಸುವ ಪ್ರಯತ್ನ ನಡೆಯಿತು. ಕೃಷಿ ಕೂಲಿಕಾರರ ಅಸಂಘಟಿತ ಕಾರ್ಮಿಕರ ಕೂಲಿಯನ್ನು ಸಂಘಟಿತ ಕಾರ್ಮಿಕರ ಕೂಲಿಗೆ, ಬ್ಯಾಂಕ್-ವಿಮಾ ನೌಕರರ ಸಂಬಳಕ್ಕೆ ಹೋಲಿಸಲಾಯಿತು. ಬೆಲೆಏರಿಕೆಗೆ ಮೂಲ ಕಾರಣಗಳು ಕೇಂದ್ರ ಸರ್ಕಾರವು ಅನುಸರಿಸುವ ಕರಾಕರಣ (ತೆರಿಗೆ ಹಾಕುವ) ನೀತಿ, ಕೊರತೆ ಬಜೆಟ್ ನೀತಿ, ಏಕಸ್ವಾಮ್ಯಸ್ಥ ಬಂಡವಾಳಗಾರರು, ಬಹುರಾಷ್ಟ್ರೀಯ ಸಂಸ್ಥೆಗಳು, ಸಗಟು ವ್ಯಾಪಾರಿಗಳು, ಕಾಳಸಂತೆಕೋರರು, ದಾಸ್ತಾನುಗಾರರು, ಸಟ್ಟಾ ಬಜಾರಿನವರು ನಮ್ಮ ದೇಶದ ಜನರನ್ನು ಕೊಳ್ಳೆಹೊಡೆದು ಸುಲಿಗೆ ಮಾಡಲು ಅನುಸರಿಸುವ ಕ್ರಮಗಳಿಂದ ಬೆಲೆಗಳು ಏರುತ್ತವೆ ಎಂಬ ಸತ್ಯಸಂಗತಿಗಳನ್ನು ಮರೆಮಾಚಲು ಮೇಲೆ ಹೇಳಿದ ಭಾವನೆಗಳನ್ನು ಹರಡುವ ಪ್ರಯತ್ನಗಳನ್ನು ಮಾಡಲಾಯಿತು. ಜನಸಾಮಾನ್ಯರು ತಮ್ಮ ನಿಜವಾದ ಶೋಷಕರು ಯಾರು ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗದಂತೆ ಮಾಡಿ ಕೆಲವರಿಗೆ ಸ್ವಲ್ಪ ಹೆಚ್ಚು ಸಂಬಳ ಸಿಕ್ಕುವುದು ಕೃಷಿ ಕೂಲಿಕಾರರ ಮತ್ತು ಅಸಂಘಟಿತ ಕಾರ್ಮಿಕರ ಆರ್ಥಿಕ ದುಸ್ಥಿತಿಗೆ ಕಾರಣ ಎಂದು ನಂಬಿಸುವ ಪ್ರಯತ್ನ ಇದಾಗಿದೆ.

ವರ್ಗ ಹೋರಾಟದಲ್ಲಿ ವಿಶ್ವಾಸವುಳ್ಳ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮ್ಮೇಳನವು 1970ರ ಮೇ ತಿಂಗಳಿನಲ್ಲಿ ಕಲ್ಕತ್ತದಲ್ಲಿ ನಡೆದು 'ಭಾರತದ ಕಾರ್ಮಿಕ ಸಂಘಗಳ ಕೇಂದ್ರ (ಸಿ.ಐ.ಟಿ.ಯು.)ದ ಸ್ಥಾಪನೆಯಾಯಿತು. 'ಐಕ್ಯತೆ ಮತ್ತು ಹೋರಾಟ' ತತ್ವವನ್ನು ಸಿ.ಐ.ಟಿ.ಯು. ತನ್ನ ಧೋರಣೆಯನ್ನಾಗಿ ಅಂಗೀಕರಿಸಿತು. ರೈತ–ಕಾರ್ಮಿಕರ ಸಖ್ಯತೆಯ ಬೆಳವಣಿಗೆ, ರೈತರ - ಕೃಷಿಕೂಲಿಕಾರರ ಬೇಡಿಕೆ ಮತ್ತು ಚಳುವಳಿಗೆ ಕಾರ್ಮಿಕರು ಕ್ರಿಯಾಶೀಲ ಬೆಂಬಲ ಕೊಡಬೇಕು. ಇವುಗಳನ್ನು ತನ್ನ ಸಂವಿಧಾನದಲ್ಲಿ ಅಳವಡಿಸಿಕೊಂಡಿತು.

1970ರ ನಂತರ ಕೈಗಾರಿಕಾ ಘಟಕಗಳಲ್ಲಿ, ಕೈಗಾರಿಕಾವಾರಾಗಿ. ರಾಜ್ಯವ್ಯಾಪ್ತಿಯಾಗಿ ಅನೇಕ ಐಕ್ಯಹೋರಾಟಗಳು, ಐಕ್ಯ ಮುಷ್ಕರಗಳು ನಡೆದುವು. 1974ರ ಮೇಯಲ್ಲಿ ನಡೆದ ರೈಲ್ವೆ ಕಾರ್ಮಿಕರ ಮುಷ್ಕರವು ಪ್ರಪಂಚದಲ್ಲಿಯೇ ಅತಿ ದೀರ್ಘವಾದ ರೈಲ್ವೆ ಮುಷ್ಕರವಾಗಿ ದಾಖಲೆಯನ್ನು ಸ್ಥಾಪಿಸಿತು. ರೈಲ್ವೆ ಕಾರ್ಮಿಕರ ನೂರಕ್ಕಿಂತಲೂ ಹೆಚ್ಚು ಕಾರ್ಮಿಕ ಸಂಘಗಳು (ಐ.ಎನ್.ಟಿ.ಯು.ಸಿ.ಯ ಹೊರತಾಗಿ) 'ರೈಲ್ವೆ ಕಾರ್ಮಿಕರ ಸಂಘರ್ಷದ ರಾಷ್ಟ್ರೀಯ ಸಮನ್ವಯ ಸಮಿತಿಯ' ಲಾಂಛನದಡಿಯಲ್ಲಿ ಒಂದಾಗಿ ಈ ಚಾರಿತ್ರಿಕ ಐಕ್ಯ ಮುಷ್ಕರವನ್ನು ನಡೆಸಿದುವು. ಕಾರ್ಮಿಕ ಚಳುವಳಿಯಲ್ಲಿ 'ವೈಟ್ ಕಾಲರ್' ಮತ್ತು 'ಬ್ಲೂ ಕಾಲರ್' ದುಡಿಮೆಗಾರರ ಚಳುವಳಿಯ ನಡುವಿದ್ದ ಭೇದ ಅಳಿಸಿಹೋಯಿತು.

ನಡೆಯುತ್ತಿದ್ದ ರೈಲ್ವೆ ಕಾರ್ಮಿಕರ ಮುಷ್ಕರಕ್ಕೆ ಸೌಹಾರ್ದ ಬೆಂಬಲ ನೀಡಲು ಭಾರತದ ಕಾರ್ಮಿಕ ವರ್ಗವು 1974ರ ಮೇ 15ರಂದು ದೇಶಾದ್ಯಂತ ಯಶಸ್ವೀ ಸಾರ್ವತ್ರಿಕ ಮುಷ್ಕರವನ್ನು ನಡೆಸಿ ಒಂದು ಹೊಸ ದಾಖಲೆಯನ್ನು ಸ್ಥಾಪಿಸಿತು. ಈ ಬೆಳವಣಿಗೆಗಳು ಆಳುವ ವರ್ಗಗಳ ಎದೆ ನಡುಗಿಸಿದುವು. ಕಾಂಗ್ರೆಸ್ ಸರ್ಕಾರಕ್ಕೆ ಕಡುಕೋಪ. ಟಾಟಾ, ಬಿರ್ಲಾರ ಕಣ್ಣು ಕೆಂಪಾಯಿತು. ರೈಲ್ವೆ ಮುಷ್ಕರವನ್ನು ದಮನಮಾಡಲು ಹಿಂದೆಂದೂ ಕಂಡರಿಯದ ಪ್ರಮಾಣದ, ಸ್ವರೂಪದ, ಪಾಶವೀ ಕ್ರಮಗಳನ್ನು ಕಾಂಗ್ರೆಸ್ ಸರ್ಕಾರವು ಅನುಸರಿಸಿತು. ಈ ಹೇಯ ಕೃತ್ಯದಲ್ಲಿ ಎಸ್. ಎ. ಡಾಂಗೆ ಕಾಂಗ್ರೆಸ್ ಸರ್ಕಾರಕ್ಕೆ ನೆರವಾದರು.

ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿರುವ ವಿಶ್ವ ಬ್ಯಾಂಕನ್ನು ಮೆಚ್ಚಿಸಲು 1974ರ ಜುಲೈಯಲ್ಲಿ ವೇತನ ಸ್ತಂಭನ ಧೋರಣೆಯನ್ನು ಘೋಷಿಸಿದ ನಂತರ ಆಗಸ್ಟ್ ತಿಂಗಳಿನಲ್ಲಿ ನವದೆಹಲಿಯಲ್ಲಿ 'ವೇತನ ಸ್ತಂಭನದ ವಿರುದ್ಧ ಗುಡಿಯುವ ಜನತೆಯ ರಾಷ್ಟ್ರೀಯ ಸಮಾವೇಶವು' ನಡೆಯಿತು. ಈ ಸಮಾವೇಶವನ್ನು ಸಂಘಟಿಸುವ ಕಾರ್ಯದಲ್ಲಿ 'ಅಖಿಲ ಭಾರತ ವಿಮಾ ನೌಕರರ ಸಂಘ'ವು (ಎ.ಐ.ಐ.ಇ.ಎ.) ಮುಖ್ಯ ಪಾತ್ರವನ್ನು ವಹಿಸಿತು. ಸಮಾವೇಶದ ಕರೆಯ ಪ್ರಕಾರ ದೇಶಾದ್ಯಂತ ಕಾಂ

ಸಿ. ನಂಜುಡಪ್ಪ

ಗ್ರೆಸ್ ಸರ್ಕಾರದ ವೇತನಸ್ತಂಭನ ಧೋರಣೆಯ ವಿರುದ್ಧ ಕಾರ್ಮಿಕ ಸಂಘಗಳ ಐಕ್ಯ ಕಾರ್ಯಾಚರಣೆ ನಡೆಯಿತು. ಕ್ಷಾತ್ರಶೀಲ ಕಾರ್ಮಿಕ ಚಳುವಳಿಯಲ್ಲಿ ಅಖಿಲ ಭಾರತ ವಿಮಾ ನೌಕರರ ಸಂಘವು ಭಾಗವಹಿಸುತ್ತಿದ್ದುದರಿಂದ ಕಾಂಗ್ರೆಸ್ ಸರ್ಕಾರವು ಈಗ ಜೀವವಿಮಾ ನಿಗಮವನ್ನು ಐದು ಹೋಳಾಗಿ ಮಾಡಹೊರಟಿದೆ. ವಿಮಾ ನೌಕರರ ಐಕ್ಯತೆಯನ್ನು ಒಡೆಯಬೇಕೆಂಬುದು ಈ ಹೆಜ್ಜೆಯಿಂದ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ ಸರ್ಕಾರದ ಬತ್ತಳಿಕೆಯಲ್ಲಿರುವ ವಿಚ್ಛಿದ್ರಕಾರಿ ಅಸ್ತ್ರಗಳಲ್ಲಿ ಇದು ಹೊಸದಾಗಿದೆ. ಕಾರ್ಮಿಕ ಚಳುವಳಿಯು ಈ ದಾಳಿಯನ್ನು ವಿರೋಧಿಸಿದೆ.

1975ರ ಜೂನ್ 26ರಂದು ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿದ ನಂತರ ಇಂದಿರಾಗಾಂಧಿಯವರು ಹೊಸ ಕಾರ್ಮಿಕ ವಿರೋಧಿರಾಗವನ್ನು ಪ್ರಾರಂಭಿಸಿದರು: 'ನೋಡಿ, ನಮ್ಮ ಹಳ್ಳಿಗಳಲ್ಲಿರುವ ರೈತರು, ಗ್ರಾಮೀಣ ಬಡವರು ಎಷ್ಟು ಕಷ್ಟದಲ್ಲಿದ್ದಾರೆ! ಅದೇ ಸಮಯದಲ್ಲಿ ಪೇಟೆಯಲ್ಲಿರುವ ಕಾರ್ಮಿಕರಿಗೆ ತಿಂಗಳು ತಿಂಗಳಿಗೆ ಸಂಬಳ ಬರುತ್ತೆ. ಬೆಲೆ ಏರಿಕೆಯನ್ನು ಸರಿದೂಗಿಸಲು ತುಟ್ಟಿಭತ್ತೆ ಸಿಕ್ಕುತ್ತೆ. ಬೋನಸ್, ರಜೆ ಸಂಬಳ, ಭವಿಷ್ಯ ನಿಧಿ, ಇ.ಎಸ್.ಐ., ಗ್ರಾಚ್ಯುಟಿ ಸಿಕ್ಕುತ್ತೆ–ಇದು ಅವರ ಮಾತಿನ ಧಾಟಿ. ಗ್ರಾಮೀಣ ಬಡವರ ಕಷ್ಟಪರಂಪರೆಗೆ ಪೇಟೆಯ ಸಂಘಟಿತ ಕಾರ್ಮಿಕರೇ ಕಾರಣ ಎಂದು ಅವರ ಮಾತನ್ನು ಕೇಳುವವರು ಲೆಕ್ಕಹಾಕಬೇಕು. ಇದು ಹಳ್ಳಿಯ ರೈತರನ್ನು ಸಂಘಟಿತ ಕಾರ್ಮಿಕರ ಮೇಲೆ ಎತ್ತಿ ಕಟ್ಟಿ, ಕಾರ್ಮಿಕ–ರೈತರ ಸಖ್ಯತೆಯ ಬೆಳವಣಿಗೆಯನ್ನು ಅಡ್ಡಿ ಮಾಡುವ ತಂತ್ರ.

1977ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬಂದ. ಜನತಾ ಪಕ್ಷದ ಸರ್ಕಾರವು 'ಕೈಗಾರಿಕಾ ಸಂಬಂಧಗಳ ಮಸೂದೆ' ಎಂಬ ಕಾರ್ಮಿಕ ವಿರೋಧಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿತು. ಇದರ ವಿರುದ್ಧವಾಗಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶವೊಂದು ನಡೆಯಿತು. ಈ ಸಮಾವೇಶದಲ್ಲಿ ಐ.ಎನ್.ಟಿ.ಯು.ಸಿ.ಯೂ ಭಾಗವಹಿಸಿತು. ಜನತಾ ಪಕ್ಷದಲ್ಲಿದ್ದ ಕಾರ್ಮಿಕ ಮುಖಂಡರೇ ಈ ಮಸೂದೆಯನ್ನು ವಿರೋಧಿಸಿದರು! ಈ ಮಸೂದೆ ಶಾಸನವಾಗಲಿಲ್ಲ.

ಮೊರಾರ್ಜಿ ದೇಸಾಯಿಯವರ ಸರ್ಕಾರವು 'ಆದಾಯ-ಸಂಬಳ'ವನ್ನು ಅಭ್ಯಸಿಸಲು ನೇಮಿಸಿದ ಭೂತಲಿಂಗಂ ಸಮಿತಿಯು ತೀರಾ ಕಾರ್ಮಿಕ ವಿರೋಧಿ ವರದಿಯನ್ನು ಕೊಟ್ಟಿತು.

ಕಡಿಮೆ ಕೂಲಿಯನ್ನು ಹೆಚ್ಚು ಸಂಬಳವನ್ನೂ ಹೋಲಿಸಿ ಅವುಗಳಿಗಿರುವ ಅಂತರವನ್ನು ಕಡಿಮೆ ಮಾಡಬೇಕೆಂದು ವಾದಿಸಲಾಯಿತು. ವಿವಿಧ ವಿಭಾಗಗಳ ಕಾರ್ಮಿಕ ನೌಕರರ ಸಂಬಳವನ್ನು ಹೋಲಿಸುವುದರ ಬದಲು ವಿವಿಧ ವರ್ಗಗಳ ಆದಾಯಗಳನ್ನು ಹೋಲಿಸಿ ಅವುಗಳಲ್ಲಿರುವ ಅಂತರಗಳನ್ನು ಹೋಗಲಾಡಿಸಬೇಕೆಂದು, ಟಾಟಾ–ಬಿರ್ಲಾರಂತಹ ಏಕಸ್ವಾಮ್ಯಸ್ಥ ಬಂಡವಾಳಗಾರರ ಆದಾಯಗಳನ್ನು ಕೃಷಿ ಕೂಲಿಕಾರರ ಆದಾಯಕ್ಕೆ ಹೋಲಿಸಿ ಅವುಗಳಿಗಿರುವ ಅಂತರವನ್ನು ಕಡಿಮೆ ಮಾಡಬೇಕೆಂದು ಕಾರ್ಮಿಕ ಚಳುವಳಿಯು ಪ್ರತಿಪಾದಿಸಿತು.

ಕಾರ್ಮಿಕ ಚಳುವಳಿಯು ಇತ್ತೀಚಿನ ವರ್ಷಗಳಲ್ಲಿ ತನ್ನ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ದಿಸೆಯಲ್ಲಿ, ಕೆಲವು ಹೆಜ್ಜೆಗಳನ್ನಿರಿಸಿದೆ.

1981ರ ಜೂನ್ 4ರಂದು ಮುಂಬಯಿಯಲ್ಲಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶವು ನಡೆದು **ದೇಶದ ಜನರ ಸಮಸ್ಯೆಗಳನ್ನು ಚರ್ಚಿಸಿ** ಬೇಡಿಕೆಗಳ ಪಟ್ಟಿಯೊಂದನ್ನು ರೂಪಿಸಿ ನಾಲ್ಕು ಹಂತಗಳ ಚಳುವಳಿಯ ಕಾರ್ಯಕ್ರಮಕ್ಕೆ ಕರೆಕೊಟ್ಟಿತು ಎಲ್ಲರನ್ನೂ ಬಾಧಿಸುತ್ತಿರುವ ಬೆಲೆ ಏರಿಕೆಯನ್ನು ತಡೆಯಬೇಕು ಎಂಬುದು ಮೊದಲನೆಯ ಬೇಡಿಕೆಯಾದರೆ, ಕೃಷಿ ಉತ್ಪನ್ನಗಳಿಗೆ, ರೈತರಿಗೆ ಲಾಭದಾಯಕ ಬೆಲೆ ಸಿಕ್ಕಬೇಕು, ಬೇಸಾಯಕ್ಕೆ ಉಪಯೋಗಿಸುವ ಕೈಗಾರಿಕಾ ಉತ್ಪನ್ನಗಳನ್ನು ರಿಯಾಯಿತಿ (ಸಬ್ಸಿಡೈಸ್ಡ್) ಬೆಲೆಗೆ ಸಕಾಲದಲ್ಲಿ ಒದಗಿಸಬೇಕು, ಕೃಷಿ ಕೂಲಿಕಾರರ ಕೂಲಿ ಹೆಚ್ಚಾಗಬೇಕು ಎಂಬುವು ಎರಡನೆಯ ಬೇಡಿಕೆ. ರಾಷ್ಟ್ರೀಯ ಭದ್ರತಾ ಶಾಸನ ರದ್ದಾಗಬೇಕು ಮೊದಲಾದ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಬೇಡಿಕೆ. ಅನಂತರ ಕಾರ್ಮಿಕರ ಇತರ ಬೇಡಿಕೆಗಳು. – ಈ ಬೇಡಿಕೆಗಳಿಗಾಗಿ 1981ರ ನವೆಂಬರ್ 23ರಂದು ನವದೆಹಲಿಯಲ್ಲಿ ಐದು ಲಕ್ಷಕ್ಕೂ ಮೀರಿದ ಕಾರ್ಮಿಕ–ನೌಕರರ ಮೆರವಣಿಗೆ, ಸಂಸತ್ ಭವನದ ಮುಂದೆ ಬೃಹತ್ ಪ್ರದರ್ಶನ, 1981ರ ಜನವರಿ 19ರಂದು ದೇಶಾದ್ಯಂತ ಐತಿಹಾಸಿಕವಾದ ಸಾರ್ವತ್ರಿಕ ಮುಷ್ಕರ ನಡೆದುವು. ಈ ಐತಿಹಾಸಿಕ ಮುಷ್ಕರದಲ್ಲಿ ರೈತರೂ, ಕೃಷಿ ಕೂಲಿಕಾರರು ಪಾಲ್ಗೊಂಡರು. ಮುಷ್ಕರದಂದು ಮತ್ತು ಹಿಂದಿನ ದಿವಸ ಐವತ್ತು ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು, ಕಾರ್ಯಕರ್ತರನ್ನು, ಮುಖಂಡರನ್ನು ಬಂಧಿಸಲಾಯಿತು, ಮುಷ್ಕರದಂದು ಬಿಹಾರ, ಉತ್ತರ ಪ್ರದೇಶಗಳಲ್ಲಿ, ತಮಿಳುನಾಡುಗಳಲ್ಲಿ ಪೋಲೀಸರು ಗೋಲೀಬಾರು ಮಾಡಿ ಹಲವರನ್ನು ಕೊಂದರು. ಕಾಂಗ್ರೆಸ್ ಸರ್ಕಾರಗಳು ಈ ಐತಿಹಾಸಿಕ ಮುಷ್ಕರವನ್ನು ವಿಫಲಗೊಳಿಸಲು ಸರ್ವ ಪ್ರಯತ್ನಗಳನ್ನೂ ಮಾಡಿದರೆ ಇನ್ನೊಂದು ಕಡೆ ಪಶ್ಚಿಮ ಬಂಗಾಳ, ತ್ರಿಪುರಗಳ ಎಡರಂಗ ಸರ್ಕಾರಗಳು, ಆಗ ಕೇರಳದಲ್ಲಿದ್ದ ಕಾಮ್ರೇಡ್ ಇ. ಕೆ. ನಯನಾರರ ಸರ್ಕಾರ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿದುವು. ಆ ರಾಜ್ಯಗಳಲ್ಲಿ ಯಶಸ್ವಿ ಬಂದ್ ನಡೆಯಿತು

ಈ ಹೋರಾಟಗಳಿಂದ ಕಾರ್ಮಿಕ ವರ್ಗವನ್ನು ಪ್ರತ್ಯೇಕಿಸಲು, ರೈತರನ್ನು ಸಂಘಟಿತ ಕಾರ್ಮಿಕರ ಮೇಲೆ ಎತ್ತಿ ಕಟ್ಟಲು ಸತತ ಪ್ರಯತ್ನಗಳನ್ನು ನಡೆಸುತ್ತಿದ್ದ ಬಂಡವಾಳಗಾರರ ಪರವಾದ ಟೀಕಾಕಾರರ, ಇಂದಿರಾಗಾಂಧಿಯವರ ಬಾಯಿಕಟ್ಟಿ ಹೋಯಿತು. ಕಾರ್ಮಿಕ ರೈತರ ಸಖ್ಯತೆಯ ಬೆಳವಣಿಗೆ ಮುಂದುವರೆಯಿತು.

ಬೆಳೆಯುತ್ತಿರುವ ಕಾರ್ಮಿಕ ವರ್ಗದ ಐಕ್ಯತೆ, ಕಾರ್ಮಿಕ ರೈತರ ಸಖ್ಯತೆಗಳನ್ನು ತಡೆಯಲು ಮುಂದೇನು ಮಾಡಬೇಕೆಂದು ಆಳುವ ವರ್ಗಗಳಿಗೆ ಚಿಂತೆ.

ಮುಂಬಯಿ ಸಮಾವೇಶದಲ್ಲಿ ಮೂಡಿ ಬಂದಿದ್ದ ಬ್ಲೂ ಕಾಲರ್ ಮತ್ತು ವೈಟ್ ಕಾಲರ್ ಐಕ್ಯತೆಯನ್ನು ಒಡೆಯಲು ಸಮಾವೇಶ ನಡೆದ ಕೆಲವೇ ವಾರಗಳಲ್ಲಿ ಅಗತ್ಯಸೇವಾ ನಿರ್ವಹಣಾ ಸುಗ್ರೀವಾಜ್ಞೆಯನ್ನು ಹೊರಡಿಸಿ ವೈಟ್ ಕಾಲರ್ ನೌಕರರಿಗೆ ಹಾಕಿದ ಬೆದರಿಕೆ ಸ್ವಲ್ಪಮಟ್ಟಿಗೆ ಫಲಕೊಟ್ಟಿತು.

(6ನೇ ಪುಟ ನೋಡಿ)

ಕಮ್ಯೂನಿಸ್ಟ್ ಪ್ರಣಾಳಿಕೆ : 135 ವರ್ಷ

ಪುಸ್ತಕ ಓದುತ್ತಿದ್ದ ಖೈದಿ ನಿಧಾನವಾಗಿ ತಲೆಯೆತ್ತಿದ, ಕಿಟಕಿಯ ಜಾಲರಿಯ ಮೂಲಕ ದೃಷ್ಟಿ ಹರಿಸಿದ "ಇನ್ನೇನು ಅವರು ಬಂದುಬಿಡುತ್ತಾರೆ" ಎಂದುಕೊಂಡ. ಸೆರೆಮನೆಯ ದೊಡ್ಡ ಕಬ್ಬಿಣದ ಬಾಗಿಲು ತೆರೆದ ಸದ್ದಾಯಿತು. ಆಗ ತನ್ನ ಕಲ್ಪನಾ ರಾಜ್ಯದಿಂದ ಆತ ಎಚ್ಚೆತ್ತ.

ಹೊಳಪಿನ ಸಮವಸ್ತ್ರ ತೊಟ್ಟ ಬ್ರಿಟಿಷ್ ಅಧಿಕಾರಿಯೊಬ್ಬ ಒಳಬರುತ್ತ ಹೇಳಿದ "ಸಿದ್ಧರಾಗಿ ಸರ್ದಾರ್‌ಜಿ, ನಿಮ್ಮ ವಿಚಾರಣೆಗಾಗಿ ಇಡೀ ದೇಶವೇ ಕಾಯುತ್ತಿದೆ". ಇಬ್ಬರು ಗಾರ್ಡುಗಳು ಬಾಗಿಲಿನ ಬಳಿ ಕಾವಲು ನಿಂತರು.

ಅಂದು 1930 ಜನವರಿ 21ರಂದು ಭಗತ್‌ಸಿಂಗ್ ಮತ್ತವರ ಸಂಗಾತಿಗಳು ನ್ಯಾಯಾಲಯಕ್ಕೆ ಕೆಂಪು ಸ್ಕಾರ್ಫ್ ತೊಟ್ಟು ಬಂದಿದ್ದರು. ಅಪರಾಧಿ ಕಟಕಟೆಯಲ್ಲಿ ನಿಂತ ಕೂಡಲೇ "ಸಿರ್ ಫೋಷಿ ಕಿ ತಮನ್ನಾ ಅಬ್ ಹಮಾರೇ ದಿಲ್ ಮೇ ಹೈ" (ನಮ್ಮ ತಲೆಗಳನ್ನು ಮಾರಲು ನಮ್ಮ ಹೃದಯ ಕಾತರಿಸುತ್ತಿದೆ) ಎಂಬ ಸುಪ್ರಸಿದ್ಧ ಹಾಡನ್ನು ಹಾಡಿದ ನಂತರ "ಸಮಾಜವಾದಿ ಕ್ರಾಂತಿ ಚಿರಾಯುವಾಗಲಿ !" "ಕಮ್ಯುನಿಸಂ ಜಿಂದಾಬಾದ್ " ಎಂಬ ಘೋಷಣೆಗಳನ್ನು ಕೂಗಿದರು.

ಹಾಗಾದರೆ,

ಇಡೀ ವಿಶ್ವದ ಮೇಲೆ ಪ್ರಭಾವ ಬೀರಿದ್ದ 'ಕಮ್ಯುನಿಸಂ'ನ ಮೂಲ ಪ್ರೇರಣೆ, ಪ್ರಣಾಳಿಕೆ ಯಾವುದು ?

25-2-1848.

ಯುರೋಪಿನ ಬಂಡವಾಳಶಾಹಿಗಳು ಭೀಕರ ಸಿಂಹ ಸ್ವಪ್ನಕ್ಕೆ ಗುರಿಯಾದ ದಿನ. ಇಡೀ ಜಗತ್ತನ್ನೇ ಬೆರಗಾಗಿಸಿದ, ವಿಶ್ವದ ಮೂರನೇ ಒಂದು ಭಾಗದಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿದ ಜರ್ಮನ್ ಭಾಷೆಯ ಸಣ್ಣ ಪುಸ್ತಕ ಇಂಗ್ಲೆಂಡಿನ ಮುದ್ರಣಾಲಯದಿಂದ ಹೊರಬಿತ್ತು. 'ಅದೇ ಕಮ್ಯುನಿಸ್ಟ್ ಪ್ರಣಾಳಿಕೆ'.

"ಇಡೀ ಜಗತ್ತಿನ ಕಾರ್ಮಿಕರೇ ಒಂದಾಗಿ, ನೀವು ನಿಮ್ಮ ಸಂಕೋಲೆಗಳನ್ನು ಹೊರತು ಬೇರೇನನ್ನೂ ಕಳೆದುಕೊಳ್ಳಲಾರಿರಿ" ಎಂದು ದೃಢವಾಗಿ ಸಾರಿದ ಪ್ರಣಾಳಿಕೆಗೆ ಈಗ 135 ವರ್ಷ.

ಅಂದು ಇಡೀ ಯುರೋಪಿನ ಶ್ರಮಜೀವಿ ವರ್ಗ ಆಳುವವರ ಕೈಯಲ್ಲಿ ಸಿಕ್ಕಿ ತತ್ತರಿಸುತ್ತಿದ್ದ ದಿನಗಳಲ್ಲಿ ತಮ್ಮ 'ಪ್ರಣಾಳಿಕೆಯನ್ನು ಎತ್ತಿ ಹಿಡಿದಾಗ ಯುರೋಪ್ "ಕಮ್ಯುನಿಸಂ" ಎನ್ನುವ ಸಿಂಹಸ್ವಪ್ನದ ಹಿಡಿತಕ್ಕೆ ಸಿಕ್ಕಿಬಿತ್ತು. ಆದರೆ ಇಂದು ಕಮ್ಯುನಿಸಂ ಸ್ವತಃ ಒಂದು ಶಕ್ತಿಯಾಗಿದೆ ಎಂದು ಜಗತ್ತಿನ ರಾಷ್ಟ್ರಗಳೆಲ್ಲಾ ಒಪ್ಪಿಕೊಂಡಿದೆ.

ಜಗತ್ತಿನಲ್ಲಿ ಪ್ರಥಮಬಾರಿಗೆ ಕಮ್ಯುನಿಸ್ಟ್ ಸಿದ್ಧಾಂತವನ್ನು ಆಧರಿಸಿ, ಹೊಸ ನಾಡನ್ನು ನಿರ್ಮಿಸಿದ ಲೆನಿನ್‌ರ ಪ್ರಕಾರ "ಈ ಕೃತಿ ನವ ಜಗತ್ತಿನ ಕಲ್ಪನೆಯನ್ನು, ಸುಸಂಗತ ಭೌತಿಕವಾದವನ್ನು ವರ್ಗ ಹೋರಾಟದ ಸಿದ್ಧಾಂತವನ್ನು ಸರಳವಾಗಿ, ಸ್ಪಷ್ಟವಾಗಿ, ಅಸಮಾನ ಬುದ್ಧಿವಂತಿಕೆಯಿಂದ ನಿರೂಪಿಸಿದೆ"

ಇಡೀ ಜಗತ್ತಿಗೇ ಹೊಸ ಸಮಾಜ ನಿರ್ಮಾಣದ ಭರವಸೆ ನೀಡಿದ ಕಮ್ಯುನಿಸ್ಟ್ ಪ್ರಣಾಳಿಕೆಯ ಪಿತಾಮಹರು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್. ಇಡೀ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಅನುವಾದಗೊಂಡಿರುವ ಏಕೈಕ ಕೃತಿ 'ಕಮ್ಯುನಿಸ್ಟ್ ಪ್ರಣಾಳಿಕೆ' ಜೀವಶಾಸ್ತ್ರದ ಮೇಲೆ ಡಾರ್ವಿನ್ ಸಿದ್ಧಾಂತ ಬೀರಿದ ಪ್ರಭಾವನ್ನೇ ಈ ಪುಟ್ಟ ಗ್ರಂಥ ಇತಿಹಾಸದ ಮೇಲೆ ಬೀರಿತು ಎನ್ನುವ ಪ್ರಣಾಳಿಕೆಯ ಶಿಲ್ಪಿಗಳಲ್ಲೊಬ್ಬರಾದ ಎಂಗೆಲ್ಸ್‌ರ ಪ್ರಕಾರ ಕಮ್ಯುನಿಸ್ಟ್ ಪ್ರಣಾಳಿಕೆ 'ಕ್ರಾಂತಿಕಾರಿಗಳ ಕಲ್ಪನೆಯ ಹೊಸ ಜಗತ್ತಿನ ನಕ್ಷೆ'.

1847ರ ನವೆಂಬರ್‌ನಲ್ಲಿ ಕಮ್ಯುನಿಸ್ಟ್ ಲೀಗ್‌ನ ಎರಡನೆಯ ಅಧಿವೇಶನ ಲಂಡನ್ನಿನ ಬ್ರುಸೆಲ್ಸ್‌ನಲ್ಲಿ. ನಡೆದಾಗ ಅಧಿವೇಶನದ ಪ್ರತಿನಿಧಿಗಳು ಪ್ರಣಾಳಿಕೆಯನ್ನು ತಯಾರಿಸುವ ಹೊಣೆಯನ್ನು ಅಧಿವೇಶನದಲ್ಲಿ ಭಾಗವಹಿಸಿದ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್‌ರಿಗೆ ವಹಿಸಿತು. ಇವರಿಬ್ಬರ ಸಂಯುಕ್ತ ಪರಿಶ್ರಮದಿಂದಾಗಿ ಕಮ್ಯುನಿಸ್ಟ್ ಪ್ರಣಾಳಿಕೆ ಸಿದ್ಧವಾಯಿತು.

ಇಡೀ ಜಗತ್ತಿನ ಕಾರ್ಮಿಕರ ಬೈಬಲ್ ಎಂದೇ ಪ್ರಸಿದ್ಧವಾಗಿರುವ ಪ್ರಣಾಳಿಕೆಗೆ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಪ್ರಾರಂಭದ ದಿನಗಳಲ್ಲಿ ಎಲ್ಲಾ ಭಾಷೆಗಳಿಗೂ ಹಬ್ಬುತ್ತಿದ್ದ ಪ್ರಣಾಳಿಕೆಯನ್ನು 1848ರ ಜೂನ್‌ನಲ್ಲಿ ಪ್ಯಾರಿಸ್ ಕಾರ್ಮಿಕರ ಸೋಲಿನಿಂದ ಪ್ರಾರಂಭವಾದ ಪ್ರತಿಗಾಮಿಗಳ ಧಾಳಿ, ಪ್ರಣಾಳಿಕೆಯನ್ನು ಹಿಂದೆ ತಳ್ಳಿತಲ್ಲದೆ 1852ರಲ್ಲಿ ಪ್ರಷ್ಯ ಪೋಲೀಸರು 'ಕೋಲೋನ್' ನಲ್ಲಿ ಸ್ಥಾಪಿತವಾಗಿದ್ದ ಕಮ್ಯುನಿಸ್ಟ್ ಲೀಗಿನ ಕೇಂದ್ರದ ಮೇಲೆ ದಾಳಿ ಮಾಡಿ ಕಮ್ಯುನಿಸ್ಟ್ ಕಾರ್ಯಕರ್ತರನ್ನು ವಿಚಾರಣೆಗೆ ಗುರಿಪಡಿಸಿ ಕೋಟೆಯೊಂದರಲ್ಲಿ ಬಂಧಿಸಿ ಶಿಕ್ಷೆಗೊಳಪಡಿಸಿದಾಗ ಪ್ರಣಾಳಿಕೆಯನ್ನು 'ಶಾಸನ ರೀತ್ಯಾ' ನಿಷೇಧಿಸಲಾಯಿತು. ಫೆಬ್ರವರಿ ಕ್ರಾಂತಿಯ ನಂತರ ಕಾರ್ಮಿಕರ ಚಳುವಳಿ ಸಾರ್ವಜನಿಕ ಕ್ಷೇತ್ರದಿಂದ ಕಣ್ಮರೆಯಾದಂತೆ ಹಿಂದೆ ಸರಿದ ಪ್ರಣಾಳಿಕೆ ಪುನಃ 'ಇಂಟರ್‌ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಷನ್'ನ ಅಸ್ತಿತ್ವದೊಂದಿಗೆ ಪ್ರಚಾರಕ್ಕೆ ಬಂತು.

'ಮಾನವ-ಮಾನವ ಸಂಬಂಧಗಳ ನಡುವೆ ಕಂದರ ಬೇಡ' ಎಂಬ ಬಾವುಟದ ಕೆಳಗೆ ನಿಜ ಮಾನವೀಯ ಸಂಬಂಧಗಳಿಗೆ ಸ್ಪಂದಿಸಬಲ್ಲ ತತ್ವವನ್ನು ಹೊಂದಿದ್ದ, ಬಂಡವಾಳಶಾಹಿಯ ಪತನದಿಂದ ವರ್ಗರಹಿತ ಹೊಸ ಸಮಾಜದ ಉದಯದ ಆಶಾಭಾವನೆಯನ್ನು ತುಂಬಿ ಉತ್ಪಾದನಾ ಶಕ್ತಿಗಳು ಬೆಳವಣಿಗೆ, ಉತ್ಪಾದನಾ ಸಾಧನದ ಒಡೆತನದ ಸಮಸ್ಯೆಯನ್ನು ವಿಶ್ಲೇಷಿಸಿ ವರ್ಗ ಹೋರಾಟದ ಅಂತಿಮ ಗುರಿಯನ್ನು ನಿರೂಪಿಸುವ "ಕಮ್ಯೂನಿಸ್ಟ್ ಪ್ರಣಾಳಿಕೆ" ಇತಿಹಾಸ ರಚಿಸುವ ಹಾಳೆಗಳಿಂದ ಕೂಡಿದ್ದು ಅಂತರರಾಷ್ಟ್ರೀಯ ಕ್ರಾಂತಿಯ ಧೋರಣೆಯನ್ನು ಹೊಂದಿರುವ, ಎಲ್ಲ ನಾಡಿನ ಹೃದಯಗಳಲ್ಲಿ ಕ್ರಿಯಾಶಕ್ತಿ ಕಿಡಿಗಳ ಕೆಂಪು ದಳ್ಳುರಿಯನ್ನು ಹರಡಿದ ಏಕೈಕ ಮಹತ್ವದ ಕೃತಿಯಾಗಿದೆ. (ಸಾಧಾರ)

— ಮೋಹನ್ ಜಿ. ಎಸ್.

ಹೊಸ ಬದುಕಿನ ನಿರೀಕ್ಷೆಯಲ್ಲಿ

ಬರಲಿರುವ ಹೊಸ ಬದುಕಿಗಾಗಿ
ಬಾಯಾರಿ ಕುಳಿತಿದೆ
ನಮ್ಮ ಬರಡು ಬದುಕು
ಶತಮಾನಗಳ ನಮ್ಮ
ಶಿಥಿಲ ಕನಸುಗಳ ಮೇಲೆ
ಉಲ್ಲಾಸದ ಹೂಗಳ
ಕಿಲಕಿಲನೆ ಅರಳಿಸುವ
ಆ ನವ ವಸಂತಕ್ಕಾಗಿ

ಬಡತನದ ಭೀಕರತೆಯಿಲ್ಲದ
ಅಸಮತೆಯ ಆಳಕಂದಕಗಳಿಲ್ಲದ
ನಿರುದ್ಯೋಗದ ನಿಟ್ಟುಸಿರಿಲ್ಲದ
ಹೊಚ್ಚ ಹೊಸ ಭಾವಗಳ
ಹೊಂಗನಸಿನಾಸೆಯಲಿ
ಸಾಗುತಿದೆ ಹೋರಾಟ
ಸಾವಿನಂಜಿಕೆ ಮರೆತು

ವಿಪ್ಲವದ ಪ್ರಳಯದಲ್ಲಿ
ಹಳೆ ಬದುಕು ಸತ್ತು
ಇತಿಹಾಸ ಗರ್ಭದಲ್ಲಿ
ಹೊತು ಹೋದಾಗ
ಹೊಸ ಬದುಕಿನ ಉಗಮ
ಬದಲಾಗುವ ಬಾಳಿನಲ್ಲಿ
ಪ್ರತಿಯೊಬ್ಬರೂ ಸರಿಸಮ

'ನಿರೀಶ್ವರ'

ವಿಚ್ಛಿದ್ರಕಾರಿ ತಂತ್ರಗಳನ್ನು ಸೋಲಿಸಿರಿ

(5ನೇ ಪುಟದಿಂದ)

ಅಂಚೆ-ತಂತಿ, ರಕ್ಷಣಾ ಇಲಾಖೆ, ರೈಲ್ವೆ ಇಲಾಖೆ ಕೇಂದ್ರ ಸರ್ಕಾರದ ಇತರ ನೌಕರರು, ರಾಜ್ಯ ಸರ್ಕಾರಿ ನೌಕರರು (ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ಮತ್ತು ಕೆಲವು ರಾಜ್ಯಗಳ ಹೊರತಾಗಿ) ಜನವರಿ 19ರ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಲಿಲ್ಲ.

ಅಗತ್ಯಸೇವಾ ನಿರ್ವಹಣಾ ಶಾಸನದ ಜತೆಗೆ ರಾಷ್ಟ್ರೀಯ ಭದ್ರತಾ ಶಾಸನವನ್ನು ಹಲವು ಅಗತ್ಯ ಸೇವೆಗಳಿಗೆ ಅನ್ವಯಿಸುವ ಆಜ್ಞೆಯನ್ನು ಕೇಂದ್ರ ಸರ್ಕಾರವು ಹೊರಡಿಸಿತು.

ಕಾರ್ಮಿಕ ಸಂಘಗಳಿಗೆ ಯಾವ ಮುನ್ಸೂಚನೆಯನ್ನು ಕೊಡದೆ ಹಠಾತ್ತಾಗಿ ಟ್ರೇಡ್ ಯೂನಿಯನ್ಸ್ (ಅಮೆಂಡ್‌ಮೆಂಟ್) ಮಸೂದೆಯನ್ನು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ (ಅಮೆಂಡ್‌ಮೆಂಟ್) ಮಸೂದೆಯನ್ನು ಲೋಕಸಭೆಯಲ್ಲಿ, ಹಾಸ್ಪಿಟಲ್ಸ್ ಅಂಡ್ ಅದರ್ ಇನ್‌ಸ್ಟಿಟ್ಯೂಷನ್ಸ್ (ಸೆಟಲ್‌ಮೆಂಟ್ ಆಫ್ ಡಿಸ್ಪ್ಯೂಟ್ಸ್) ಮಸೂದೆಯನ್ನು ರಾಜ್ಯಸಭೆಯಲ್ಲಿ 1982ರ ಬಜೆಟ್ ಅಧಿವೇಶನದ ಕೊನೆಯ ದಿನ ಇಂದಿರಾ ಸರ್ಕಾರವು ಮಂಡಿಸಿತು.

ಈ ಮೂರು ಮಸೂದೆಗಳನ್ನು ಮೇಲೆ ಹೇಳಿದ ಎರಡು ಶಾಸನಗಳನ್ನು ಪ್ರಯೋಗಿಸಿದರೆ ಕಾರ್ಮಿಕ ಸಂಘಟನೆ ಮತ್ತು ಚಳುವಳಿಗೆ ಗಧಾಪ್ರಹಾರವಾಗುತ್ತದೆ. ಅನೇಕ ವರ್ಷಗಳ ತ್ಯಾಗ, ಬಲಿದಾನಗಳ ಮೂಲಕ ಕಾರ್ಮಿಕ ವರ್ಗವು ಗಳಿಸಿದ ಸಂಘಟನಾ ಹಕ್ಕು, ಮುಷ್ಕರದ ಹಕ್ಕು, ಸಾಮೂಹಿಕ ಚೌಕಾಶಿಯ ಹಕ್ಕು ಮತ್ತಿತರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಇಂದಿರಾ ಸರ್ಕಾರವು ಈ ರೀತಿ ಕಸಿದುಕೊಳ್ಳುತ್ತಿದೆ.

ಕಾರ್ಮಿಕರನ್ನು ಪ್ರದೇಶ, ಭಾಷೆ. ಧರ್ಮ, ಜಾತಿಗಳ ಆಧಾರದ ಮೇಲೆ ಒಡೆಯುವುದು ಆಳುವ ವರ್ಗಗಳ ತಂತ್ರಗಳಾಗಿವೆ.

ಕಾರ್ಮಿಕ ಚಳುವಳಿಯು ದಮನಕಾರಿ ಕ್ರಮಗಳು ಮತ್ತು ಐಕ್ಯಭಂಜಕ ವಿಚ್ಛಿದ್ರಕಾರಿ ತಂತ್ರಗಳು ಸಮ್ಮಿಳಿತವಾಗಿರುವ ಸಂಕೀರ್ಣ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಭಾರತದ ಕಾರ್ಮಿಕ ವರ್ಗಕ್ಕೆ ಆಳುವ ವರ್ಗಗಳ ಕಾಂಗ್ರೆಸ್ (ಐ) ಕೇಂದ್ರ ಸರ್ಕಾರವು ಹಾಕಿರುವ ಈ ಶತಮಾನದ ಮಹಾ ಸವಾಲನ್ನು ಎದುರಿಸಿ, ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರೀಕ ಸ್ವಾತಂತ್ರ್ಯದ ರಕ್ಷಣೆಗಾಗಿ ಕಾರ್ಮಿಕ ವರ್ಗವು ವಿಶಾಲ ಐಕ್ಯ ಚಳುವಳಿಯನ್ನು ಮುಂದುವರೆಸಬೇಕಾಗಿದೆ. ಈ ದಿಸೆಯಲ್ಲಿ ಮುನ್ನಡೆಯುವಾಗ ಸಹಜವಾಗಿಯೇ ಆಳುವ ವರ್ಗಗಳ ಎಲ್ಲಾ ವಿಚ್ಛಿದ್ರಕಾರಿ ಐಕ್ಯಭಂಜಕ ತಂತ್ರಗಳನ್ನೂ ಕಾಂಗ್ರೆಸ್ ಸರ್ಕಾರಗಳ ದಮನಕಾರಿ ಕ್ರಮಗಳನ್ನು ಸೋಲಿಸಬೇಕು.

ಜನಸಾಮಾನ್ಯರ ಸಂಕಷ್ಟಗಳ ಪರಿಹಾರಕ್ಕಾಗಿ, ದೇಶದ ಐಕ್ಯತೆ ಮತ್ತು ಸಮಗ್ರತೆಗಳ ರಕ್ಷಣೆಗಾಗಿ, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ, ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯ ವಿರುದ್ಧ, ವಿಶ್ವಶಾಂತಿಯ ರಕ್ಷಣೆಗಾಗಿ ಹೋರಾಡುತ್ತಾ ಕಾರ್ಮಿಕ ವರ್ಗವು ಸಮಾಜದ ಮುಂದಾಳಾಗಿ ಬೆಳೆಯಬೇಕಾಗಿದೆ.

ರಕ್ತಸಂಬಂಧಿ

• ನಿರಂಜನ

ಆತ ನಗುತ್ತಾ ನಿಂತಿದ್ದಾನೆ ಆ ಭೀಮಕಾಯ; ಹೃಷ್ಟಪುಷ್ಟವಾದ ಎತ್ತರದ ದೇಹ, ತುಂಬು ಮುಖ, ಅರಳಿದ ಕಣ್ಣುಗಳೆರಡು, ಹಣೆಯ ಮೇಲೆ ಕುಣಿದಾಡುತ್ತಿರುವ ಮುಂಗುರುಳು, ಸ್ವಯಂ ಸೇವಕನ ಉಡುಗೆ—ಆತ ನಗುತ್ತಲೇ ಇದ್ದಾನೆ.

ಎಲ್ಲೋ ಕಂಡಿದ್ದ ಹಾಗೆ ನೆನಪು. ಎಲ್ಲಿ ? ಯಾವಾಗ ? ಯಾರು ?

"ಗುರುತು ಸಿಗಲಿಲ್ಲ ? ಸಿಗಲಿಲ್ಲ ಗುರುತು ?"

– ತುಂಟ ನಗೆ !

ಏನೂ ಬಗೆ ಹರಿಯದೆ, ಕನ್ನಡಕವನ್ನು ತೆಗೆದಿರಿಸಿ ಓಡಿದೆ; ಮುಖವೆತ್ತಿ ಅವನನ್ನು ನೋಡಿದೆ. ಸುಮ್ಮನಿರಬಾರದೆಂದು; "ನಿಂತಿದ್ದೀರಿ ಯಾಕೆ ? ಬನ್ನಿ ಕೂತ್ಕೊಳ್ಳಿ" ಎಂದೆ.

ಆತ ಹತ್ತಿರ ಬಂದು, ಮೇಜಿನ ಮೇಲೆ ಮುಂಡಿಯೂರಿ, ನಗುತ್ತ ಕೇಳಿದ;

"ಯಾಕೆ ? ಗುರುತು ಸಿಗಲಿಲ್ವ ಇನ್ನೂ ?"

"ಚಿ ಚಾ !" ಎಂದನಾತ. ಆ ಕಣ್ಣುಗಳಲ್ಲಿ ಹನಿ ತುಳುಕಿತು.

ಚಿ ಚಾ !....ಓ!....

ಕಾಲ ಹಿಂದಕ್ಕೆ ಸರಿಯಿತು. ನೆನಪಿನ ಗವಿಯಲ್ಲಿ ಬೆಳಕು ಮೂಡಿತು,

o o o

ಅಜ್ಞಾತವಾಸ ಆರಂಭವಾದ ಮೊದಲ ಕೆಲ ತಿಂಗಳು ನಮ್ಮ ಪ್ರದೇಶದಲ್ಲಿ ಪೋಲೀಸರು ನರಬೇಟೆ ಆರಂಭಿಸಿರಲಿಲ್ಲ. ನಾವು ಹತ್ತಾರು ಜನರಿಗಾಗಿ ಅಲ್ಲಿ ಇಲ್ಲಿ ಅವರು ಹುಡುಕಾಡುತ್ತಿದ್ದರು, ಅಷ್ಟೆ. ನಮಗೆಲ್ಲರಿಗೂ ಅಜ್ಞಾತವಾಸವೊಂದು ಹೊಸ ಅನುಭವವೇ ಆಗಿದ್ದರೂ ಕೂಡ,ಆ ಜೀವನ ಬಲುಬೇಗನೆ ಮೈಗೂಡಿತ್ತು. ನಮ್ಮ ಪಾಲಿಗೆ ಹಗಲು ರಾತ್ರಿಯಾಯಿತು, ರಾತ್ರೆ ಹಗಲಾಯಿತು. ಹಸಿವು ಸಹ ಬಾಯ್ಬಿಟ್ಟು ಕರೆಯದ ಪರಿಸ್ಥಿತಿ.

ನಮ್ಮ ನೆರೆನಾಡಿನಲ್ಲಿ ನಡೆಯುತ್ತಿದ್ದುದು ಮಾತ್ರ ಅಭೂತಪೂರ್ವವಾದದ್ದು. ಅಲ್ಲಿ ಬಡ ಜನಸಮುದಾಯ ತನ್ನ ಪವಿತ್ರ ನೆತ್ತರಿನಲ್ಲಿ ಒಂದು ರುದ್ರ ಅಧ್ಯಾಯವನ್ನು ಬರೆಯುತ್ತಿತ್ತು. ರೇಷನ್ನಿನ ಆರೌನ್ಸಿನಲ್ಲಿ ಮೂರೂ ಬಡವನ ಹೊಟ್ಟೆಗೆ ಬೀಳುತ್ತಿರಲಿಲ್ಲ. ರೈತ ದೇಹ ತೇದು ಬೆವರಿನ ಹನಿಹಾಯಿಸಿ ಹುಲುಸಾಗಿ ಬೆಳೆಸಿದ ಭತ್ತದ ಸಸಿ ತಿಂದುಂಡು ಮೈಮುರಿಯುವಷ್ಟು ಫಲ ಕೊಡುತ್ತಿತ್ತು. ಆದರೆ ಆ ಭತ್ತದ ರಾಶಿ ರೈತನ ಕೈಯಲ್ಲಿ ಅಕ್ಕಿಯಾಗಲಿಲ್ಲ. ತಾನು ಬೆಳೆಸಿದ್ದರ ರೂಪಲಾವಣ್ಯ ಅವನ ಕಣ್ಣನ್ನು ತಣಿಸಲಿಲ್ಲ. ಕೈಗೆ ಬಂತು ಎಂದಾಗಲೇ ಹಲವು ತಿಂಗಳ ದುಡಿತದ ಫಲ ಮಟ ಮಾಯವಾಗುತ್ತಿತ್ತು.

ತನ್ನ ಸಂಪತ್ತು ಜಮೀನ್ದಾರನ ಕಣಜದಲ್ಲಿ ದಾಸ್ತಾನಾಗಿದೆಯೆಂದು ರೈತ ಬಲ್ಲ. ಅಲ್ಲಿಂದ ಆಗಾಗ್ಗೆ ರಾತ್ರಿ ರಾತ್ರಿಯೇ ಅದು ಪೇಟೆಯ ಕಳ್ಳ ವ್ಯಾಪಾರಿಗಳ ಗುದಾಮುದ ಪಾಲಾಗುತ್ತಿದ್ದುದನ್ನೂ ಆತ ನೋಡುತ್ತಿದ್ದ.

ಆದರೆ, ಅವನು ರೈತ. ಏನು ತಾನೆ ಮಾಡಬಲ್ಲ ?

ಸ್ವತಃ ಒಂದು ತುತ್ತು ಉಣ್ಣಬೇಕಾದರೆ ಆತ "ಕಂಟ್ರೋಲಿ"ಗೆ ಹೋಗಬೇಕು. ಸ್ಟೋರಿನಲ್ಲಿ ಸಿಗುವುದನ್ನೇ ಮಹಾ ಪ್ರಸಾದವೆಂದು ಸ್ವೀಕರಿಸಬೇಕು. ಹಿಂದಿನ ಯಾವ ತಲೆಮಾರಿನವರೂ ಕಂಡು ತಿಂದಿರದಂಥ ಕೆನಡಾ ದೇಶದ ಗೋವಿನ ಜೋಳವನ್ನೂ ಅಮೃತವೆಂದು ಪಡೆದು, ಆ ಅಮೃತ ಹೊಟ್ಟೆಗೆ ದಕ್ಕದೇ ಹೋದಾಗ ವಿಲಿ ವಿಲಿ ಒದ್ದಾಡಬೇಕು.

'ನೀನು ನೇಗಿಲು ಹಿಡಿಯದಿದ್ದರೆ ಮಾನವ ಬದುಕಬಲ್ಲನೇ ?' ಎಂಬ ತತ್ವೋಪದೇಶದಿಂದ ಆ ರೈತನಿಗೆ ತೃಪ್ತಿಯಾದೀತೇ ? ನಾಲ್ಕು ಕಡೆಗಳಿಂದಲೂ ಸಾವು ಕವಿದು ಬಂದಾಗ ಆತ ಸುಮ್ಮನಿರುವುದು ಸಾಧ್ಯವೇ ?

ಪಶ್ಚಿಮ ತೀರದ ಪುಣ್ಯ ಭೂಮಿಯ ಆ ಸುಪುತ್ರರು "ಹೊಲದೊಡೆಯರ ಕಣಜಗಳಲ್ಲಿ ಅಕ್ಕಿ ದಾಸ್ತಾನಿರುವವರೆಗೆ ನಾವು ಉಪವಾಸ ಬಿದ್ದು ಸಾಯಲಾರೆವು." ಎಂದರು.

"ಅನ್ನ ಕೊಡಲಾರದ ಸರಕಾರ ಇನ್ನಿರಬಹುದೆ ?" ಎಂದು ಉದ್ವಿಗ್ನರಾಗಿ ಕೇಳಿದರು.

"ಅನ್ನಕ್ಕಾಗಿ ಇನ್ನು ಸಮರ" ಎಂಬ ಘೋಷಣೆ ಮೊಳಗಿತು.

ಹಳ್ಳಿಹಳ್ಳಿಗಳಲ್ಲೂ ಸುಸಂಘಟಿತ ರೈತರು ಮೆರವಣಿಗೆಗಳಲ್ಲಿ ಸಾಗಿ ಭತ್ತದ–ಅಕ್ಕಿಯ ಕಣಜಗಳನ್ನು ಬರಿದು ಮಾಡಿದರು. ನ್ಯಾಯ ಬೆಲೆಯನ್ನು ತೆತ್ತು ದಾಸ್ತಾನನ್ನು ತಮ್ಮಲ್ಲೇ ಸಮನಾಗಿ ಹಂಚಿದರು.

ಆದರೆ, ಕಾನೂನಿನ ದೃಷ್ಟಿಯಲ್ಲಿ ಅದು ಅಕ್ಷಮ್ಯ ಅಪರಾಧವಾಯಿತು. ನೆಮ್ಮದಿಗೆ ಭಂಗ ಬಂತು.

ಪ್ರಭುತ್ವದ ಗಾಲಿಗಳು ಚಲಿಸಿದವು; ಭಟರು ಓಡಾಡಿದರು; ಶಾಸನದ ಸಾವಿರ ಸಾವಿರ ಕೈಗಳು, ಸಹಸ್ರಾರು ಕಂಠಗಳನ್ನು ಹಿಸುಕಿದುವು. ಗುಂಡಿನೇಟುಗಳ, ಲಾಟಿ ಛಾರ್ಜುಗಳ, ಅನ್ಯಾಯ–ಅತ್ಯಾಚಾರಗಳ ಪ್ರಕರಣ ಒಂದೇ ? ಎರಡೇ ?

ಕಾನೂನು–ನೆಮ್ಮದಿಗಳ ಸಂರಕ್ಷಣೆಗಾಗಿ ಅಂಥ ಕಾರ್ಯಕ್ರಮ ಅವಶ್ಯವಾಯಿತಂತೆ, ಜನರು ಹಿಂಸೆಯಲ್ಲಿ ಉದ್ಯುಕ್ತರಾದರಂತೆ....

ಒಂದು ಹಗಲು, ಹಿಂದಿನ ದಿನದ 'ಎಕ್ಸ್‌ಪ್ರೆಸ್' ಪತ್ರಿಕೆ ಓದುತ್ತ ಒಂದು ದೋಣಿ ಮನೆಯಲ್ಲಿ ಕುಳಿತಿದ್ದೆ. ಕಡಲ ತೀರದಲ್ಲಿರುವ ನಮ್ಮ ಊರಿನ ನದೀ ಮುಖದಿಂದ ಹೊಳೆಯ ಹಾದಿಯಾಗಿ ಮೂವತ್ತಾರು ಮೈಲು ದೂರದ ಪಟ್ಟಣಕ್ಕೆ ಹೋಗಿ ಬರುವ ದೊಡ್ಡ ದೋಣಿ ಅದು. ಅದನ್ನು ನಡೆಸುವ ಇಬ್ಬರು ದೋಣಿ ಕೆಲಸಗಾರರ ಸಂಘದ ಪ್ರಮುಖ ಕಾರ್ಯಕರ್ತರಾಗಿದ್ದರು. ಹಿಂದಿನ ಎರಡು ದಿನಗಳಿಂದ, ನಡುಗಡ್ಡೆಯ ಒಂದೆ ತಂಗಿದ್ದ ಆ ದೋಣಿಯೇ ನನ್ನ ವಾಸಸ್ಥಾನವಾಗಿತ್ತು.

ಪತ್ರಿಕೆ ಓದುತ್ತ ಇದ್ದೆ–ಎಂದೆನಲ್ಲ ? ಗೋಳಿಬಾರುಗಳ ಸುದ್ದಿ ಓದುವುದರಲ್ಲಿ ತಲ್ಲೀನನಾಗಿದ್ದೆ. ದೋಣಿ ಮಿಸುಕಿದ ಹಾಗಾಯಿತು. ಅಲೆಗಳೆದ್ದವೇನೋ ಎಂದುಕೊಂಡೆ. ಕಿಂಡಿಯಿಂದ ಹೊರ ನೋಡಿದೆ. ಪ್ರಶಾಂತವಾಗಿಯೇ ಕಂಡಿತು. ಮತ್ತೊಮ್ಮೆ ದೋಣಿ ಮಿಸುಕಾಡಿತು. ಪುನಃ ಮಿಸುಕಾಟ, ಒಂದು ತುದಿಯಲ್ಲಿ ಸಪ್ಪಳ.

ಎದ್ದು ಅತ್ತ ಸಾಗಿದೆ. ಅಲ್ಲೊಬ್ಬ ಹುಡುಗ ಹೊಳೆಯಿಂದ ಮೇಲಕ್ಕೆದ್ದು ದೋಣಿಯೊಳಕ್ಕೆ ಬರಲು ಒದ್ದಾಡುತ್ತಿದ್ದ. ನನ್ನನ್ನು ಕಂಡಾಗ ಅವನ ಮುಖ ದೈನ್ಯದಿಂದ ಸಹಾಯ ಯಾಚಿಸಿತು. ಒಂದು ಹಗ್ಗವನ್ನು ಇಳಿಬಿಟ್ಟು ನೆರವಾದೆ. ನಾನಿದ್ದ ದೋಣಿ ನಡೆಸುವವರಲ್ಲೊಬ್ಬ ಶಹರಿಗೆ ಹೋಗಿದ್ದ. ಇನ್ನೊಬ್ಬ ಗೊರಕೆ ಹೊಡೆಯುತ್ತ ದೋಣಿಯಲ್ಲೇ ನಿದ್ರಿಸಿದ್ದ. ನನ್ನ ಕಾಲ ಸಪ್ಪಳದಿಂದ ಅವನಿಗೆ ನಿದ್ರಾಭಂಗವಾಯಿತು. ಹುಡುಗನನ್ನು ನೋಡಿದವನೇ "ಹಿಡಿಯಿರಿ – ಬಿಡಬೇಡಿ ! ಕಳ್ಳನಿರಬಹುದು" ಎಂದ.

"ಶ್ ! ಸುಮ್ಮನಿರಿ. ಪಕ್ಕದ ದೋಣಿಯವರು ಯಾರಾದರೂ ಬಂದಾರು" ಎಂದೆ.

ತಪ್ಪಾಯಿತೆಂದು ಆತ ತುಟಿಕಚ್ಚಿಕೊಂಡ.

ಆ ಹುಡುಗ ಎಳಸಲ್ಲ. ಇಪ್ಪತ್ತು–ಇಪ್ಪತ್ತೊಂದಿರಬಹುದು. ಮುಖದಲ್ಲಿ ಎಳೆತನ ನಗುತ್ತಿತ್ತು ಅಷ್ಟೆ.

ಅವನು ಕಳ್ಳನಾಗಿರಲಿಲ್ಲ. ಅಳುತಳುತ ಮಲಯಾಳಿ ಭಾಷೆಯಲ್ಲಿ ತನ್ನ ಕತೆ ಹೇಳಿದ.

ಹೊಟ್ಟೆಪಾಡಿಗಾಗಿ ಕೆಲಸ ಹುಡುಕಲೆಂದು ಹೊರಟಿದ್ದನಂತೆ. ಪರ ಊರಿಗೆ ಹೋಗಲು ಪ್ರವಾಸದ ವೆಚ್ಚಕ್ಕೆ ಹಣವಿಲ್ಲದೆ, ಯಾವುದೋ ದೊಡ್ಡ ಮಂಜಿಯನ್ನು (ಸಣ್ಣ ವ್ಯಾಪಾರಿ ನೌಕೆ) ಸೇರಿಕೊಂಡ. ಊಳಿಗದ ಆಳಿನಂತೆ ಎಲ್ಲಾ ಸೇವೆಯನ್ನು ಮಾಡಬೇಕಾಗುತ್ತಿತ್ತು. ಅವನನ್ನು ಸಿಕ್ಕಸಿಕ್ಕಂತೆ ಬಡಿಯುತ್ತಿದ್ದರು. ಬೈಗಳ ಮಳೆ ಸುರಿಸುತ್ತಿದ್ದರು. ಅಷ್ಟು ಸಾಲದ್ದಕ್ಕೆ ರಾತ್ರಿ, ಮಂಜಿಯಲ್ಲಿದ್ದ ಇಳಿವಯಸ್ಸಿನ ವ್ಯಾಪಾರಿಯೊಬ್ಬ ಹುಡುಗನನ್ನು ಬರಸೆಳೆದು ಪಶುವಿನಂತೆ ವರ್ತಿಸುತ್ತಿದ್ದ.

ಹಿಂದಿನ ರಾತ್ರಿ ಮಂಜಿ ಆ ಊರಿಗೆ ಬಂದಿತ್ತು. ಹುಡುಗ ಸಮಯ ಕಾದು, ಎಲ್ಲರೂ ಮಧ್ಯಾಹ್ನದ ಊಟದ ಬಳಿಕ ಬಿಸಿಲಿನ ಅರೆ ನಿದ್ದೆಯಲ್ಲಿದ್ದಾಗ, ನೀರಿಗೆ ಇಳಿದು ಈಜಿ ತಪ್ಪಿಸಿಕೊಂಡ.

ಆತ ನನ್ನ ಪಾದಗಳನ್ನು ಹಿಡಿಯಬಂದ.

"ಸ್ವಾಮಿ, ನೀವೇ ತಂದೆ. ಬದುಕಿಸಬೇಕು .. ಹಿಡಿದು ತಿರುಗಿ ಕೊಡಬೇಡಿ...."

ಅವನಿಗೊಂದು ಚಿಂದಿ ಬಟ್ಟೆಯನ್ನಿತ್ತು, "ಮೈಯುಜ್ಜಿಕೊ" ಎಂದೆ.

ಸೊಂಟಕ್ಕೆ ಬಿಗಿದಿತ್ತು ಬಟ್ಟೆಯ ಪುಡಿಕೆ. ಅವನ ಸರ್ವಸ್ವ. ಆತ ನಾಲ್ಕು ಫರ್ಲಾಂಗು ಈಜಿ ಬಂದಿದ್ದ.

"ನಿನ್ನ ಹೆಸರು ?

"ಬಾಷಿ".

"ವಾಸುದೇವ ಎಂದೆ?"

"ಅಲ್ಲ, ಬಷೀರ್."

"ಬಷೀರ್" ?

"ಹೂಂ, ಬಷೀರ್ ಮುಹಮದ್."

ನಾನೂ, ಬಷೀರನೂ ಗೆಳೆಯರಾದೆವು. ದೋಣಿಯ ಒಡೆಯ ನಾನೇ ಎಂದು ಹುಡುಗ ತಿಳಿದಿದ್ದನೇನೊ. ಆ ದಿನ ಕತ್ತಲಾದ ಮೇಲೆ ನಾನು ಹೊರಟು ಹೋದೆ. ನಗರದಿಂದ ಮೂರು ಮೈಲು ದೂರದಲ್ಲಿ ಒಂದು ಸಭೆಯಲ್ಲಿ ಭಾಗವಹಿಸುವ ಕಾರ್ಯಕ್ರಮವಿತ್ತು.

ರಾತ್ರೆ ನಾನು ಬರದಿದ್ದುದನ್ನು ಗಮನಿಸಿದ ಭಾಷಿ, "ಸ್ವಾಮಿ ಬರೋದಿಲ್ಲವಾ?"ಎಂದು ಕೇಳಿದನಂತೆ. ದೋಣಿ ನಡೆಸುವಾತ, "ಏನು ? ಸ್ವಾಮಿ ಇಲ್ಲಿಯೇ ನಿನ್ನೊಟ್ಟಿಗೇ ಇರಬೇಕೆಂದೋ ನಿನ್ನ ಯೋಚನೆ ?" ಎಂದು ಉತ್ತರ ಕೊಟ್ಟನಂತೆ!

ಎಂಟು ದಿನ ಬಿಟ್ಟೊಮ್ಮೆ ಒಂದು ರಾತ್ರೆ ಅದೇ ದೋಣಿಗೆ ಹೋಗಿದ್ದೆ. ಈ ಸಲ ಅಲ್ಲೇ ಎರಡು ದಿನ ಇದ್ದೆ. ಆ ವೇಳೆಗಾಗಲೇ ಆ ದೋಣಿ ನಡೆಸುವವರಿಗೆ ಆತ ಆತ್ಮೀಯನಾಗಿದ್ದ. ನನ್ನ ಬಗ್ಗೆ ಅವನು ಪ್ರೀತಿ ಆದರ ತೋರಿದ.

ಒಮ್ಮೆ ನಾನು ನಿದ್ದೆ ಹೋಗಿದ್ದೆ. ನನಗೆ ಎಚ್ಚರವಾದಾಗ ಕಣ್ಣಿಗೆ ಬಿದ್ದದ್ದು ಕುಳಿತಲ್ಲೇ ದೋಣಿಗೊರಗಿ ನಿದ್ರಿಸುತ್ತಿದ್ದ ಬಾಷಿ. ಅವನ ಎದೆಯ ಮೇಲೆ ನನ್ನ ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳಿದ್ದವು. ಅವನಿಗೆ ಎಚ್ಚರವಾಗದಿರಲೆಂದು ನಾನು ಮಲಗಿದ್ದಲ್ಲೇ ಇದ್ದೆ.

ಸ್ವಲ್ಪ ಹೊತ್ತಿನಲ್ಲೆ ಬಾಷಿ ಗಡಬಡಿಸಿ ಎದ್ದಂತಾಯಿತು. ಕಣ್ಣು ತೆರೆದೆ. "ಸ್ವಾಮಿ ಎದ್ದಿರಾ? ಇನ್ನು ಚಾ ಮಾಡುವ" ಎಂದು ಹೇಳುತ್ತ ಆತ ಪತ್ರಿಕೆಗಳನ್ನು ಹೂವಿನಂತೆ ಬದಿಗಿರಿಸಿದ; ತಾನು ಅದನ್ನು ಮುಟ್ಟಿದ್ದು ತಪ್ಪಾಯಿತೆನ್ನುವಂತೆ ನನ್ನನ್ನು ನೋಡಿದ.

"ಓದಲು ಬರ್‍ತದಾ ಬಾಷಿ ?"

"ಓ, ಮಲೆಯಾಳಂ ಓದ್ತೇನೆ. ಇಂಗ್ಲಿಷ್–ಕರ್ನಾಟ ಗೊತ್ತಿಲ್ಲ."

"ಹೂಂ....ಇನ್ನೊಮ್ಮೆ ಬರುವಾಗ ಮಲಯಾಳಿ ಪುಸ್ತಕ ತರ್‍ತೇನೆ."

1947ರ ಮೇ ದಿನದಂದು, ಹುಬ್ಬಳ್ಳಿಯಿಂದ, ಆಗಿನ ಕಮ್ಯೂನಿಸ್ಟ್ ಪಕ್ಷದ ಸಾಪ್ತಾಹಿಕ 'ಜನಶಕ್ತಿ'ಯ ಪ್ರಥಮ ಸಂಚಿಕೆ ಪ್ರಕಟವಾಯಿತು. ನಿರಂಜನ (ಆಗ ಕುಳುಕುಂದ ಶಿವರಾಯ) 'ಜನಶಕ್ತಿ'ಯ ಸಂಪಾದಕರಾಗಿದ್ದರು. ನಾಡಿನ ಶ್ರಮಜೀವಿಗಳ ಹೋರಾಟದಲ್ಲಿ ಆ ಪತ್ರಿಕೆ ಪ್ರಬಲ ಅಸ್ತ್ರವಾಯಿತು. 1948ರಲ್ಲಿ ಆಳುವವರ್ಗ ದಮನಕಾಂಡ ಆರಂಭಿಸಿದಾಗ, ಇತರ ಪ್ರಮುಖರ ಜತೆ ನಿರಂಜನರೂ ಭೂಗತರಾದರು. ತಲೆ ಮರೆಸಿಕೊಂಡೇ 'ಜನಶಕ್ತಿ'ಗಾಗಿ ಮ್ಯಾಟರ್ ಬರೆದರು. 1949ರಲ್ಲಿ ಮುಂಬೈ ಸರಕಾರ 'ಜನಶಕ್ತಿ'ಯ ಮೇಲೆ ನಿಷೇಧಾಜ್ಞೆಯ ಗಧಾ ಪ್ರಹಾರ ಮಾಡಿತು.

'ರಕ್ತಸಂಬಂಧಿ' 1948ರಲ್ಲಿ ಭೂಗತರಾಗಿದ್ದಾಗ ನಿರಂಜನರು ಬರೆದ ಕತೆ. ಇಲ್ಲಿ ಜನತೆಯ ಹೋರಾಟ ಚಿತ್ರಿತವಾಗಿರುವುದು ಅಸಮತೆ ಇಲ್ಲದ 'ನಾಳೆ'ಯ ನೆಲೆಯಿಂದ. ವಾಸಿ (ವಾಸುದೇವ) ಎಂಬ ಹುಡುಗ 'ಜನಶಕ್ತಿ' ಕಾರ್ಯಾಲಯದಲ್ಲಿ ಸ್ವಲ್ಪ ಕಾಲ ಇದ್ದ. ಎಲ್ಲಿಂದಲೋ ಬಂದವನು; ಎಲ್ಲಿಗೋ ಹೋದ. 'ರಕ್ತ ಸಂಬಂಧಿ'ಯ ಬಷೀರ್ ಮುಹಮದ್ ಪಾತ್ರಕ್ಕೆ ಆತ ಪ್ರೇರಣೆ ಎನ್ನಬಹುದು. ಕತೆಯಲ್ಲಿರುವ 'ನಾನು', ಇತರ ಪಾತ್ರಗಳು ಹಾಗೂ ಜನತೆ ಸಾಧಿಸಿದ ವಿಜಯ ಇವೆಲ್ಲ ಕಲ್ಪನೆಯ ಮೂಸೆಯಲ್ಲಿ ಆದ ಸೃಷ್ಟಿ. ಈ ಕತೆಯನ್ನು ಆಯ್ದುಕೊಂಡಿರುವುದು ಅಚ್ಚಿಗೆ ಅಣಿಯಾಗುತ್ತಿರುವ 'ನಿರಂಜನ : ನೂರು ಕತೆಗಳು' ಸಂಪುಟದಿಂದ—

ಅವನ ಮುಖ ಅರಳಿತು.

ಆ ರಾತ್ರಿ ಬಂದರ ಕೆಲಸಗಾರರ ಸಂಘದ ಅಧ್ಯಕ್ಷ 'ಮೂಪ' ನನ್ನನ್ನು ಕಾಣಲು ದೋಣಿಗೆ ಬಂದ. ಆತ ಸ್ವತಃ ಕಾರ್ಮಿಕನಲ್ಲ. ಎಲ್ಲರನ್ನು ದುಡಿಸುವ ಹಿರಿಯ 'ಮೇಸ್ತ್ರಿ'. ದಿನಕ್ಕೆ ೫೦-೧೦೦ ರೂಪಾಯಿ ಸಂಪಾದನೆಯಾದರೂ ಆಯಿತೇ. ಅಷ್ಟೂ ಕುಡಿತ - ತಿಂಡಿಗಳಿಗೆ. ಇಬ್ಬದಿಗಳಲ್ಲೂ ಆರಂಗುಲ ಉದ್ದದ ಮೀಸೆ, ದೆವ್ವದಂತ ಆ ದೇಹಕ್ಕೆ. ನನ್ನೆದುರಿಗೆ ಮಾತ್ರ ಆತ ಕಿರಿಯನಾಗುತ್ತಿದ್ದ. ಸಂಘಕ್ಕೆ ಅವನು ದ್ರೋಹ ಬಗೆಯದಿರಲು ಕಾರಣವೂ ಅದೇ. ಅದು ಹೊಸದಾಗಿ ಸ್ಥಾಪಿತವಾಗಿದ್ದ ಸಂಘ. ಆದರೆ ಅಷ್ಟರಲ್ಲೇ ಕೆಲಸಗಾರರು ಮೂಪನ ಬಗ್ಗೆ ಅಸಮಾಧಾನ ವ್ಯಕ್ತಪಡಿಸತೊಡಗಿದರು.

ಮೂಪ ಒಂದಷ್ಟು ಹಣ್ಣು ಹಂಪಲು, ಕೋಳಿಮೊಟ್ಟೆ ತಂದಿದ್ದ. ಲೋಕವಾರ್ತೆಯನ್ನೆಲ್ಲ ಮಾತಾಡಿದನಾದರೂ, ಸಂಘದ ಸುದ್ದಿ ಎತ್ತಿದೊಡನೆ ಲಕ್ಷ್ಯ ಬೇರೆಡೆಗೆ ತಿರುಗಿಸುತ್ತಿದ್ದ. ಒಳ್ಳೆ ಮೂಪ ಸಿಕ್ಕಿದ ನಮಗೆ—ಎಂದುಕೊಂಡೆ.

ಬಾಷಿಯ ವಿಷಯ ತಿಳಿದಾಗ ಮೂಪ, "ಹುಡುಗ ನಮ್ಮಲ್ಲಿಗೆ ಬರಲಿ ಆಗದೆ? ಅಡುಗೆಗೆ ಜನವಾದೀತು," ಎಂದ. ಜತೆಯಲ್ಲೇ "ನೀವೂ ಒಂದಷ್ಟು ದಿವಸ ನಮ್ಮಲ್ಲೇ ಇದ್ದು ಬಿಡಿ. ಈ ಮೀಸೆಯನ್ನು ಇದಿರಿಸಿ ಮನೆಗೆ ಬರುವವರು ಯಾರಂತೆ?" ಎಂದು ಕೊಚ್ಚಿಕೊಂಡ.

ಅಡುಗೆ ಎಂದಾಗ ಬಾಷಿಯ ಮುಖ ಬಾಡಿದರೂ, ನಾನೂ ಇರುವೆನೆಂದಾಗ ನಗೆ ಸೂಸಿತು. ಆ ದೋಣಿ ಕೆಲಸಗಾರರೂ, ಬೇಡವೆನ್ನಲಿಲ್ಲ. ಒಬ್ಬನು ಅವನಿಗೊಂದು ಹಳೆಯ ಷರಟು ಕೊಟ್ಟ. ಇನ್ನೊಬ್ಬ ಒಂದು ಕಟ್ಟು ಬೀಡಿ ನೀಡಿದ. "ಬಾಷಿ ಆಗಾಗ್ಗೆ ಗಂಜಿ ಮತ್ತು ಮೀನು ಚಟ್ನಿ ತಿನ್ನಲು ಬರುತ್ತಿರು", ಎಂದು ಅವರು ಆಹ್ವಾನವನ್ನು ಇತ್ತರು.

"ಓ, ಹಾಗೇ ಆಗಲಿ", ಎಂದ ಬಾಷಿ.

ಮೂಪ, ಬಾಷಿ ಮತ್ತು ನಾನು ನಸುಕು ಹರಿಯುವ ಮೊದಲೇ ದೋಣಿ ಬಿಟ್ಟು ಶಹರ ಸೇರಿದೆವು.

ನನ್ನ ಪ್ರೀತಿಯ ಊರು ನಿದ್ದೆಯ ತೆಕ್ಕೆಯಲ್ಲಿತ್ತು. ಮುಸುಕಿದ್ದ ಇಬ್ಬನಿಯಲ್ಲಿ ಬೀದಿಯ ವಿದ್ಯುದ್ದೀಪಗಳು ಮಿಣುಕು ಹುಳುಗಳ ಹಾಗೆ ಕಾಣಿಸುತ್ತಿದ್ದವು. ಹಗಲು ಲೆಕ್ಕವಿಲ್ಲದಷ್ಟು ಸಲ ಸುಳಿದಾಡಿದ್ದ ರಸ್ತೆಯಲ್ಲಿ ನಡೆಯುವ ಸ್ವಾತಂತ್ರ್ಯವನ್ನೇ ಕಳೆದುಕೊಂಡು, ಎಂದಾದರೊಮ್ಮೆ, ರಸ್ತೆ ನಿರ್ಜನವಾಗಿದ್ದಾಗ ನುಸುಳಿಹೋಗುವುದು ಎಷ್ಟು ಮಧುರ! ಮುಖ್ಯ ಬೀದಿಗಳನ್ನು ದಾಟಿ, ನಗರದ ಹೊರ ಆವರಣದಲ್ಲಿದ್ದ ಮೂಪನ ಮನೆಯನ್ನು ಬೆಳಗಾಗುವ ಮೊದಲೇ ತಲುಪಿದೆವು.

ಅಲ್ಲಿ ನಾನು ಹಲವು ದಿನಗಳಿದ್ದೆ. ಕತ್ತಲಾದಮೇಲಷ್ಟೇ ಹೊರಬೀಳುತ್ತಿದ್ದುದು. ಎಷ್ಟೋ ರಾತ್ರಿ ಇತರ ಕಾರ್ಯಕರ್ತರು ಮಾತುಕತೆಗಾಗಿ ಆ ಮನೆಗೇ ಬರುತ್ತಿದ್ದರು.

ನನ್ನೆದುರಲ್ಲಿ ಮನಬಂದಂತೆ ವರ್ತಿಸುವುದು ಸಾಧ್ಯವಿಲ್ಲದ್ದರಿಂದ, ಮೂಪ ಹೆಚ್ಚಿನ ಸಮಯವನ್ನು ಬಂದರದಲ್ಲೇ ಕಳೆಯುತ್ತಿದ್ದ. ರಾತ್ರಿ ಊಟಕ್ಕೆ ಬಂದರೆ ಬಂದ; ಇಲ್ಲದಿದ್ದರೆ ಇಲ್ಲ.

ಮೂಪ ಬಂದಾಗ ಬಾಷಿ ಸೊಂಟಕ್ಕೊಂದು ಅಡ್ಡ ವಸ್ತ್ರಬಿಗಿದು, ಕೈಕಟ್ಟಿ, ಸದಾ ಸಿದ್ಧನಾದ ಸೈನಿಕನಂತೆ ನಿಲ್ಲುತ್ತಿದ್ದ. ಮೂಪ ನಾಭಿಯಿಂದಲೇ ಸ್ವರ ಹೊರಡಿಸಿ "ಬಾಷೀ" ಎಂದು ಕರೆದು ಆಜ್ಞೆ ಕೊಟ್ಟರೆ, ಬಾಗಿ, ಬಾಯಿಗೆ ಅಂಗೈ ಅಡ್ಡ ಹಿಡಿದು, 'ಓ' ಎನ್ನುತಿದ್ದ "ಸೈನಿಕ". ಇದನ್ನೆಲ್ಲ ಕಂಡು ನನಗೆ ನಗು ಬರುತ್ತಿತ್ತು. ಮೂಪನಿಗೆ ಮಾತ್ರ ಅದು ಸಾಮಾನ್ಯ ಸಂಗತಿ. ಅವನು ಯಜಮಾನನಲ್ಲವೇ? ಬಾಷಿ ಆಳಲ್ಲವೇ?

ಮೂಪನಿಲ್ಲದಾಗ ಬಾಷಿ ನನ್ನ ಜತೆಯಲ್ಲೇ ಇರುತ್ತಿದ್ದ. ಅದು ಒಳಗಿನ ಕೊಠಡಿ. ಹೊರಗಿನಿಂದ ಯಾರು ಬಂದರೂ, "ಮೂಪರಿಲ್ಲ" ಎಂದು ಹೇಳಿ ಬಾಷಿ ಅವರನ್ನು ವಾಪಸು ಕಳಿಸುತ್ತಿದ್ದ. ನಾನು ಯಾರೆಂಬುದು, ಆ ಜೀವನ ಯಾಕೆ ಹಾಗೆ ಎಂಬುದು, ಅವನಿಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಆದರೆ ಅವನ ತೀಕ್ಷ್ಣ ದೃಷ್ಟಿ ಕಲ್ಪನೆಯ ಚಿತ್ರವನ್ನೇನೋ ಕಾಣುತ್ತಿದ್ದಂತೆ ನನಗೆ ಭಾಸವಾಗುತ್ತಿತ್ತು.

ಒಂದು ದಿನ ಬಾಷಿ ಅಂದ:

"ಸ್ವಾಮಿ, ನಾನೊಂದು ಪ್ರಶ್ನೆ ಕೇಳಬಹುದಾ? ಉತ್ತರ ಕೊಡುತ್ತೀರಾ?"

"ಹೂಂ."

"ಸ್ವಾಮಿಗೆ ಏನು ಕೆಲಸ? ಯಾರು ಯಾರೋ ರಾತ್ರಿ ಬಂದು ಕಂಡು ಹೋಗುತ್ತಾರಲ್ಲ?"

ನಾನು ಮುಗುಳ್ನಕ್ಕೆ.

"ಕೇಳಿದ್ದು ತಪ್ಪಾಯಿತೇನೋ?" ಎಂದ ಬಾಷಿ.

"ಇಲ್ಲ", ಎಂದೆ. ಸ್ವಲ್ಪದರಲ್ಲೆ. ನಾಲ್ಕು ಮಾತಿನಲ್ಲೆ, ವಿವರಿಸಿದೆ. ಸುಖದ ನೋವು ಉಣ್ಣುವವನಂತೆ ಆತ ಚಡಪಡಿಸಿದ. ಆ ಕಣ್ಣುಗಳು ಪುಳಕಗೊಂಡು ನಗುತ್ತಿದ್ದವು. ಗಳಗಳನೆ ಕಣ್ಣೀರು ಹರಿಯುತ್ತಿತ್ತು.

"ಸಖಾವೆ! ಬಂಧು!" ಎಂದಾತ ಸಂಬೋಧಿಸಿದ.

ನನಗೆ ಆಶ್ಚರ್ಯವಾಯಿತು.

ಬಾಷಿ ಒಂದು ಮಣೆತಂದು ಗೋಡೆಗೆ ಒರಗಿಸಿ ಮೇಲೇರಿದ. ಛಾವಣಿಯ ಎಡೆಯಿಂದ ಚಿಕ್ಕದೊಂದು ಪ್ಯಾಕೆಟ್ ತೆಗೆದ. ಹೊರಗೆ ಬಟ್ಟೆಯ, ಒಳಗೆ ಕಾಗದದ, ಆವರಣದ ನಡುವೆ ಕೆಂಪು ಕವಚದ ಗುರುತು ಚೀಟಿಯೊಂದಿತ್ತು..

"ಸಖಾವೆ! ಇಗೊಳ್ಳಿ.... ನಾನೂ ಒಬ್ಬ ಮೆಂಬರ್...."

ಬಷೀರ್ ಮತ್ತು ನಾನು ರಕ್ತ ಸಂಬಂಧಿಗಳಾಗಿದ್ದೆವು! ಬರಸೆಳೆದು, ಅವನ ಹೆಗಲ ಮೇಲೆ ಕೈಯಿಟ್ಟು, ಮೂಕನಾಗಿ ಅವನ ಮುಖವನ್ನೆ ನೋಡಿದೆ.

"ನಾನು ಕೆಲಸಕ್ಕಾಗಿ ಊರು ಬಿಟ್ಟು ಬಂದೆ ಎಂದಿರಲಿಲ್ಲವೆ ಸಖಾವೆ? ಅದು ತಪ್ಪು..."

"ಮತ್ತೆ?"

ಕಣ್ಣೊರೆಸುತ್ತ ಬಷೀರ್ ಮುಂದುವರಿಸಿದ:

"ದಬ್ಬಾಳಿಕೆ ಸಹಿಸಲಾರದೆ ಓಡಿ ಬಂದೆ. ನನ್ನ ಅಣ್ಣನನ್ನು ಹಿಡಿದು ಹೊಡೆದು ಪಕ್ಕೆಲುಬು ಮುರಿದು ಬೇಡಿಹಾಕಿ ಜೈಲಿಗೆ ಒಯ್ದರು. ನಾನೂ ಹೊಡೆತ ತಿಂದೆ, ಸತ್ತು ಬದುಕಿದೆ. ನಾವಿಬ್ಬರೂ ಸಂಘದವರು. ಮನೆಯಲ್ಲಿ ಇರುವವಳು ವಯಸ್ಸಾದ ತಾಯಿ ಒಬ್ಬಳೇ, ಜನ್ಮಿಯ ಹೊಲದಲ್ಲಿ ದಿನಗೂಲಿಗೆ ದುಡಿಯಲು ಹೋಗ್ತಾಳೆ. ಎಲ್ಲಿಯಾದರೂ ಹೋಗಿ ಜೀವ ಉಳಿಸಿಕೋ ಮಗ ಅಂತ ಅವಳೇ ಹೇಳಿದ್ದು. ಸಂಘದವರನ್ನು ಕೇಳೋಣವೆಂದರೆ ಯಾರೂ ಸಿಗಲಿಲ್ಲ. ಕೆಲವರನ್ನು ಹಿಡಿದಾಗಿತ್ತು. ಉಳಿದ ಹಲವರು ಕಾಡು ಸೇರಿದ್ದರು. ನಾನೂ ಕಾಡಿಗೆ ಹೋಗಬಹುದಾಗಿತ್ತು. ಆದರೆ, ಪುಕ್ಕ....ಓಡಿ ಬಂದೆ."

ಬಷೀರ್ ಬಿಕ್ಕಿ ಬಿಕ್ಕಿ ಅತ್ತ.

"ಅಳಬೇಡ, ಅಳಬೇಡ ಬಾಷಿ," ಎಂದೆ.

ಊರಿನಲ್ಲಿ ಏನಾಗುತ್ತಿದೆಯೋ ಎಂದು ತಿಳಿಯುವ ಕಾತರ ಅವನಿಗೆ. ಅನ್ನಸಮರ ಎಲ್ಲಿಗೆ ಬಂತು? ತನ್ನ ಮುದಿ ತಾಯಿ ಏನಾದಳೋ? ಅಣ್ಣ? ಸಂಘದವರು?

ಆ ಮಾಹಿತಿಯೆಲ್ಲ ನನ್ನಲ್ಲಿರಲಿಲ್ಲ. ಆದರೂ, ಅವನ ತಾಲೂಕಿನಲ್ಲಿ ಏನಾಗುತ್ತಿತ್ತೆಂಬುದನ್ನು ಓದಿ-ಕೇಳಿ ತಿಳಿದದ್ದನ್ನು ಅವನಿಗೆ ವಿವರಿಸಿದೆ.

ಬಾಷಿ ಮತ್ತು ನಾನು ಹೆಚ್ಚು ಹತ್ತಿರದವರಾದೆವು. ಆತ ನನ್ನನ್ನ "ಚಿಚಾ" ಎಂದು ಕರೆಯತೊಡಗಿದ.

ಹತ್ತುಹದಿನೈದು ದಿನ ನಾನು ಬೇರೆ ಕಡೆಯಲ್ಲಿದ್ದು ಪುನಃ ಮೂಪನ ಮನೆಗೆ ಬಂದೆ. ಸಂವಾದ, ಚರ್ಚೆ ಬಾಷಿಯ ವಿಕಾಸಕ್ಕೆ ಕಾರಣವಾದುವು. ಅವನ ಜೀವ ಪೂರ್ಣತೆಯ ಗುರಿಯತ್ತ ಮುನ್ನುಗ್ಗಲು ತುಡಿಯುತ್ತಿತ್ತು. ಊರು ಬಿಟ್ಟಿದರಿಂದ ಆದ ಕರ್ತವ್ಯ ಲೋಪಕ್ಕಾಗಿ ಆತ ಪರಿತಪಿಸುತ್ತಿದ್ದ.

ಒಂದು ದಿನ ಬಾಷಿ, "ಸಖಾವೆ, ಒಂದು ಕೇಳಲಾ?" ಎಂದ.

"ಒಂದಲ್ಲ, ಎರಡಿರಲಿ!"

"ಹಾಗಲ್ಲ ಸಖಾವೆ, ನಾನು ಊರಿಗೆ ಹೋಗಲಾ?"

ನಾನು ಸೂಚಿಸಬೇಕೆಂದಿದ್ದುದನ್ನು ಬಾಷಿಯೇ ಹೇಳಿದ ಹಾಗಾಯಿತು.

"ಹೂಂ ಬಾಷಿ, ನಿನ್ನ ಅಭಿಪ್ರಾಯ ಸರಿ," ಎಂದೆ. ಅವನಿಗೆ ಸಂತೋಷವಾಯಿತು.

ಈ ನಡುವೆ ನನ್ನ ಊರಲ್ಲೇ ಉಗ್ರ ಹೋರಾಟಗಳು ಶುರುವಾಗಿದ್ದುವು. ಮರ್ದನಕ್ಕೆ ತುತ್ತಾಗಿ ಜನತೆ ಕಂಗೆಡುವಂತಾಗಿತ್ತು. ಪ್ರತಿಯೊಬ್ಬನೂ ಒಂದಲ್ಲ ಒಂದು ಖಚಿತ ನಿಲುವನ್ನು ತಳೆಯುತ್ತಿದ್ದ. ಮಧ್ಯಮಾರ್ಗವೆಂಬುದೇ ಇರಲಿಲ್ಲ. ಬಂದರ ಕೆಲಸಗಾರರ ಮೇಲಾದ ಲಾಠೀಪ್ರಹಾರ ಮೂಪನ ನಿಜರೂಪವನ್ನು ಬಯಲು ಮಾಡಿತು. ಮೂಪ ಧನಿಗಳ ಪಕ್ಷ ಸೇರಿದ.

ಆಮೇಲೆ ಅವನ ಮನೆ ಸುರಕ್ಷಿತ ತಾಣ ಎನಿಸಲಿಲ್ಲ. ಬಂದೂಕನ್ನಲ್ಲ, ಬರಿಯ ಲಾಠಿಯನ್ನು ನೋಡಿಯೇ ಮೂಪನ ಹುರಿಮೀಸೆ ಜೋತು ಬಿದ್ದಿತ್ತು! ಅಧ್ಯಕ್ಷಗಿರಿಗೆ ಆತ ರಾಜನಾಮೆ ಕೊಟ್ಟ; ತನ್ನ ಸಂರಕ್ಷಣೆಗಾಗಿ ಎರಡು ಸಾವಿರ ರೂಪಾಯಿ ಖರ್ಚು ಮಾಡಿದ!

ಒಂದು ರಾತ್ರಿ ಹಾದಿಯಲ್ಲಿ ಅವ ನನ್ನು ಹಿಡಿದು ನಿಲ್ಲಿಸಿದೆ. ತಪ್ಪಿಸಿಕೊಂಡು ಹೋಗಲು ಯತ್ನಿಸಿದ, ಬಿಡಲಿಲ್ಲ. ಅವನನ್ನು ಕೆಣಕಬೇಕೆನಿಸಿತು.

"ಮೂಪ! ಬಾಷಿ ಯಾರು ಗೊತ್ತೋ ನಿನಗೆ?"

"ಬಾಷಿ?"

"ಹೂಂ ಬಾಷಿ ನಮ್ಮವನು. ಆ ಜಿಲ್ಲೆಯಲ್ಲಿ ಮೆಂಬರು."

"ಓ!"

ಆ ರಾತ್ರಿ ಬಷೀರನ ಮೇಲೆ ಮೂಪ ಕೈಮಾಡಲು ಬಂದನಂತೆ. ಬೆಳಗು ಮುಂಜಾನೆ ತಪ್ಪಿಸಿಕೊಂಡು, ಹಗಲು ಎಲ್ಲೋ ಇದ್ದು, ರಾತ್ರಿ ನನ್ನನ್ನು ಹುಡುಕಿ ಹಿಡಿದು, ಅದನ್ನೆಲ್ಲ ಹೇಳಿದ ಬಾಷಿ.

ಮುಂದಿನ ವಾರ ಬಷೀರ್ ಮಹಮ್ಮದ್ ತನ್ನ ಊರಿಗೆ ಹೋದ.

ಮುಂದಿನ ನಾಲ್ಕೈದು ವರ್ಷಗಳ ಅವಧಿಯಲ್ಲಿ ಜಗತ್ತಿನರೂಪವೇ ಬದಲಾಯಿತು. ನನ್ನ ನಾಡು, ನೆರೆನಾಡು ಯಾವುದೂ ಆ ರೂಪಾಂತರದ ಮಹಾವೃತ್ತದಿಂದ ಹೊರಗಾಗಲಿಲ್ಲ.

ಅದೊಂದು ಅಮರ ಇತಿಹಾಸ. ಅದನ್ನು ಬರೆದು ಮುಗಿಸಲು ಹಲವು ಸಂಪುಟಗಳು ಬೇಕು.

ಆ ಕಾಲದಲ್ಲಿ ಬಷೀರನ ಸಮಾಚಾರ ಎರಡು ಮೂರು ಬಾರಿ ಬಂದಿತ್ತು. ಆತ ಸಾಹಸಿಯಾಗಿ, ಹೊಸ ಸಮಾಜ ರಚನೆಯ ಮಹಾಸೇನೆಯ ನಿಷ್ಠಾವಂತ ಯೋಧನಾಗಿ, ಜನತೆಯ ಮುಂದಳದ ನಾಯಕನಾಗಿ ಬೆಳೆದು ಬಂದ ವೈಖರಿ ಅಸಾಧಾರಣವಾದದ್ದು.

ನಾಲ್ಕನೆಯ ಕ್ಲಾಸು ಕಲಿತಿದ್ದ ಮಾಪಿಳ್ಳೆಯರ ಹುಡುಗ ಒಂದು ತಾಲ್ಲೂಕಿನ ಮೂವರು ನಾಲ್ವರು ಯುವಪ್ರಮುಖರಲ್ಲಿ ಒಬ್ಬನಾಗಿದ್ದ.

ಕಳೆದ ವರ್ಷವಷ್ಟೆ ಬಂದ ಪತ್ರದಲ್ಲಿ ಅವನು ಬರೆದಿದ್ದ:

ಸಖಾವೆ ಚಿಚಾ,

ನನ್ನ ಚಿಚಾಗೆ ಒಂದು ಕಾಗದ ಬರೆಯಬಹುದೆ? — ಎಂದು ಜಿಲ್ಲಾ ಕಮಿಟಿಯವರನ್ನು ಕೇಳಿದೆ. ಬರೆಯಬಹುದು—ಎಂದರು. ಇಕೋ ಬರೆಯಲು ಶುರುಮಾಡಿಯೇ ಬಿಟ್ಟೆ....

ಆದರೆ ಏನು ಬರೆಯಲಿ? ಚಿಚಾನಿಗೆ ಏನು ಬರೆಯಲಿ?

ಚಿಚಾ! ನಿಮ್ಮಲ್ಲಿಂದ ಬಂದು ಮೂರು ವರ್ಷಗಳಾದ ಮೇಲಿನ ಕಾಗದ ಇದು. ಮುಂಚೆಯೇ ಬರೆಯಲಿಲ್ಲ, ಕೋಪವಿಲ್ಲವಷ್ಟೆ? ಆ ದಿನ ನಿಮ್ಮನ್ನು ಕಾಣಲು ಬಂದವರು ಎಲ್ಲ ವಿಷಯ ನಿಮಗೆ ತಿಳಿಸಿರಬಹುದು. ನಮ್ಮ ಕೆಲಸದ ಒಂದು ಮುಖ್ಯ ಅಂಶ ಮುಗಿಯಿತು. ಇನ್ನೊಂದು ಅಂಶ ಉಳಿದಿದೆ. ಅದರಲ್ಲಿ ಎಲ್ಲರೂ ತಲ್ಲೀನರಾಗಿದ್ದೇವೆ. ಎಲ್ಲ ಶಕ್ತಿಯೂ ಅದಕ್ಕಾಗಿಯೇ ವಿನಿಯೋಗವಾಗುತ್ತಿದೆ.

ಆಗಾಗ್ಗೆ ನಿಮ್ಮ ನೆನಪಾಗುತ್ತದೆ. ಆಗಾಗ್ಗೆ ಏನಾದರೂ ಕೆಲಸ ಮೊದಲು ಮಾಡುವಾಗ, ಚಿಚಾ ಆಗಿದ್ದರೆ ಹೀಗೆ ಮಾಡುತ್ತಿದ್ದರು ಎಂದು ಯೋಚಿಸುತ್ತೇನೆ.

ಅಣ್ಣನನ್ನು ಬಿಡಿಸಿಯಾಯಿತು. ನಿಮ್ಮನ್ನೊಮ್ಮೆ ಕಾಣಬೇಕಂತೆ ಅವನಿಗೆ. ಮುದುಕಿ ತಾಯಿ, "ಮಗ, ನಿನ್ನನ್ನು ಹೆತ್ತದ್ದು ವ್ಯರ್ಥವಾಗಲಿಲ್ಲ; ಇನ್ನು ಸುಖವಾಗಿ ಸಾಯಬಹುದು; ಆದರೆ ಸಾಯುವುದಕ್ಕೆ ಮುಂಚೆಯೊಮ್ಮೆ ನಿನ್ನ ಚಿಚಾನನ್ನು ಕಾಣಬೇಕು" ಎನ್ನುತ್ತಾಳೆ. ಅಮ್ಮನಿಗೆ ನಿಮ್ಮ ಎಲ್ಲ ವಿಚಾರ ಹೇಳಿದ್ದೇನೆ.

ಮೂಪ ಊರು ಬಿಟ್ಟು ಓಡಿ ಹೋದದ್ದು ತಿಳಿಯಿತು. ಪತ್ತೆಯಾಯಿತೋ? ಮೀಸೆ ಬೋಳಿಸಿ ಬೊಂಬಾಯಿ ಗಿಂಬಾಯಿಯಲ್ಲಿದ್ದಾನು!

ಆ ದೋಣಿಯ ಇಬ್ಬರಿಗೂ ನನ್ನ ಪ್ರೀತಿಯ ವಂದನೆ ಮುಟ್ಟಿಸಿ. ಆ ದೋಣಿಯ ಚುಕ್ಕಾಣಿ ತಿರುವಿಯೇ ನನ್ನ ಬಾಹು ಬಲಿಯಿತು!

ಮತ್ತೆ, ಮತ್ತೇನು? ಬರುತ್ತೇನೆ ಯಾವಾಗಲಾದರೂ, ಯಾವಾಗಲೋ-ಗೊತ್ತಿಲ್ಲ. ಮಾಡಬೇಕಾದ ಕೆಲಸ ಇಲ್ಲಿ ಬೆಟ್ಟದಷ್ಟಿದೆ... ಒಂದು ನಿಮಿಷವನ್ನೂ ವ್ಯರ್ಥ ಕಳೆಯಲು ಮನಸ್ಸಾಗುವುದಿಲ್ಲ....

ಬಿಡುವು ದೊರೆತಾಗ ಉತ್ತರ ಬರೆಯಿರಿ....

.... ಬಾಷಿ"

೦ ೦ ೦ ೦

ಆತ ನಗುತ್ತ ನಿಂತಿದ್ದಾನೆ-ಆ ಭೀಮಕಾಯ; ಹೃಷ್ಟಪುಷ್ಟವಾದ ಎತ್ತರದ ದೇಹ, ತುಂಬು ಮುಖ, ಅರಳಿದ ಕಣ್ಣುಗಳೆರಡು, ಹಣೆಯ ಮೇಲೆ ಕುಣಿದಾಡುತ್ತಿರುವ ಮುಂಗುರುಳು, ಸ್ವಯಂಸೇವಕನ ಉಡುಗೆ—ಆತ ನಗುತ್ತಲೇ ಇದ್ದಾನೆ.

"ಬಾಷಿ!"

"ಚಿಚಾ!"

ಅವನ ಕತ್ತಿನ ಸುತ್ತಲೂ ಎರಡು ಕೈಗಳ ಉರುಳು ಹಾಕಿದೆ. ಆನಂದದ ಅತಿರೇಕ—ಕಣ್ಣು ಹನಿಯಾಡಿತು,

"ಬಾಷಿ!"

"ಹೇಳು ಚಿಚಾ!"

"ನಡೀ ಕಿನಾರೆಗೆ ಹೋಗೋಣ ಇವತ್ತು" ಆ ದೋಣಿಯನ್ನು ಹುಡುಕಿ ಹಿಡಿಯೋಣ "ಅಲ್ಲಿ ಇರೋಣ ಸ್ವಲ್ಪ ಹೊತ್ತು, ಆ ಗಂಜಿ-ಚಟ್ನಿ ....!"

ಹೂಂ ಹೂಂ-ನಾಳೆ ಬೆಳಗಿನವರೆಗೂ ಬಿಡುವಿದೆ. ನೀನು ಹೇಳಿದ್ದಕ್ಕೆ ಸಿದ್ಧ...."

"ಬೆಳಗಾದ ಮೇಲೆ?"

ಬೆಳಗಾದ ಮೇಲೆ ಕೆಲಸ ಇಬ್ಬರಿಗೂ!"

ಘಣಘಣ ಎಂದಿತು ಘಂಟೆ. ಅದು ಸಮಯ ಸೂಚಿ. ಸಾಯಂಕಾಲದ ಚಹಕ್ಕಾಗಿ ಕರೆ.

"ಏಳು ಬಾಷಿ, ಚಾ ಕುಡಿಯೋಣ", ಎಂದೆ.

ಶಾಲೆಯ ಹುಡುಗರಂತೆ ಕೈಕೈ ಹಿಡಿದು ಆಡಿಸುತ್ತ ಆ ರಕ್ತಸಂಬಂಧಿಯನ್ನು ಹೊರಗೆ ಕರೆದೊಯ್ದೆ.

★

ಕೃಷ್ಣೆಯ ಮಡುವಿನಲ್ಲಿ

• ಎನ್. ಕೆ. ಉಪಾಧ್ಯಾಯ

ಮೂವತ್ತೆರಡು ವರ್ಷದ ರಾಜೇಸಾಬ ಮೌಲಾಸಾಬ ದೊಡ್ಡಮನೆ 1953 ಜೂನ್ 4 ರಂದು ಮುಸ್ಸಂಜೆಗೆ ಕೃಷ್ಣೆಯ ಮಡುವಿನಲ್ಲಿ ಕಾಣೆಯಾದ. ಹೆಣವಾಗಲೀ, ಎಲುಬಾಗಲಿ ಕೈಹತ್ತಲಿಲ್ಲ.

1953 ಜೂನ್ ಮೊದಲನೇ ವಾರ. ಜೂನ್ 6ರಂದು ರೋಹಿಣಿ ನಕ್ಷತ್ರ ಗತಿಸಿ 7ರಂದು ಮೃಗಶಿರ ನಕ್ಷತ್ರ ಕೂಡುತ್ತದೆ. ಆ ದಿವಸ ಮಾಗಿ ಮಳೆ ಆಗಲೇ ಬೇಕು. ರೈತನ ಬಿತ್ತನೆಯ ಕೆಲಸ ಪ್ರಾರಂಭವಾಗಲೇ ಬೇಕು. ಮಲ್ಲಪ್ಪ ತನ್ನ ಹೊಲದಲ್ಲಿ ಜೋಳ, ಸಜ್ಜಿ ಬಿತ್ತಬೇಕು. ಗಣಿ ದೇಸಾಯರ ಗೂಂಡಾ ಜನರು ಮಲ್ಲಪ್ಪನಿಗೆ ಬಿತ್ತನೆ ಮಾಡದಂತೆ ಕೆಲವು ವರ್ಷಗಳಿಂದ ಆತಂಕ ಒಡ್ಡುತ್ತಲೇ ಬಂದಿದ್ದಾರೆ. ಈ ವರ್ಷ ಮಲ್ಲಪ್ಪ ತನ್ನ ಹೊಲದಲ್ಲಿ ಬೆಳೆ ತೆಗೆಯಲೇಬೇಕು. ತಾನೂ ಹೆಂಡರು ಮಕ್ಕಳೂ ತನ್ನ ಹೊಲದ ಜೋಳದಿಂದ ಹೊಟ್ಟೆ ತುಂಬ ರೊಟ್ಟಿ ತಿನ್ನಲೇಬೇಕು. ಇದು ರೈತ ಸಂಘದ ನಿರ್ಧಾರ.

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಸಣ್ಣದೊಂದು ಹಳ್ಳಿ ಗಣಿ. 1500 ಜನಸಂಖ್ಯೆ. ಈ ಗ್ರಾಮದ ಭೂಮಿಯನ್ನು ಪವಿತ್ರಗೊಳಿಸಿ ಕೃಷ್ಣೆ ಹರಿಯುತ್ತಾಳೆ. ಮಳೆಗಾಲದಲ್ಲಿ ಕೃಷ್ಣೆ ಗ್ರಾಮದ ಸೊಂಟದವರೆಗೂ ಹರಿಯುತ್ತಾಳೆ. ಪಶ್ಚಿಮ ಘಟ್ಟದಿಂದ ಹರಿಯುವ ಕೃಷ್ಣೆಯೊಡನೆ ಮಳೆಗಾಲದಲ್ಲಿ ನೆರೆ ನೀರಿನೊಂದಿಗೆ ಉತ್ತಮ ಅವೆ ಮಣ್ಣು ಹರಿದು ಬರುತ್ತದೆ. ತನ್ನೆರಡು ದಂಡೆಯಲ್ಲಿ ಮಣ್ಣನ್ನು ಬಿಟ್ಟುಹೋಗಿ ಉತ್ತಮ ಫಸಲಿಗೆ ಸಹಾಯ ಮಾಡುತ್ತಾಳೆ ಕೃಷ್ಣೆ.

ಕ್ಷತ್ರಿಯ ಕುಲದವನಾದ ಗಣಿಯ ಕಾಶೀರಾಯ ದೇಸಾಯಿ ಮೂವತ್ತು ಗ್ರಾಮಗಳ ಮಾಲಕ. ಈ ಹಳ್ಳಿಗಳನ್ನು ಬ್ರಿಟಿಷರು ಇವರ ತಂದೆಯವರಿಗೆ ದಾನ ಮಾಡಿದ್ದರಂತೆ. ದೇಸಾಯರ ಅಪ್ಪಣೆಯಿಲ್ಲದೆ ಈ ಮೂವತ್ತು ಗ್ರಾಮಗಳಲ್ಲಿ ಒಂದು ಕಡ್ಡಿ ಕೂಡ ಅಲುಗಾಡುವಂತಿಲ್ಲ. ದೊಡ್ಡ ಧಣಿಯರ ಆಡಳಿತ ಆ ರೀತಿ ನಡೆಯುತ್ತಾ ಬಂದಿತ್ತು.

ದೇಸಾಯರಿಗೆ ಸರಿಸಮಾನವಾಗಲ್ಲದಿದ್ದರೂ, ಬಡ ರೈತರನ್ನು ಜನ್ನ ಹತ್ತಿಸಿಕೊಂಡು ದೇಸಾಯರನ್ನು ವಿರೋಧಿಸುತ್ತ ಬಂದಿರುವ ಒಬ್ಬ ವ್ಯಕ್ತಿ ರಾಜೇಸಾಬ ಮೌಲಾಸಾಬ ದೊಡ್ಡ ಮನೆ. ಹಿಂದಿನ ಕಾಲದಲ್ಲಿ ಬ್ರಿಟಿಷ್ ಅಧಿಕಾರಿ ಗಣಿ ಗ್ರಾಮವನ್ನು ಸಂದರ್ಶಿಸಿದಾಗ ಅವನಿಗೆ ಕೂಡ್ರುವ ಸಲುವಾಗಿ ಕಂಬಳಿ ಹಾಸಿದ್ದರೆಂದು ಹರ್ಷಗೊಂಡ ಆ ಬಿಳಿ ಮನುಷ್ಯ ನಿನ್ನ ಕೂಗು ಕೇಳುವಷ್ಟು ಭೂಮಿ ನಿನ್ನ ಮಾಲಕೀದ್ದಾಗಿರುತ್ತದೆಂದು ರಾಜೇಸಾಬನ ತಂದೆಯವರಿಗೆ ಹೇಳಿದ್ದನಂತೆ. ಅಂದಿನಿಂದ 300-400ಎಕರೆ ಭೂಮಿಯ ಮಾಲಕನೀತ. ರಾಜೇಸಾಬನನ್ನು ಸಣ್ಣ ಧನಿ ಎಂದು ನಾವೆಲ್ಲ ಕರೆಯುತ್ತಿದ್ದೆವು.

ಮೂವತ್ತು ಗ್ರಾಮಗಳ ಜನರನ್ನೆಲ್ಲ ತನ್ನ ಹಿಡಿತದಲ್ಲಿಟ್ಟುಕೊಳ್ಳಲು, ತನ್ನ ದಲ್ಲದ ಭೂಮಿಯನ್ನೆಲ್ಲ ವಶಪಡಿಸಿಕೊಳ್ಳಲು ಗೂಂಡಾ ಜನರ ಸೈನ್ಯವನ್ನೇ ರಚಿಸಿದ್ದ ಧಣಿ ಕಾಶೀರಾಯ. ಕುಡಿಯುವುದು, ಬೆದರಿಸುವುದು, ಹೊಡೆಯುವುದು, ಕೊಲೆ ಮಾಡುವುದು ಇವೆಲ್ಲ ಈ ಜನರ ಕೆಲಸ. ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಸಿಕ್ಕಿತು. ಆದರೆ ಈ 30 ಹಳ್ಳಿಗಳಿಗೆ ದೇಸಾಯರಿಂದಲೂ, ಅವರ ಗೂಂಡಾ ಜನರಿಂದಲೂ ಸ್ವಾತಂತ್ರ್ಯ ಸಿಗಲಿಲ್ಲ.

1917ರಲ್ಲಿ ರಷ್ಯಾ ದೇಶದಲ್ಲಾದ ಸಮತಾವಾದಿ ಕ್ರಾಂತಿ ಭಾರತ ದೇಶದ ಸ್ವಾತಂತ್ರ್ಯ ಹೋರಾಟದ ಮೇಲೆ ಪರಿಣಾಮವನ್ನುಂಟುಮಾಡಿದಂತೆಯೇ 1947ರ ಘಟನೆಯೂ ಗಣಿ ಗ್ರಾಮದ ಸುತ್ತಮುತ್ತಲ ಜನರ ಮೇಲೂ ಸ್ವಲ್ಪ ಪರಿಣಾಮ ಬೀರಿದಂತಾಗಿತ್ತು. ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದಾಗಲೂ ದೇಸಾಯರ ದಬ್ಬಾಳಿಕೆಯ ವಿರುದ್ಧ ಧೈರ್ಯದಿಂದ ಹೋರಾಡುತ್ತ ಬಂದಿದ್ದ ರಾಜೇಸಾಬನಿಗೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದನ್ನು ಕಂಡು ವಿದೇಶೀಯರು ದೇಶ ಬಿಟ್ಟು ಹೋದರು, ನಮ್ಮದೇ ಸರ್ಕಾರ ಬಂತು ಇನ್ನು ಮುಂದೆ ಸರ್ಕಾರ, ಪೋಲೀಸರೆಲ್ಲ ತಮಗೆ, ರೈತರಿಗೆ ಬೆಂಬಲ ನೀಡುತ್ತಾರೆ. ದೇಸಾಯರ ದಬ್ಬಾಳಿಕೆಗೆ ಕೊನೆಗಾಲ ಬಂತು ಎಂದೆಲ್ಲ ಕನಸು ಕಂಡು ಸಂತೋಷಪಟ್ಟ. ಆದರೆ ಬ್ರಿಟಿಷರು ಹೋದರೂ ಕೂಡ ಆಡಳಿತೆಯಲ್ಲಿ ಏನೂ ಬದಲಾವಣೆಯಾಗಲಿಲ್ಲ.

1947 ಸೆಪ್ಟೆಂಬರ್ ತಿಂಗಳ ಕೊನೆಯ ವಾರದಲ್ಲಿ 200ಕ್ಕೂ ಹೆಚ್ಚು ರೈತರು ಗಣಿ ಗ್ರಾಮದಿಂದ ಓಡಿಸಲ್ಪಟ್ಟರು, ಬಿಜಾಪುರದಲ್ಲಿ ಹಾಶೀಂಪೀರ್ ದರ್ಗಾದಲ್ಲಿ ಆಶ್ರಯ ಪಡೆದರು. 1943ರಿಂದ 47ರವರೆಗೆ ಆವಾಗಲೇ ಜೈಲಿನಿಂದ ಬಿಡುಗಡೆಯಾಗಿ ಬಂದ ನಾನು ಮತ್ತು ಬಾಲಸಿಂಗ ಮಾಸ್ತರ ಮೊದಲಾದವರು ಬಿಜಾಪುರದಲ್ಲಿ ಬೀಡಿ, ನಗರಸಭೆ, ಹೋಟೆಲ್, ಪ್ರೆಸ್ ಕೆಲಸಗಾರರ, ವಿದ್ಯಾರ್ಥಿಗಳ ಹಾಗೆಯೇ ಕೆಲವು ಹಳ್ಳಿಗಳಲ್ಲಿ ಸಂಘಟನೆ ನಡೆಸಿದ್ದೆವು. ಮುನಿಸಿಪಲ್, ಬೀಡಿ ಕೆಲಸಗಾರರ ಹೋರಾಟಗಳು ನಡೆದಿದ್ದವು. ದೇಸಾಯರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಕಮ್ಯುನಿಸ್ಟರಿಂದ ಮಾತ್ರ ಸಾಧ್ಯವೆಂದು ಮನಗಂಡ ಹಾಶಿಂಪೀರ್ ಸಾಹೇಬರು ಬಾಲಸಿಂಗಮಾಸ್ತರ ಮತ್ತು ನನ್ನನ್ನು ಕರೆಸಿ ವಿಷಯ ತಿಳಿಸಿದರು. ಕಮ್ಯುನಿಸ್ಟ್ ಪಾರ್ಟಿ ಜಿಲ್ಲಾಧಿಕಾರಿಗಳ ಮೇಲೆ ಒತ್ತಾಯ ತಂದು ಪೋಲೀಸರ ಸಹಾಯದಿಂದ ಈ ಜನರನ್ನೆಲ್ಲ ಗಣಿಗೆ ಕಳುಹಿಸಿ ಕೊಡಲಾಯಿತು. ಗಣಿಯಲ್ಲಿ ದಾರುಬಂದಿ ಮಾಡಿ, ಪೋಲೀಸ್ ಪಾರ್ಟಿಯನ್ನಿಡಲಾಯಿತು.

ಈ ಅವಕಾಶವನ್ನುಪಯೋಗಿಸಿ ದೇಸಾಯರ 30 ಹಾಗೆಯೇ ಇತರ ಹಳ್ಳಿಗಳಲ್ಲಿ ರೈತ ಸಂಘಟನೆ ಬೆಳೆಸಲಾಯಿತು. ದೇಸಾಯರ ಭೂಮಿ ರೈತರಿಗೆ ಸಿಗಬೇಕೆಂದೂ, ರೈತರಿಗೆ ಮೋಸ ಮಾಡಿ ವಶಪಡಿಸಿಕೊಂಡ ಭೂಮಿಯನ್ನೆಲ್ಲ ವಾಪಸ್‌ಕೊಡಬೇಕೆಂದೂ ಕರಪತ್ರ, ಭಾಷಣಗಳ ಮೂಲಕ ಜನರಲ್ಲಿ ಪ್ರಚಾರ ಮಾಡಿ, ಅವರಲ್ಲಿ ಧೈರ್ಯ ತುಂಬಲಾಯಿತು.

ನಾನು ಮತ್ತು ಅಲ್ಲಾವುದ್ದೀನ ಹಿಪ್ಪರಗಿಯವರು ತಲೆಮರೆಸಿಕೊಂಡು ಆ ಭಾಗದಲ್ಲಿ ಉಳಿಯಬೇಕಾಗಿ ಬಂತು. ಲಂಬಾಣಿ ತಾಂಡೆ ಮತ್ತು ಗುಡ್ಡ ಪ್ರದೇಶದಲ್ಲಿ ನಾವು ವಾಸಮಾಡಿದೆವು. ಯಾಕೆಂದರೆ ತನ್ನ ಅಧಿಕಾರದ ವಿರುದ್ಧ ರೈತರನ್ನು ಎತ್ತಿಕಟ್ಟುತ್ತಿದ್ದಾರೆ, ಕೋರ್ಟಿನಲ್ಲಿ ದಾವೆ ಹೂಡುತ್ತಿದ್ದಾರೆ, ಕಚೇರಿಗಳಲ್ಲಿ ಕಾಗದ ಪತ್ರ ಹಾಜರು ಪಡಿಸುತ್ತಿದ್ದಾರೆ. ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಿದ್ದಾರೆ — ಇದರಿಂದ ತನ್ನ ಮನೆತನಕ್ಕೆ, ಅಧಿಕಾರಕ್ಕೆ ಹಾನಿ ಉಂಟಾಗುತ್ತದೆಂದು ತಿಳಿದು ಗೂಂಡಾ ಜನರ ಸಹಾಯದಿಂದ ನಮ್ಮನ್ನು ಕೊಲೆ ಮಾಡುವ ಹೊಂಚು ನಡೆಸುತ್ತಿದ್ದರು. ದೇಸಾಯರಿಂದ ರಕ್ಷಣೆಗಾಗಿ ನಾವು ಕವಣೆ ಮತ್ತು ಗಾವಟೆ ಪಿಸ್ತೂಲಧಾರಿಗಳಾಗಿಯೇ ಅಲೆದಾಡಬೇಕಾಗುತ್ತಿತ್ತು.

ಈ ಗ್ರಾಮಗಳಿಗೆ ಸಂಪರ್ಕವಿರುವುದು ಬಾಗಲಕೋಟೆ–ಬಿಜಾಪುರ ರೇಲ್ವೆ ಒಂದೇ. ರೇಲ್ವೆ ಇಳಿದು 8-10 ಮೈಲು ನಡೆಯಬೇಕು. ಮುಳ್ಳು–ಬಂಡೆಯ ಕಾಲು ದಾರಿ. ಬೇರೆ ಯಾವ ವ್ಯವಸ್ಥೆ ಕಾಣೆ. ಅಂಥ ಪ್ರದೇಶದಲ್ಲಿ ಸಂಘಟಿತ ಗೂಂಡಾಜನರ ವಿರುದ್ಧ ನಮ್ಮ ಹೋರಾಟ. ನಮ್ಮ ಕೆಲಸ ರೈತರಲ್ಲಿ ವಿಶ್ವಾಸ ಹುಟ್ಟಿಸಿತ್ತು. ಕೆಲವರಿಗೆ ಭೂಮಿಯ ಹಕ್ಕು ದೊರೆತಿತ್ತು. ಆದ್ದರಿಂದ ನಮಗೆ ಗುಪ್ತ ರೀತಿಯಲ್ಲಿ ಸುತ್ತಾಡಲು, ರಾತ್ರಿ ಆಶ್ರಯ ಪಡೆಯಲು ಸಾಧ್ಯವಾಗುತ್ತಿತ್ತು.

ಬಂದೂಕುಧಾರಿಯಾಗಿ ಕುದುರೆಯ ಮೇಲೆ ತಿರುಗಾಡುವ ಕ್ಷತ್ರಿಯ ದೇಸಾಯಿ ; ಹೋರಾಟದಲ್ಲಿ ಎದೆಗುಂದದವರೆಂದು ಹೆಸರುವಾಸಿಯಾದ ಬೇಡರು ಅವನ ಬೆಂಬಲಿಗರು. ಇಂಥ ಶಕ್ತಿಯ ವಿರುದ್ಧ ನಮ್ಮ ಹೋರಾಟ, ಭೂಮಿಯ ಹಕ್ಕನ್ನು ಪಡೆಯಬೇಕೆಂಬ ರೈತರ ಬೆಂಬಲದಿಂದ.

ಕೋರ್ಟು - ಕಚೇರಿಗಳಲ್ಲಿ ಖಟ್ಲೆ ನಡೆಸುವ ಜವಾಬ್ದಾರಿಯನ್ನು ಡಿ.ಎಂ. ಖಲಾಸಿಯವರಿಗೆ ಒಪ್ಪಿಸಲಾಯಿತು. ನಾನು, ಅಲ್ಲಾವುದ್ದೀನ ಹಿಪ್ಪರಗಿಯವರು ಸಂಘಟನೆ ಪ್ರಚಾರದ ಜವಾಬ್ದಾರಿ ಹೊತ್ತೆವು. ಪ್ರಚಾರ ಸಾಕಷ್ಟು ನಡೆದರೂ, ಜನರಲ್ಲಿ ಧೈರ್ಯ ಸ್ವಲ್ಪ ತುಂಬಿ ಬಂದರೂ ಕೂಡ, ಕಾರ್ಯಕರ್ತರ ಸಂಘಟನೆ ಬೆಳೆಯಲಿಲ್ಲ. ಕಮ್ಯುನಿಸ್ಟರ ಧೈರ್ಯ, ಅವರ ತತ್ವಗಳನ್ನು ಹಳ್ಳಿಗಳಲ್ಲಿ ತಿಳುವಳಿಕೆಯಿದ್ದ ಜನ ಪ್ರಶಂಸೆ ಮಾಡುತ್ತಿದ್ದರೂ ಕೂಡ, ಕಾಂಗ್ರೆಸ್ಸಿನ ವಿರುದ್ಧ ಮತ್ತೊಂದು ಸಂಘಟನೆ ಬೆಳೆಸಲು ಧೈರ್ಯಪಡಲಿಲ್ಲ. ದೇಸಾಯಿ, ಜಹಗೀರದಾರರು, ಸಾಹುಕಾರರು, ಗೂಂಡಾ ಜನರೆಲ್ಲ ಆಗ ಕಾಂಗ್ರೆಸ್ಸಿನಲ್ಲಿದ್ದರು. ಹಳ್ಳಿಗಳಲ್ಲಿ ಇವರೆಲ್ಲರ ಹಿಡಿತ ಬಲವಾಗಿತ್ತು. ಪೋಲೀಸರ, ಅಧಿಕಾರಿಗಳ ಬೆಂಬಲವೆಲ್ಲ ಈ ಜನರಿಗೆ. ಹೀಗಾಗಿ ಜೀವದ ಹಂಗು ಬಿಟ್ಟೇ ಕೆಲಸ ಮಾಡಬೇಕಾಗುತ್ತಿತ್ತು. ಆ ಕಾಲದಲ್ಲಿ ರಸ್ತೆ ಇರಲಿಲ್ಲ, ಬಸ್ಸುಗಳ ಸೌಕರ್ಯ ವಿಲ್ಲ. ಯಾವ ಸುದ್ದಿ ತಿಳಿಸಲೂ ಅವಕಾಶವಿರಲಿಲ್ಲ.

ನಾವು ವಾಸ ಮಾಡಬೇಕಾದ ಸ್ಥಳ ಲಂಬಾಣಿ ತಾಂಡೆಗಳು ಮತ್ತು ಕುರಿ ದೊಡ್ಡಿಗಳು. ಕುರಿ ಹಾಲು – ಕೆಂಪು ಜೋಳದ ರೊಟ್ಟಿ ಕೆಲವು ಸಲ, ಅಥವಾ ಬರೇ ಒಣ ರೊಟ್ಟಿ, ಹಸಿ ಮೆಣಸಿನಕಾಯಿ, ಬಳ್ಳೊಳ್ಳಿ (ಈರುಳ್ಳಿ) ಇದೇ ನಮ್ಮ ಆಹಾರ. ಕಂಬಳಿ ಹಾಸಿ ಕುರಿ ದಡ್ಡಿಯ ಬೆಚ್ಚಗಿನ ಬಯಲಲ್ಲಿ ನಮ್ಮ ರಾತ್ರಿ ನಿದ್ದೆ. ಅಂಥ ಜೀವನದ ಸೊಗಸನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಭಾರತ ದೇಶ ಸ್ವಾತಂತ್ರ್ಯ ಪಡೆದ ಒಂದೇ ವರ್ಷದಲ್ಲಿ ಎರಡು ಸಾವಿರಕ್ಕೂ ಮೇಲ್ಪಟ್ಟು ಕಮ್ಯುನಿಸ್ಟರ ಬಂಧನ. ಸ್ವಾತಂತ್ರ್ಯ ಪೂರ್ವದಿಂದಲೂ ಅಂದರೆ 1945ರಿಂದಲೂ ಆಗಿನ ಹೈದರಾಬಾದ್ ಸಂಸ್ಥಾನದ ತೆಲಂಗಾಣಾ ಪ್ರದೇಶದಲ್ಲಿ (ನಲಗೊಂಡ, ವಾರಂಗಲ್, ಕರೀಂನಗರ ಜಿಲ್ಲೆಗಳಲ್ಲಿ) ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಜಮೀನ್ದಾರರ ವಿರುದ್ಧ ರೈತರೆಲ್ಲ ಭೂಮಿಗಾಗಿ ಸಶಸ್ತ್ರ ಹೋರಾಟ ನಡೆಸುತ್ತಿದ್ದರು. 1947–48ರಷ್ಟೊತ್ತಿಗೆ 3000 ಕ್ಕಿಂತಲೂ ಮೇಲ್ಪಟ್ಟ ಹಳ್ಳಿಗಳಲ್ಲಿ, ನಿಜಾಮನ, ಅವನ ಮಿಲಿಟರಿಯಾದ ರಜಾಕಾರರ, ಜಮೀನುದಾರರ ಆಡಳಿತೆಯನ್ನು ಕೊನೆಗೊಳಿಸಿ, ಆ ಹಳ್ಳಿಗಳಲ್ಲಿ ಕಮ್ಯುನಿಸ್ಟ್ ಪಾರ್ಟಿ ಅಧಿಕಾರ ಚಲಾಯಿಸುತ್ತಿತ್ತು. ಭೂಮಿಯನ್ನು ರೈತರಿಗೆ ಹಂಚಿ, ಅವರಿಗೆ ಬಂದೂಕು, ಪಿಸ್ತೂಲ ಕೊಟ್ಟು ರಜಾಕಾರರ ವಿರುದ್ಧ ಸಶಸ್ತ್ರ ಹೋರಾಟ ಮುಂದುವರಿಸಿತ್ತು.

1947ರ ಆಗಸ್ಟ್ 15 ರಂದು ಬ್ರಿಟಿಷರು ಕಾಂಗ್ರೆಸ್ಸಿಗೆ ಅಧಿಕಾರ ಹಸ್ತಾಂತರ ಮಾಡಿದರು. ದೇಶಕ್ಕೆ ಸ್ವಾತಂತ್ರ್ಯ ಘೋಷಿಸಲ್ಪಟ್ಟಿತಾದರೂ 47–48ರಲ್ಲಿ ಪುನ್ನಪ್ರಾ–ವಯಲಾರ್ (ಕೇರಳ), ತೆಬಾಗಾ (ಬಂಗಾಲ), ವಾರ್ಲಿ (ಮಹಾರಾಷ್ಟ್ರ) ಕಾರವಾರ, ಕೋಲಾರ, ತೀರ್ಥಹಳ್ಳಿ ಬಿಜಾಪುರ (ಕರ್ನಾಟಕ) ಹೀಗೆಯೇ ದೇಶಾದ್ಯಂತ ರೈತರು ಕೆಂಬಾವುಟದಡಿಯಲ್ಲಿ ತೀವ್ರ ಚಳುವಳಿ ನಡೆಸುತ್ತಿದ್ದರು. ಇದರ ಜೊತೆಯಲ್ಲಿ ಮುಂಬಯಿ, ಕಲ್ಕತ್ತಾ ಮತ್ತಿನ್ನಿತರ ಕೇಂದ್ರಗಳಲ್ಲಿ ಕಾರ್ಮಿಕರು ಹೊಸ ಸ್ವರೂಪದ ಚಳುವಳಿ ನಡೆಸುತ್ತಿದ್ದರು. ತೆಲಂಗಾಣಾ ಚಳುವಳಿ ಇದಕ್ಕೆಲ್ಲ ಸ್ಫೂರ್ತಿ ನೀಡುತ್ತಿತ್ತು. ನಿಜವಾದ ಸ್ವಾತಂತ್ರ್ಯ ಸಿಕ್ಕಿಲ್ಲವೆಂಬ ಭಾವನೆ ಜನರಲ್ಲುಂಟಾಗಿತ್ತು. ಈ ಕಾರಣದಿಂದಾಗಿ 1945–46ರಿಂದಲೂ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯದರ್ಶಿಯಾಗಿದ್ದ ಕಾ। ಪಿ. ಸಿ. ಜೋಷಿಯವರ ರಾಜಕೀಯ ನಿಲುವು ಪರಿಷ್ಕರಣದ್ದಾಗಿದೆ, ಕಾಂಗ್ರೆಸ್ ಸರಕಾರಕ್ಕೆ ಬೆಂಬಲಿಸುವಂಥದ್ದಾಗಿದೆಯೆಂದು 1948ರಲ್ಲಿ ಮುಂಬಯಿನಲ್ಲಿ ಸಮಾವೇಶಗೊಂಡ ಭಾರತ ಕಮ್ಯುನಿಸ್ಟ್ ಪಾರ್ಟಿಯ ಎರಡನೇ ಸಮ್ಮೇಳನ ಉಗ್ರ ಹೋರಾಟದ ಪಾರ್ಟಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಕಾ। ಬಿ. ಟಿ. ರಣದಿವೆಯವರನ್ನು ಪಾರ್ಟಿಯ ಪ್ರಧಾನ ಕಾರ್ಯದರ್ಶಿಯವರನ್ನಾಗಿ ಆರಿಸಿತು. ಅನಂತರ ದೇಶಾದ್ಯಂತ ಹೊಸ ಹುಮ್ಮಸದ ಚಳವಳಿ ನಡೆಯಿತು. ಕಮ್ಯುನಿಸ್ಟ್ ಪಾರ್ಟಿಯಲ್ಲಾದ ರಾಜಕೀಯ ಬದಲಾವಣೆ, ಅದರಿಂದಾಗಿ ದೇಶಾದ್ಯಂತ ಪ್ರಾರಂಭವಾದ ಉಗ್ರ ಚಳವಳಿಯಿಂದ ಭೀತಿಗೊಂಡ ನೆಹರೂ ಸರಕಾರ ಆಗ ಗೃಹ ಮಂತ್ರಿಯಾಗಿದ್ದ ವಲ್ಲಭಭಾಯಿ ಪಟೇಲರು 1948 ರ ಮಧ್ಯದಿಂದಲೇ ಎರಡು ಸಾವಿರಕ್ಕೂ ಮೇಲ್ಪಟ್ಟು ಕಮ್ಯುನಿಸ್ಟರನ್ನು ಬಂಧಿಸಿದರು.

ಬಾಲಸಿಂಗ ಮಾಸ್ತರ ಮತ್ತು ನಾನು ತಲೆ ಮರೆಸಿಕೊಂಡೆವು. ಮಕಾನದಾರ, ಖಲಾಸಿ, ಬೀಳಗಿ ಮೊದಲಾದವರೆಲ್ಲ ಬಂಧಿಸಲ್ಪಟ್ಟರು. ಆರು ತಿಂಗಳ ನಂತರ ನಾನು ಹಳ್ಳಿಯಿಂದ ರೈತನಂತೆ ವೇಶ ಧರಿಸಿ ಕಂಬಳಿ ಹೆಗಲ ಮೇಲೆ ಹಾಕಿಕೊಂಡು ರೇಲ್ವೆಯಿಂದ ಇಳಿದು ಬರುತ್ತಿದ್ದಾಗ, ಬಿಜಾಪುರ ನಗರದಲ್ಲಿ ಗಾಂಧಿ ಚೌಕದ ಹತ್ತಿರ ತಪ್ಪಿಸಿಕೊಳ್ಳುತ್ತಿದ್ದಾಗ ನನ್ನನ್ನೂ ಬಂಧಿಸಲಾಯಿತು. ಆಗ ರಾತ್ರಿ ಒಂದು ಗಂಟೆ. ರಾತ್ರಿ ರೈಲ್ವೇ ಸ್ಟೇಶನ್ನಿನಿಂದ ಹೊರಗೆ ಬರುವಾಗಲೇ ಸಿ ಐ ಡಿ, ನನ್ನ ಗುರುತು ಹಿಡಿದಿರಬೇಕು. ಸ್ಟೇಶನ್ನಿನಿಂದ ಗಾಂಧಿ ಚೌಕಿಗೆ ಒಂದು ಮೈಲಾಗುತ್ತದೆ.

(11ನೇ ಪುಟ ನೋಡಿ)

(10ನೇ ಪುಟದಿಂದ)

ನಾನು ಕಾಲ್ನಡಿಗೆಯಲ್ಲೇ ಬರುತ್ತಿದ್ದೆ. ಸಿ.ಐ.ಡಿ.ಗೆ ಖಾತ್ರಿಯಾಗಿರಬಹುದು ನಾನು ಯಾರೆಂದು. ನನ್ನ ಹಿಂದೆಯೇ ಬರುತ್ತಿದ್ದುದನ್ನು ನಾನು ನೋಡಿರಲಿಲ್ಲ. ಊರು ಸಮೀಪ ಬಂದಂತೆ ನನಗೇನೋ ಯಾರೋ ಹಿಂಬಾಲಿಸುತ್ತಿದ್ದಾರೆಂಬ ಸಂಶಯ ಬಂದು ಗಾಂಧಿ ಚೌಕದ ಹತ್ತಿರ ಓಡಲು ಪ್ರಾರಂಭಿಸಿದೆ. ನನ್ನ ನಡಿಗೆಯಿಂದಲೇ ನನ್ನ ಗಂತರ್ಮ ಹಿಡಿದು ನಾನೇ ಎಂದು ಖಾತ್ರಿ ಮಾಡಿಕೊಂಡ ಸಿ.ಐ.ಡಿ. ನಾನು ಓಡುವುದನ್ನು ಕಂಡು 'ಹಿಡಿಯಿರಿ' 'ಹಿಡಿಯಿರಿ' ಎಂದು ಕೂಗಾಡಿದಾಗ ಬೀಡಿ ಅಂಗಡಿಯವ ನನಗೆ ತೆಕ್ಕೆಬಿದ್ದು ಹಿಡಿದ. ನಾನು ಪೋಲೀಸ್ ಸ್ಟೇಶನ್ ಸೇರಿದೆ. ಈ ಸುದ್ದಿ ಊರು ತುಂಬ ಹಬ್ಬಿತು. ನನ್ನನ್ನು ಹಿಡಿದವ ಪಾರ್ಟಿಯ ಸಹಾನುಭೂತಿದಾರನಾಗಿದ್ದ. ನನ್ನ ಉದ್ದ ಮೀಸೆ, ತಲೆಯ ರುಮಾಲು, ರೈತನ ಅಂಗಿ, ಧೋತ್ರದಲ್ಲಿ ನನ್ನ ಗುರುತು ಹಿಡಿಯದೆ ನನ್ನನ್ನು ಪೋಲೀಸರ ವಶಪಡಿಸಿದ್ದಕ್ಕಾಗಿ ಮರು ದಿವಸ ಮುಂಜಾನೆ ಪೋಲೀಸ್ ಸ್ಟೇಶನ್ನಿಗೆ ಬಂದು ಆ ಮನುಷ್ಯ ಕಣ್ಣೀರು ಸುರಿಸಿದ. ನನ್ನನ್ನು ಹಿಡಿದವರಿಗೆ ರೂ. 500 ಬಕ್ಷೀಸ್ ಕೊಡುವುದಾಗಿ ಸಾರಲಾಗಿತ್ತು. ಬೀಡಿ ಅಂಗಡಿಯವ ಆ ಹಣ ಸ್ವೀಕರಿಸಲಿಲ್ಲ. ಪಿಸ್ತೂಲ್, ಕವಣೆ ಸಹಿತ ಉಪಾಧ್ಯಾಯರನ್ನು ಬಂಧಿಸಿದರೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಬಿಜಾಪುರ ಜೈಲಿನಿಂದ, ಬೆಳಗಾವಿಯ ಹಿಂಡಲಗ ಜೈಲಿಗೂ, ಅಲ್ಲಿಂದ ಯರವಾಡ ಜೈಲಿಗೂ ಹೋಗಿ ನಮ್ಮ ಇತರ ಕಾಮ್ರೇಡರುಗಳನ್ನು ಸೇರಿಕೊಂಡೆ. ಬಾಲಸಿಂಗ ಮಾಸ್ತರು ಬೆಂಗಳೂರು, ಮೈಸೂರು ಪ್ರದೇಶಗಳಲ್ಲಿ ಕೆಲಸ ಮುಂದುವರಿಸಿದರು.

1952 ರಲ್ಲಿ ಮುಂಬಯಿ ಹೈಕೋರ್ಟು ಬಂಧಿತರನ್ನೆಲ್ಲ ಬಿಡುಗಡೆ ಮಾಡಿತು. ನಾವೆಲ್ಲ ಬಿಜಾಪುರಕ್ಕೆ ಬಂದು ಚಟುವಟಿಕೆ ಮುಂದುವರಿಸಿದೆವು.

"ಉಳುವವನೇ ಭೂಮಿಯ ಒಡೆಯ" "ನಾಲ್ಕರಲ್ಲಿ ಮೂರು ಪಾಲು ರೈತರದ್ದು ಎಂಬ ಘೋಷಣೆಗಳೊಂದಿಗೆ ರೈತರ ಸಂಘಟನೆ, ಹೋರಾಟ ಮಾಡುತ್ತಿದ್ದವರೆಲ್ಲ ಜೈಲಿನಲ್ಲಿ ಬಂಧಿತರಾಗಿದ್ದಾಗ, ಭೂಮಾಲಕರು ತಮ್ಮ ದಬ್ಬಾಳಿಕೆಯನ್ನು ಒಂದೇ ಸಮನೆ ಮುಂದುವರಿಸಿದ್ದರು. ಕಾಂಗ್ರೆಸ್ ಸರಕಾರದ ಘೋಷಣೆಗಳೆಲ್ಲ ಕಾಗದದಲ್ಲೇ ಉಳಿದವು. ಪೋಲೀಸರ, ಗೂಂಡಾ ಜನರ ದಬ್ಬಾಳಿಕೆ ಮುಂದುವರಿದಿತ್ತು.

ಕೋರ್ಟು, ಕಚೇರಿಗಳಿಂದ ತ್ವರಿತ ನ್ಯಾಯ ಸಿಗುವುದಿಲ್ಲೆಂದು ಸ್ಪಷ್ಟವಾಯಿತು. ಅನ್ಯಾಯದಿಂದ ರೈತರ ಭೂಮಿಯನ್ನು ವಶಪಡಿಸಿಕೊಂಡಿರುವ ದೇಸಾಯರಿಂದ ಭೂಮಿಯನ್ನು ಬಿಡಿಸಲು ಒಂದೇ ದಾರಿ ಉಳಿದಿತ್ತು. ರೈತ ಸಂಘಟನೆ ಬಲಗೊಳಿಸಿ ಎಲ್ಲರೂ ಸೇರಿ ಜಬರದಸ್ತಿನಿಂದಲೇ ಭೂಮಿಯ ಉಳುಮೆ ಮಾಡಿ, ಬಿತ್ತನೆ ಮಾಡುವುದೊಂದೇ ದಾರಿಯಾಗಿತ್ತು. ಜೈಲಿನಲ್ಲಿ ಇತರ ಕಾಮ್ರೇಡರ ಜೊತೆಯಲ್ಲಿ ವಿಚಾರ ವಿನಿಮಯ, ಚರ್ಚೆ, ಅನುಭವಗಳನ್ನು ಪಡೆದು ಏನೇ ಬರಲಿ ಭೂಮಿ ಆಕ್ರಮಣ ಮಾಡುವುದೊಂದೇ ನಮ್ಮ ಮುಂದಿರುವ ದಾರಿಯೆಂದು ತಿಳಿದೆವು. ಆ ರೀತಿ ಮಾಡಲು ಮುಂದಾದೆವು.

1953 ಜೂನ್ 2ನೇ ತಾರೀಕು, ರಾತ್ರಿ ಹನ್ನೊಂದು ಗಂಟೆ. ಗಣಿಗ್ರಾಮದಿಂದ 3 ಮೈಲು ದೂರದಲ್ಲಿದ್ದ ಗಣಿ ತಾಂಡೆಯಲ್ಲಿ ಗುಪ್ತ ಸಭೆ. ತಾಂಡೆಯ ಹಿರಿಯ ಸಾಧಾರಣ 60 ವರ್ಷ ವಯಸ್ಸಿನ ವೃದ್ಧ. ಅವನ ಗುಡಿಸಲಿನಲ್ಲಿ ನಾವು 18 ಜನ ಸೇರಿದ್ದೆವು. ಸಣ್ಣ ಚಿಮಣಿ ಉರಿಯುತ್ತಿತ್ತು. ತಾಂಡೆಯ 28 ಗುಡಿಸಲುಗಳಲ್ಲಿಯ ಹೆಂಗಸರು–ಮಕ್ಕಳೂ, ಇತರರೆಲ್ಲ ಗಾಢ ನಿದ್ರೆಯಲ್ಲಿದ್ದರು. ಹಳ್ಳಿಗಳಲ್ಲೆಲ್ಲ ಮುಸ್ಸಂಜೆಯಲ್ಲೇ ನಿದ್ರೆ ಮಾಡುವ ಪರಿಪಾಠ. ಸೂರ್ಯ ಮೂಡಲು ಇನ್ನೂ 3 ಘಳಿಗೆ ಇರುವಾಗಲೇ ರೊಟ್ಟಿ ಸಜ್ಜುಗೊಳಿಸಿ ಹೊಲದ ಕೆಲಸ, ಕುರಿ ಮೇಯಿಸುವುದಕ್ಕೆ ರೊಟ್ಟಿ ಕಟ್ಟಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಹೊತ್ತು ಮುಳುಗಿದಾಗಲೇ ದಣಿದ ಜೀವ ಹಾಸಿಗೆಯ ಆಶ್ರಯ ಪಡೆಯುತ್ತದೆ.

ಚಿಲುಮೆ ಸೇದುತ್ತ ರಾಜೇಸಾಬ ಪಿಸುಮಾತಿನಲ್ಲಿ ದೃಢವಾಗೇ ಹೇಳಿದ. "ಇನ್ನೆರಡು ದಿವಸದಲ್ಲಿ ನಾವೆಲ್ಲ ಸೇರಿ ಮಲ್ಲಪ್ಪನ ಹೊಲವನ್ನು ಸಾಗು ಮಾಡಲೇ ಬೇಕು. ನಾಲ್ಕು ಜೋಡಿ ಎತ್ತು ನನ್ನದು, ನಬೀಸಾಬ, ಭೀಮಪ್ಪ ಸಾಬಣ್ಣ ಒಂದೊಂದು; ಮಂಗಳವಾರ ಮುಂಜಾನೆ ಸರಿಯಾಗಿ ಹೊತ್ತೇರುವಾಗಲೇ ನಮ್ಮ ಕೆಲಸ ಶುರುವಾಗಬೇಕು. ಕೊಡಲಿ, ಬಡಿಗೆಗಳಿಂದ ಎಲ್ಲ ಸಿದ್ಧರಾಗಿರಬೇಕು. ಉಪಾಧ್ಯಾಯ ಸಾಹೇಬರು ಬಿಜಾಪುರಕ್ಕೆ ಹೋಗಿ ಕಾಂಗ್ರೆಸ್ ಮುಖಂಡರಿಗೂ, ಅಧಿಕಾರಿಗಳಿಗೂ ಈ ವಿಷಯ ತಿಳಿಸಿ ಸೋಮವಾರ ಸಂಜೆ ಬರಬೇಕು." ರಾಜೇಸಾಬರ ಆದೇಶ ಎಲ್ಲರಿಗೂ ಸಮ್ಮತ. ಎರಡನೇ ಮಾತೇ ಇಲ್ಲ. ಈ ವಿಚಾರವನ್ನು ಗುಪ್ತವಾಗಿಡಬೇಕೆಂದೂ, ಸರಿಯಾದ ಸಿದ್ಧತೆ ನಡೆಯಬೇಕೆಂದೂ ನಾನು ತಿಳಿಸಿದೆ. ಚರ್ಚೆ, ವಿಚಾರ ವಿನಿಮಯ ಮುಗಿದು ನಿರ್ಣಯವಾದಾಗ ಕೋಳಿ ಕೂಗು ಕೇಳಿಸಿತು. ಎಲ್ಲರೂ ಬೇರೆ ಬೇರೆ ದಾರಿಯಲ್ಲಿ ತಮ್ಮ ಕೆಲಸಕ್ಕೆ ಸಾಗಿದರು. ನನ್ನನ್ನು ಬಿಜಾಪುರಕ್ಕೆ ಕಳುಹಿಸುವ ವ್ಯವಸ್ಥೆಯಾಯಿತು.

ಸೋಮವಾರ ನಸುಕಿನಲ್ಲಿ ನಾನಿನ್ನೂ ಎದ್ದಿರಲಿಲ್ಲ. ಮೌಲಾಸಾಬ ವಿಚಿತ್ರ ಸುದ್ದಿ ತಂದ. ಕಳೆದೆರಡು ದಿವಸಗಳಿಂದ ರಾಜೇಸಾಬನ ಪತ್ತೆ ಇಲ್ಲ. ಶನಿವಾರ ಸಂಜೆ ಕುರಿ ಮೇಯಿಸಲು ಹೋದವ ವಾಪಸಾಗಲೇ ಇಲ್ಲ. ನಡುಗಡ್ಡೆ (ಕೃಷ್ಣಾ ನದಿಯ ಮಧ್ಯದಲ್ಲಿರುವ ಹಳ್ಳಿಗಳು) ಹಾಗೆಯೇ ಇತರ ಹಳ್ಳಿಗಳಿಗೆ ಜನರನ್ನು ಕಳುಹಿಸಲಾಯಿತು. ಆದರೆ ಎಲ್ಲಿಯೂ ರಾಜೇಸಾಹೇಬನ ಪತ್ತೆ ಹತ್ತಲಿಲ್ಲ. 'ನಿಮ್ಮಲ್ಲಿ ಬಂದಿದ್ದಾನೇನು ಸಾಹೇಬರೇ" ಎಂದ. ಮೌಲಸಾಬ ಗಾಬರಿಯಾಗಿಯೇ ನನ್ನನ್ನು ಕೇಳಿದ. "ಇಲ್ಲವಲ್ಲ" ಎಂದು ಹೇಳುತ್ತಿದ್ದಂತೆಯೇ ನನ್ನ ತಲೆಯಲ್ಲಿ ಸಂಶಯದ ಅಲೆಗಳೆದ್ದವು.

"ರಾಜೇಸಾಬ ಕಾಶೀರಾಯನ ಗೂಂಡಾಗಿರಿಗೆ ಬಲಿಯಾದನೇ ?" ಎಂಬ ಸಂಶಯ ನನ್ನಲ್ಲಿ [illegible]ಯಿತು. ಪೋಲೀಸ್ ಅಧಿಕಾರಿಯ ಕಚೇರಿಗೆ ಹೋದೆ. ವಿವರಣೆ ಕೊಟ್ಟು, ಲೇಖಿ ತಕರಾರು ಕೊಟ್ಟೆ. ಎಲ್ಲಾ ಕಡೆ ತಂತಿ ಕಳುಹಿಸಲಾಯಿತು. ಇಂಥವರೇ ಕೊಲೆ ಮಾಡಿದ್ದಾರೆಂದು ನಿರ್ದಿಷ್ಟ ರೂಪದಲ್ಲಿ ತಕರಾರು ಅರ್ಜಿ ಕೊಟ್ಟಲ್ಲಿ ಕೋರ್ಟಿಗೆ ಕಳುಹಿಸಲಾಗುವುದೆಂದು ಪೋಲೀಸರ ವಾದ.

ಮಧ್ಯಾಹ್ನ ರೇಲಿನಲ್ಲಿ ನಾವಿಬ್ಬರೂ ಗಣಿಗೆ ಹೋದೆವು. 8 ಮೈಲು ನಡೆದು ಊರು ಸೇರುವಾಗ ಮುಸ್ಸಂಜೆ. ಬಹಳಷ್ಟು ಜನ ಮಲ್ಲಪ್ಪನ ಮನೆಯಲ್ಲಿ ಸೇರಿದ್ದರು. ಮ್ಲಾನವದನರಾಗಿದ್ದರು. ಏನಾಗಿರಬೇಕು ಎಂಬ ಪ್ರಶ್ನಾರ್ಥಕ ಚಿಹ್ನೆ ಎಲ್ಲರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವರಿಂದ ನಾನು ಎಲ್ಲ ಸಂಗತಿಗಳನ್ನು ಕೇಳಿಕೊಂಡೆ. ನಾನು ಮಾಡಿದ ಕೆಲಸಗಳ ವಿವರಣೆ ಕೊಟ್ಟೆ. ಹಾಗೆಯೇ ನನ್ನಲ್ಲಿ ಹುಟ್ಟಿ ಬಂದಿದ್ದ ಸಂಶಯವನ್ನು ಬಯಲಿಗೆಳೆದೆ. ಕೆಲವರು "ಇರಬಹುದು" ಎಂದರೆ ಇನ್ನೂ ಕೆಲವರು "ಏನೋಪ್ಪಾ" ಎಂಬ ಉದ್ಗಾರ ತೆಗೆದರು. ಮರು ದಿವಸ ಮಂಗಳವಾರ–ಮಲ್ಲಪ್ಪನ ಹೊಲದಲ್ಲಿ ಗಳೆ ಹೊಡೆಯಬೇಕು. ಬಿತ್ತನೆ ಆಗಲೇಬೇಕು. "ಕಾರ್ಯ ಆಗಲೇಬೇಕು" ಒಮ್ಮತದ ಧ್ವನಿ.

ಕೋಳಿ ಕೂಗುತ್ತಿತ್ತು. ಸೂರ್ಯ ಕೆಂಪು ಬಣ್ಣ ಚೆಲ್ಲಿದ, ಎಲ್ಲ ಸಿದ್ಧವಾಯಿತು. ಚಂದ್ರ – ಸೂರ್ಯ ಹೋಯಿ ಹೋಯಿ (ರಾಜೇಸಾಬನ ಎತ್ತುಗಳ ಹೆಸರು) ಎಂದಾಗ ಭೂಮಿಯನ್ನು ಕತ್ತರಿಸುತ್ತಾ ಗಳೆ ಸಾಗಿತ್ತು. ಒಂದರ ಹಿಂದೆ ಒಂದು ಎಂಟು ಜೋಡಿ "ರೈತ ಸಂಘಕ್ಕೆ ಜಯವಾಗಲಿ, ಕಮ್ಯೂನಿಸ್ಟ್ ಪಾರ್ಟಿಗೆ ಜಯವಾಗಲಿ" ಜೈನಾಮಾ ಕೂಗಿದಳು. ಮಲ್ಲಪ್ಪ, ನಭೀಸಾಬ, ಸೋಮಣ್ಣ, ಸಾಬಣ್ಣ ಧ್ವನಿಕೂಡಿಸಿದರು. ರಾಜೇಸಾಬ ಇಲ್ಲ, ಏನೂ ನಡೆಯುವುದಿಲ್ಲವೆಂದು ದೇಸಾಯರ ಗೂಂಡಾಜನರ ಭಾವನೆಯಾಗಿರಬೇಕು. ಕೂಗು ಕೇಳಿದ ಕೂಡಲೇ ಕೇಕೆ ಹಾಕುತ್ತಾ 8-10 ಜನ ಓಡಿ ಬಂದರು. ಕೈಯ್ಯಲ್ಲಿ ಕೊಡಲಿ ಹಿಡಿದು ಡೊಂಕಕಟ್ಟಿ ನಿಂತೆ. ಇತರರೂ ತಯಾರಾದರು. ನಮ್ಮ ತಯಾರಿ ನೋಡಿ ಬುಸುಗುಟ್ಟುತ್ತಾ ಗೂಂಡಾ ಜನರು ಹಿಂದೇಟು ಹಾಕಿದರು. ಅರ್ಧ ಗಂಟೆ ವಾತಾವರಣದ ಬಿಸಿ ಏರಿದಾಗಲೂ "ನಮಗೇನು ಸಂಬಂಧ" ಎಂಬಂತೆ ಸೂರ್ಯ–ಚಂದ್ರರು ಯಾವ ಆಶ್ರಯವಿಲ್ಲದೆ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಸೂರ್ಯ ನೆತ್ತಿಗೆ ಬಂದಾಗ ಕೆಲಸ ಮುಗಿಸಿ ರಾಜೇಸಾಬನ ಮನೆ ಸೇರಿದೆವು. ನಾವೆಲ್ಲ ರೊಟ್ಟಿ ಮಜ್ಜಿಗೆಯ ಊಟ ಮುಗಿಸಿದೆವು. ಒಂದು ರೀತಿಯ ಸಮಾಧಾನ ಎಲ್ಲರಲ್ಲೂ ಮೂಡಿ ಬಂದಿತ್ತು. ಆದರೆ ಅದೇ ಸಮಯದಲ್ಲಿ ರಾಜೇಸಾಬನ ಚಿಂತೆ ಮನವನ್ನು ಕೊರೆಯುತ್ತಿತ್ತು.

ಎಂಟು ತಿಂಗಳ ನಂತರ ಸುದ್ದಿ ಹಬ್ಬಿತು. ರಾಜೇಸಾಬನನ್ನು ಕೊಂದ ಮಲ್ಲಪ್ಪನ ಕೊಲೆಯಾಯಿತು. ದೇಸಾಯರ ಜನರೇ ಅವನನ್ನು ಕೊಂದರು ಎಂದು.

ಕುರಿ ಮೇಯಿಸುತ್ತಿದ್ದ ರಾಜೇಸಾಬನನ್ನು ಶನಿವಾರ ರಾತ್ರಿ ಕತ್ತರಿಸಿ ಹೆಣವನ್ನು ಊರ ಬದಿಯಲ್ಲೇ ಇದ್ದ ಕೃಷ್ಣಾ ನದಿಯ ಮಡುವಿನಲ್ಲಿ ಬಗೆದಿದ್ದರು. ಕಾಶೀರಾವ ದೇಸಾಯರ ಅಣ್ಣನ ಮಗನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮಲ್ಲಪ್ಪನಿಂದ ಈ ಕೊಲೆ ಮಾಡಿಸಲಾಗಿತ್ತು. ಚಿಕ್ಕದನಿಯ "ಇಟ್ಟುಕೊಂಡಾಕೆಯ"ನ್ನು ಮಲ್ಲಪ್ಪ ಪ್ರೀತಿಸಿದ್ದುದರಿಂದ ಅವನನ್ನು ಕೊಲೆ ಮಾಡಲಾಯಿತು. ಕೊಲೆಗಳು ನಡೆಯುತ್ತಾ ಇವೆ. ಆದರೆ ದಾಖಲೆಗಳಿಲ್ಲ. ಪೋಲೀಸರ ಕ್ರಮವಿಲ್ಲ. ಸ್ವತಂತ್ರ ಭಾರತದ ಹಳ್ಳಿಗಳಲ್ಲಿ ನಾವು ಕಾಣುವ ಕರುಣಾಜನಕ ದೃಶ್ಯಗಳಿವು.

ರಾಜೇಸಾಬನ ಸಲುವಾಗಿ ಎಂಟು ತಿಂಗಳು ಹುಡುಕಾಡಿದೆವು. ಸಾಹೇಬರು ಮನವಿ ಸಲ್ಲಿಸಿದೆವು. ಮಲ್ಲಪ್ಪನಿಂದ ರಾಜೇಸಾಬನ ಕೊಲೆಯಾಯಿತೆಂಬ ಸುದ್ದಿಯಲ್ಲಿ ನಮ್ಮ ಅನ್ವೇಷಣೆ ಕೊನೆಯಾಯಿತು.

ರಾಜೇಸಾಬ ದೊಡ್ಡ ಮನೆ ಕೃಷ್ಣೆಯ ಮಡುವಿನಲ್ಲಿ ಕಾಣೆಯಾದ. ಅವನ ಹೆಣವೂ ಸಿಗಲಿಲ್ಲ, ಎಲುಬೂ ಕಾಣಸಲಿಲ್ಲ. ★

ರಕ್ತ-ಕಾಣಿಕೆಯ ಅರ್ಪಿಸುತ್ತಿದೆ ಬದುಕು

—ಸಾಹಿರ್ ಲೂಧಿಯಾನ್ವಿ

ನನ್ನ ಜಗತ್ತಿನಲ್ಲಿ ಹೂಬನಗಳನ್ನು ಹುಡುಕುವವನೆ;
ಇಲ್ಲಿ ವಸಂತ ಋತುವಿಲ್ಲ, ಬೆಂಕಿ–ಮರೀಚಿಕೆಗಳಿವೆ.
ಕಾಮನ ಬಿಲ್ಲ ಬಣ್ಣಗಳಿಲ್ಲ, ಮಬ್ಬುಗತ್ತಲ ಪರಿಸರದಲ್ಲಿ
ದಿಗಂತದಿಂದ ದಿಗಂತದವರೆಗೆ ನೇಣುಗಂಬಗಳಿವೆ

ಉನ್ನತ ಗಣರಾಜ್ಯದ ಆಶ್ವಾಸನೆಗಳ ತೆರೆಮರೆಯಲ್ಲಿ
ಕಾರಾಗೃಹಗಳ ಉತ್ಥಾನವಿದೆ, ಚಾಟಿ ಏಟುಗಳಿವೆ
ಶಾಂತಿಯ ಹೆಸರಿನಲ್ಲಿ ನಡೆಯುತ್ತಿವೆ ಯುದ್ಧ ಸನ್ನಾಹಗಳು
ನ್ಯಾಯದ ಭರವಸೆಯ ಜೊತೆಗೇ ಭೇದಭಾವದ ಕಾರ್ಖಾನೆಗಳಿವೆ

ಹೃದಯಗಳ ಮೇಲೆ ದಿಗಿಲಪಹರೆ, ತುಟಿಗಳ ಮೇಲೆ ಮೌನ ಮುದ್ರೆ
ತಲೆಗಳ ಮೇಲೆ ಕಾದ ಕಬ್ಬಿಣದ ಸಲಾಕೆಗಳ ಶಾಮಿಯಾನಾಗಳಿವೆ

ಸತ್ತಿವೆಯೆ ಎಂದಾದರೂ ಬಲಾತ್ಕಾರ ಹಿಂಸೆಗಳ ತುಳಿತಕ್ಕೆ
ಮೆದುಳುಗಳಿಗೆ ಜೀವತುಂಬಿದ ಸಿದ್ಧಾಂತಗಳು ಸಿಕ್ಕು ?
ಯಾವ ಕ್ರೂರಿ ಸೈನ್ಯವಾದರೂ ಈವರೆಗೆ ಧ್ವಂಸ ಮಾಡಿದೆಯೇ
ಮಾನವನ ಎಚ್ಚೆತ್ತ ಆತ್ಮದ ಕೋಮಲತೆಯನ್ನು ?

ಹೆಜ್ಜೆ ಹೆಜ್ಜೆಗೂ ರಕ್ತ ಕಾಣಿಕೆಯ ಅರ್ಪಿಸುತ್ತಿದೆ ಬದುಕು
ಕತ್ತಲಿನೊಡನೆ ಹೋರಾಡುತ್ತಿರುವ ಹಣತೆಗಳಿಗೆ

ಮುಂದೆ ಸಾಗುತ್ತಿದೆ ಮಾನವನ ವಿಕಾಸದ ಕಾರವಾನ
ಅಗ್ನಿಲೋಹಗಳ ಸರ್ಕಾರದ ಹೃದಯ ನಡುಗಿಸುತ್ತ
ಬಂಡಾಯದ ನಗಾರಿಗಳು ಮೊಳಗುತ್ತಿವೆ ಸುತ್ತಲೆಲ್ಲ
ಯುವಕರು ಹೊರಬೀಳುತ್ತಿಹರು ಮಶಾಲುಗಳ ಉರಿಸುತ್ತ

ನನ್ನ ದನಿಯನ್ನು ಹಿಸುಕುವುದು ಸಾಧ್ಯವಿದೆಯಾದರೂ
ನವಜೀವನದ ಘೋಷಣೆಗಳನ್ನು ತಡೆಯುವವರಾರು ?

ಉಕ್ಕು ಬೆಂಕಿಗಳ ಸುತ್ತ ಗೋಡೆ ಎತ್ತರವಿರಬಹುದು
ಕಾಲ ಪರಿವರ್ತನೆಯ ವೇಗವನ್ನು ತಡೆಯುವವರಾರು ?

ಹೊಸ ವಿಚಾರಗಳ ಅಬ್ಬರವನ್ನು ತಡೆಹಿಡಿಯುವವರೇ
ಹೊಸ ಜನಾಂಗದ ಬೀಸುಗತ್ತಿಯನ್ನು ತಡೆಯುವವರಾರು ?

ದುರಾಡಳಿತ ಯಾವ ಕಾರಾಗೃಹದ ಕತ್ತಲಾಸರೆಪಡೆವುದೋ
ಅಲ್ಲಿಂದಲೇ ಹೊರ ಬೀಳುವವು ಅರುಣೋದಯದ ಸೇನೆಗಳು
ವಾತಾವರಣದಲ್ಲಿ ಮೂಡುತ್ತಿವೆ ಕೆಂಪು ಬಾವುಟಗಳು
ಸಂಧಿಸತೊಡಗಿವೆ ಪೂರ್ವ–ಪಶ್ಚಿಮ ತೀರಗಳು

ಸಾವಿರ ಸಿಡಿಲು ಬೀಳಲಿ, ಲಕ್ಷ ಬಿರುಗಾಳಿಗಳು ಬೀಸಲಿ
ಯಾವ ಹೂಗಳು ಅರಳಬೇಕೆಂದಿದೆಯೋ ಅವು ಅರಳಿಯೇ
ತೀರುವುವು

ಕನ್ನಡಕ್ಕೆ–ಅಬ್ದುಲ್ ಮಜೀದ್ ಖಾನ್

ಮಾರ್ಕ್ಸ್‌ವಾದ ಮತ್ತು ಸಾಹಿತ್ಯ

—ಸಿ. ವೀರಣ್ಣ

ಸಾಹಿತ್ಯದ ಉಗಮವನ್ನು ಕುರಿತು ಸಂಪ್ರದಾಯನಿಷ್ಠ ವಿದ್ವಾಂಸರಲ್ಲಿ ಇಂದಿಗೂ ಅದೊಂದು ಅಲೌಕಿಕ ಶಕ್ತಿಯ ಫಲ ಎನ್ನುವ ನಂಬಿಕೆ ಉಳಿದು ಬಂದಿದೆ. ಭಾರತೀಯ ಪ್ರಾಚೀನ ಕಾವ್ಯ ಮೀಮಾಂಸೆಯಲ್ಲಿ ಹಾಗೂ ಕವಿಗಳ ಬರಹದಲ್ಲಿಯೂ ಕೂಡ ಕಾವ್ಯ ಶಕ್ತಿ ದೈವದತ್ತ, ಕವಿ ಎಂದರೆ ಋಷಿ ಎನ್ನುವ ಅಂಶ ಎದ್ದು ಕಾಣುತ್ತದೆ. ಆದರೆ ಪ್ರಾಚೀನ ಮಾನವನ ಇತಿಹಾಸವನ್ನು ಗಮನಿಸಿದರೆ, ಲಕ್ಷಾವಧಿ ವರ್ಷಗಳ ಕಾಲ ಮನುಷ್ಯ, ಪ್ರಾಣಿಯ ಜೊತೆ ಪ್ರಾಣಿಯಾಗಿ ಬದುಕಿದ್ದ ಮಾತ್ರವಲ್ಲ. ಸಾಹಿತ್ಯವಾಗಲೀ ಅದನ್ನು ಪ್ರಕಟಮಾಡುವ ಭಾಷೆಯಾಗಲೀ ಅವನಿಗೆ ಸಾಧಿತವಾಗಿರಲಿಲ್ಲ. ಹೀಗಿದ್ದ ಸಂದರ್ಭದಲ್ಲಿ, ಅಲೌಕಿಕತೆ ಮತ್ತು ದೈವ ಶಕ್ತಿಗಳ ಮಾತು ಎಷ್ಟು ಅವಾಸ್ತವ ಎನ್ನುವುದಲ್ಲದೆ ಸಾಹಿತ್ಯದ ಅಸ್ತಿತ್ವ ಈ ಶಕ್ತಿಗಳಿಂದಾಚೆಯ ವಾಸ್ತವ ಜಗತ್ತಿನಲ್ಲೇ ಇದೆ ಎಂಬುದೂ ಸ್ಪಷ್ಟವಾಗುತ್ತದೆ.

ಹಿಂದೆ ದೈವವಾದಿಗಳನ್ನು ವಿರೋಧಿಸಿದ ನಿರೀಶ್ವರವಾದಿಗಳು ವಸ್ತುವೇ ಜ್ಞಾನದ ಮೂಲ ಎಂದು ಪ್ರತಿಪಾದಿಸಿದ್ದರೂ ಕೂಡ, ಅವರ ಪ್ರಭಾವ ಪರಿಣಾಮಕಾರಿಯಾಗಲು ಬೇಕಾದ ಪರಿಸರವಿಲ್ಲದೆ, ಅವರ ಸಿದ್ಧಾಂತ ಮೂಲೆಗುಂಪಾಯಿತು. ಮಾರ್ಕ್ಸ್‌ವಾದದ ಬೆಳಕಿನಲ್ಲಿ ಪ್ರಕೃತಿ ಮತ್ತು ಸಮಾಜವನ್ನು ವಿಶ್ಲೇಷಿಸ ತೊಡಗಿದ ಮೇಲೆ ಸಮಾಜದ ಚಟುವಟಿಕೆಗಳಲ್ಲಿ ಒಂದಾದ ಸಾಹಿತ್ಯಕ್ಕೂ ಹೊಸ ಆಯಾಮ ದೊರೆತು, ಸಾಹಿತ್ಯ: ಅದನ್ನು ಸೃಷ್ಟಿಸುವ ಮಿದುಳು, ವಸ್ತು ಮೂಲವನ್ನು ಅವಲಂಬಿಸಿಕೊಂಡೇ ಬೆಳೆಯುವಂತಹುದೆಂಬುದು ಸ್ಪಷ್ಟವಾಯಿತು.

ಆಲೋಚನೆ ಎನ್ನುವುದು ಎಲ್ಲೋ ಶೂನ್ಯದಲ್ಲಿ ಹುಟ್ಟಿದೆ ವಸ್ತುವಿನಲ್ಲೇ ಹುಟ್ಟುವಂತಹುದು. ಆಲೋಚನೆಗೆ ಮೂಲವಾಗಬಹುದಾದ 'ವಸ್ತು' ಮನುಷ್ಯನಲ್ಲಿ ಭಾವನೆಗಳ ಸೃಷ್ಟಿಗೆ ಕಾರಣವಾಗುತ್ತದೆ ಎಂಬ ಮಾತನ್ನು ಭರತನ ರಸಸೂತ್ರದಲ್ಲಿ ಕೂಡ ಕಾಣಬಹುದು. 'ಭಾವ'ದ ಮೂಲ ಶೋಧನೆಗೆ ಭರತನೇ ಮೊದಲಾದವರು ಹೆಚ್ಚು ಗಮನಹರಿಸಲಿಲ್ಲವಾದ್ದರಿಂದ ಅವರಿಗೆ ಅದೊಂದು ಸಮಸ್ಯೆಯೂ ಆಗಲಿಲ್ಲ. ಅಲ್ಲದೆ ಅವರೆಲ್ಲ ದೈವನಿರ್ಮಿತ ಮಾನವನನ್ನು ಮಾತ್ರ ಗುರುತಿಸಿದ್ದರಿಂದ ಅವನಿಗೆ ಸಂಬಂಧಿಸಿದುದೆಲ್ಲವೂ ದೈವನಿರ್ಮಾಣ ಎಂಬ ನಂಬಿಕೆ ಇತ್ತು. ವಸ್ತುಮೂಲದಿಂದ ಜಗತ್ತಿನ ಚಟುವಟಿಕೆಗಳನ್ನು ಗಮನಿಸುವ ಕಾವ್ಯ ಮೀಮಾಂಸಕರಾಗಲೀ, ಕೃತಿಕಾರರಾಗಲೀ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಕಾಣಬರುವುದಿಲ್ಲ.

ಮನುಷ್ಯ ಮತ್ತು ಪ್ರಾಣಿಗಳ ನಡುವಿನ ವ್ಯತ್ಯಾಸವನ್ನು ಸಾಮಾನ್ಯವಾಗಿ 'ಪ್ರಜ್ಞೆ' ಮತ್ತು 'ಚಿಂತನೆ'ಗಳಿಂದ ಗುರುತಿಸಲು ಕೆಲವರು ಪ್ರಯತ್ನಿಸುತ್ತಾರೆ. ಮೇಲುನೋಟಕ್ಕೆ ಇದು ಸರಿಯೆಂಬಂತೆ ಕಂಡರೂ ಕೂಡ, 'ಪ್ರಜ್ಞೆ' ಮತ್ತು 'ಚಿಂತನೆ'ಗಳು ಮನುಷ್ಯನಲ್ಲಿ ಮೂಡಲು ಮತ್ತು ಅದರ ಮೂಲವಾದ ಮಿದುಳಿನ ಬೆಳವಣಿಗೆ ಆಗಲು ಕಾರಣವಾದದ್ದು ಮನುಷ್ಯನಿಗೇ ವಿಶಿಷ್ಟವಾದ 'ಶ್ರಮ'. ಪ್ರಾಣಿಗಳಲ್ಲಿ ಶ್ರಮ ಇದ್ದರೂ ಕೂಡ ಅದು ಪ್ರೇರಣಾತ್ಮಕವಾದದ್ದು ಸಾಧನೆಗಳನ್ನು ರೂಪಿಸಿಕೊಳ್ಳಲಾಗದ್ದು. ಆದರೆ ಮಾನುಷ್ಯನಲ್ಲಿ ಅದು ಪೂರ್ವ ನಿಶ್ಚಿತವಾದದ್ದು ಮಾತ್ರವಲ್ಲ, ಸಾಧನೆಗಳನ್ನು ರೂಪಿಸಿಕೊಂಡು ಮುಂದುವರೆಯುತ್ತ ಹೋಗಿ ಪ್ರಕೃತಿಯ ಮೇಲೆ ಒಡೆತನ ಸ್ಥಾಪಿಸುವಂತಹುದು. ಈ ಚಟುವಟಿಕೆ ಯಾವ ಸ್ವರೂಪದಲ್ಲಿರುತ್ತದೋ ಅದಕ್ಕೆ ಅನುಗುಣವಾದಂಥ 'ಪ್ರಜ್ಞೆ' ರೂಪುಗೊಳ್ಳುತ್ತದೆ. ಪ್ರಜ್ಞೆಯಿಂದ ಬದುಕು ರೂಪುಗೊಳ್ಳುತ್ತದೆ ಎಂಬುದು ತಪ್ಪು, ಬದುಕಿನ ವ್ಯವಸ್ಥೆ—ಇರುವಿಕೆ, ಪ್ರಜ್ಞೆಯನ್ನು ಆದರ ಮಾಧ್ಯಮಗಳಾದ ಕಲೆ–ಸಾಹಿತ್ಯ ಮುಂತಾದುವನ್ನು ನಿರ್ಧರಿಸುತ್ತದೆ ಎಂಬ ವೈಜ್ಞಾನಿಕ ಸತ್ಯ ಮಾರ್ಕ್ಸ್‌ವಾದದಿಂದ ಸಾಬೀತು ಆಯಿತು.

ಭಾಷೆ–ಲಯ

ಮನುಷ್ಯ ಪ್ರಕೃತಿಯ ಜೊತೆ ಕೆಲಸ ಮಾಡುತ್ತಿರುವಾಗಲೇ ತಾನೂ ಬದಲಾಗುತ್ತಿರುತ್ತಾನೆ. ಅಂದರೆ ಉತ್ಪಾದನೆಯಲ್ಲಿ ತೊಡಗಿರುವಾಗಲೇ ಆಲೋಚನೆ ಮತ್ತು ಆಲೋಚನೆಯ ಉತ್ಪನ್ನಗಳಲ್ಲೂ ಬದಲಾವಣೆಗಳಾಗುತ್ತಿರುತ್ತವೆ. ಆಲೋಚನೆಯ ಜೊತೆ ಜೊತೆಗೇ ಭಾಷೆಯೂ ಹುಟ್ಟಿದೆ. ಮನುಷ್ಯ ಉತ್ಪಾದನೆಯನ್ನು ಸಾಮಾಜಿಕವಾಗಿಯೇ ಮಾಡುವುದು ಅನಿವಾರ್ಯವಾದದ್ದರಿಂದ, ಆ ಸಾಮಾಜಿಕ ಚಟುವಟಿಕೆಯಲ್ಲಿ ಪರಸ್ಪರ ವ್ಯವಹಾರಕ್ಕಾಗಿ 'ಭಾಷೆ' ಹುಟ್ಟುವುದೂ ಅನಿವಾರ್ಯವಾಯಿತು. ಈ ರೀತಿಯಲ್ಲಿ ಹುಟ್ಟಿದ ಭಾಷೆಯ ಆರಂಭಕಾಲೀನ ಅವಸ್ಥೆ ಕಾವ್ಯಮಯ ಸ್ವರೂಪದ್ದೆಂದು ಅನೇಕ ಭಾಷಾ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಇದಲ್ಲದೆ ಸಮೂಹದಲ್ಲಿ ಕೆಲಸ ಮಾಡುವಾಗ ಶಾರೀರಕ ಚಲನೆಯನ್ನು ಅನುಸರಿಸಿ 'ಲಯ' ನಿರ್ಮಾಣವಾಯಿತು. ಇದು ಶ್ರಮಕ್ಕೆ ಬಳಸಿದ ಉಪಕರಣಗಳ ಚಲನೆಯನ್ನೂ ಅವಲಂಬಿಸಿತು. ಇದು ನೃತ್ಯ ಮತ್ತು ಹಾಡು ಎಂಬ ಎರಡು ರೀತಿಗಳಲ್ಲಿ ವ್ಯಕ್ತವಾಯಿತು. ಮನುಷ್ಯನ ಭಾಷೆಯ ಲಯ ಒಟ್ಟನಲ್ಲಿ ಶ್ರಮದ ಹಾದಿಯಲ್ಲಿ ಮೈತಳೆದಿದ್ದು.

ಶ್ರಮದ ಹಾದಿಯಲ್ಲಿ ಮಾತು ಮತ್ತು ಸಂಗೀತ ಒಂದೇ ಕಾಲಕ್ಕೆ ಸೃಷ್ಟಿಯಾಯಿತು ಎನ್ನಬಹುದು. ಪ್ರಾಚೀನ ಮಾನವ, ತಾನು ಬೇಟೆಯಾಡಿ ತಂದ ಪ್ರಾಣಿಯನ್ನು ಬೆಂಕಿಯಲ್ಲಿ ಹಾಕಿ ಸುಡುವಾಗ, ಆ ಬೆಂಕಿಯ ಸುತ್ತ ಕುಣಿದು ಹಾಡಲಾರಂಭಿಸಿದ. ಮುಂದೆ ಸಮೃದ್ಧ ಬೆಳೆಗೆ, ಪ್ರಕೃತಿಯ ಕೋಪದ ತಣಿವಿಗೆ ಬೇಡಿಕೊಳ್ಳುವಾಗ ಅದು ಆಚರಣೆಯಾಯಿತು. ಈ ಘಟ್ಟದಲ್ಲೂ ಆಚರಣೆ, ಧಾರ್ಮಿಕವಾಗಿರದೆ ಸರಳವಾಗಿತ್ತು. ಶ್ರಮಿಕರ ಸಾಮೂಹಿಕ ಯತ್ನದಿಂದ ಹಾಡು ನಿರ್ಮಾಣವಾಗುತ್ತಿತ್ತು. ಕೇಳುವವರೇ ಹಾಡಿನ ಸೃಷ್ಟಿಯಲ್ಲೂ ಪಾಲ್ಗೊಳ್ಳುತ್ತಿದ್ದರು, ಬಹುಶಃ ಅವರಲ್ಲಿ ಒಬ್ಬನು ಅದನ್ನು ಹೇಳುತ್ತಾ ಉತ್ತಮ ಪಡಿಸುತ್ತಿದ್ದ.

ಬೌದ್ಧಿಕ ಕ್ಷೇತ್ರದ ನಾಯಕತ್ವ ವಹಿಸಿದ ಪುರೋಹಿತ ವರ್ಗದ ಕಲ್ಪನೆಗಳಲ್ಲಿ ಪುರಾಣಗಳು ಸೃಷ್ಟಿಯಾದವು. ಮುಂದೆ ಮಾಂತ್ರಿಕ ಶಕ್ತಿಯ ಒಂದು ಭಾಗವಾಗಿ ಕಾವ್ಯಸೃಷ್ಟಿ ರೂಪು ತಳೆಯಿತು. ಕವಿ ಭವಿಷ್ಯವಾದಿಯಂತೆ, ಮೈಮೇಲೆ ಬಂದವನಂತೆ ರೂಪುಗೊಂಡ. ಈ ಕವಿಯ ಸೃಜನಶೀಲ ಕ್ರಿಯೆಗೆ ಪುರಾಣವೇ ಮೂಲವಾಯಿತು. ಧರ್ಮ ಮೂಲವಾದ ಈ ಸೃಷ್ಟಿ ಚಟುವಟಿಕೆಯಲ್ಲಿ ಕೂಡ ಸತ್ಯದ ಕೆಲವಂಶಗಳನ್ನು ಗುರುತಿಸಬಹುದು. ಕಲ್ಪನೆಗಳ ಮೂಲಕ ಪ್ರಕೃತಿ ಶಕ್ತಿಯನ್ನು ನಿಯಂತ್ರಿಸುವ ಕೆಲಸದ ಒಂದು ಆಶಯವಾಗಿ ಇದು ರೂಪುಗೊಂಡಿತು. ಪ್ರಾಚೀನ ಮಾನವರ ಈ ಆಶಯದ ಕಾರಣಗಳಿಂದಾಗಿಯೇ ಇಂದಿಗೂ ನಾವು ಅಂಥ ಕಲ್ಪನೆಗಳನ್ನು ಆರೋಗ್ಯಕರವಾದುವೆಂದು ಮೆಚ್ಚುವುದು. ಆರಂಭ ಕಾಲದ ವೇದ ಸಾಹಿತ್ಯ ಈ ಬಗೆಯ ಆಶಯವನ್ನು ಹೊಂದಿರುವಂತಹುದು.

ಹಿಂದೆ ದೈವವಾದಿಗಳನ್ನು ವಿರೋಧಿಸಿದ ನಿರೀಶ್ವರವಾದಿಗಳು ವಸ್ತುವೇ ಜ್ಞಾನದ ಮೂಲ ಎಂದು ಪ್ರತಿಪಾದಿಸಿದ್ದರೂ ಕೂಡ, ಅವರ ಪ್ರಭಾವ ಪರಿಣಾಮಕಾರಿಯಾಗಲು ಬೇಕಾದ ಪರಿಸರವಿಲ್ಲದೆ, ಅವರ ಸಿದ್ಧಾಂತ ಮೂಲೆಗುಂಪಾಯಿತು. ಮಾರ್ಕ್ಸ್‌ವಾದದ ಬೆಳಕಿನಲ್ಲಿ ಪ್ರಕೃತಿ ಮತ್ತು ಸಮಾಜವನ್ನು ವಿಶ್ಲೇಷಿಸತೊಡಗಿದ ಮೇಲೆ ಸಮಾಜದ ಚಟುವಟಿಕೆಗಳಲ್ಲಿ ಒಂದಾದ ಸಾಹಿತ್ಯಕ್ಕೂ ಹೊಸ ಆಯಾಮ ದೊರೆತು, ಸಾಹಿತ್ಯ, ಅದನ್ನು ಸೃಷ್ಟಿಸುವ ಮಿದುಳು, ವಸ್ತು ಮೂಲವನ್ನು ಅವಲಂಬಿಸಿಕೊಂಡೇ ಬೆಳೆಯುವಂತಹುದೆಂಬುದು ಸ್ಪಷ್ಟವಾಯಿತು.

ಉತ್ಪಾದನೆಯ ಕೆಳಹಂತದಲ್ಲಿ ಇಂಥ ಸ್ಥಿತಿ ಇದ್ದರೆ, ಉತ್ಪಾದನಾ ಸಲಕರಣೆಗಳು ಅಭಿವೃದ್ಧಿಗೊಂಡು ಹೆಚ್ಚುವರಿ ಉತ್ಪಾದನೆ ಸಾಧ್ಯವಾದಾಗ ಶ್ರಮ ವಿಭಜನೆಗೂ ದಾರಿಯಾಯಿತು. ಈ ಹೆಚ್ಚುವರಿ ಉತ್ಪಾದನೆಯನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನಕ್ಕೆ ಶ್ರಮ ವಿಭಜನೆಯಿಂದ ಬಿಡುವು ದೊರೆತ ಕೆಲವರು ಕೈಹಾಕಿದರು. ಇದೇ ಕಾಲಕ್ಕೆ ಶ್ರಮದೊಂದಿಗೇ ಇದ್ದ ಆಚರಣೆಗಳು ಬೇರೆಯಾಗಿ ಧರ್ಮ ಹುಟ್ಟಿಕೊಂಡಿತು. ಅದಕ್ಕೊಬ್ಬ ಅಧಿಕಾರಿಯೂ ಸೃಷ್ಟಿಯಾಗಿ, ಅದು ಅವನ ಸ್ವತ್ತೆಂಬ ಕಟ್ಟುಪಾಡುಗಳೂ ಹುಟ್ಟಿಕೊಂಡವು. ಶ್ರಮವಿಭಜನೆಯಿಂದಾಗಿ ಶಾರೀರಕ ಶ್ರಮ ಮತ್ತು ಬೌದ್ಧಿಕ ಶ್ರಮಗಳು ಬೇರೆಯಾಗಿ ಸಮಾಜ ಎರಡು ಭಾಗವಾಯಿತು. ಬೌದ್ಧಿಕ ಚಟುವಟಿಕೆಯ ಯಜಮಾನಿಕೆಯನ್ನು ಕೆಲಸಮಾಡದ ಜನ ಗುತ್ತಿಗೆ ಹಿಡಿದಾಗ ಉಳಿದವರಿಗೆ ಆ ಕ್ಷೇತ್ರ ದೂರವಾಯಿತು. ವರ್ಗ ಸಮಾಜದ ಉದಯದೊಂದಿಗೇ ಧರ್ಮ, ತತ್ವ ಶಾಸ್ತ್ರ, ಸಾಹಿತ್ಯ, ಕಲೆ ಇವುಗಳೂ ಹುಟ್ಟಿಕೊಂಡವು.

ಬದಲಾವಣೆ

ಶ್ರಮ ವಿಭಜನೆಯ ವ್ಯಾಪ್ತಿ ಹೆಚ್ಚಿದಂತೆಲ್ಲ ಹೆಚ್ಚುವರಿ ಉತ್ಪಾದನೆಗೆ ಒಡೆಯರಾದವರು ಆಳ್ವಿಕೆ ಮತ್ತು ಅಧಿಕಾರ ನಡೆಸುವವರಾಗಿ ಕಲೆ ಮತ್ತು ವಿಜ್ಞಾನಗಳನ್ನೂ ವಶದಲ್ಲಿಟ್ಟುಕೊಂಡರು. ಕುಂಬಾರ ಚಕ್ರ, ದೋಣಿ ಇವುಗಳೆಲ್ಲ ಸೃಷ್ಟಿಯಾಗಿ ಉತ್ಪಾದನಾ ಸಂಬಂಧಗಳೂ ಬದಲಾದವು. ಹಿಂದೆ ಗುಂಪು ಜಗಳಗಳಲ್ಲಿ ಸಾಯುತ್ತಿದ್ದವರು ಈಗ ಹಾಗೇ ಉಳಿದು ಗುಲಾಮರಾದರು. ಈ ಗುಲಾಮರು ಯಾವುದೇ ರೀತಿಯ ಸ್ವಂತಿಕೆ ಇಲ್ಲದೆ ಪ್ರಾಣಿಗಳಿಗಿಂತ ಕಡೆಯಾಗಿ ದುಡಿದದ್ದನ್ನೆಲ್ಲ ಒಡೆಯರಿಗೆ ಒಪ್ಪಿಸುತ್ತಿದ್ದರು. ಗುಲಾಮರ ದುಡಿಮೆಯಿಂದ ಆಳುವ ವರ್ಗಕ್ಕೆ ಮತ್ತಷ್ಟು ಬಿಡುವು ಹೆಚ್ಚಿ ತತ್ವ, ನ್ಯಾಯ, ರಾಜಕೀಯ, ಕಲೆ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿತವಾಯಿತು.

ವರ್ಗರಹಿತ ಸಮಾಜದ ಆಶಯಗಳು ಸಾಮಾಜಿಕ ಹಿತಕ್ಕೆ ಬದ್ಧವಾಗಿದ್ದವು. ಆದರೆ ಗುಲಾಮ ವ್ಯವಸ್ಥೆಯಲ್ಲಿ ವರ್ಗ ಸಮಾಜ ರೂಪುಗೊಂಡಾಗ ಸಾಮಾಜಿಕ ಹಿತ, ಆಶಯಗಳು ಮಾಯವಾದವು. ಏಕೆಂದರೆ ಉತ್ಪಾದನೆ ಸಾಮಾಜಿಕವಾಗಿದ್ದರೂ ವಿತರಣೆ ವ್ಯಕ್ತಿಗತವಾಗಿತ್ತು. ಈ ಎರಡರ ನಡುವಿನ ಸಂಘರ್ಷದಿಂದ ಹುಟ್ಟಿದ ಹೋರಾಟದಲ್ಲಿ, ಧರ್ಮ, ಕಲೆ, ಸಾಹಿತ್ಯ ಮೊದಲಾದುವೆಲ್ಲ ಅವುಗಳನ್ನು ಬಳಸುತ್ತಿದ್ದವರ ಪರವಾಗಿ ಸಮರ್ಥನೆಯನ್ನು ಒದಗಿಸುವುದು ಅನಿವಾರ್ಯವಾಗಿತ್ತು.

ಉತ್ಪಾದನಾ ಶಕ್ತಿಗಳು ತಮ್ಮ ಬೆಳವಣಿಗೆಯ ಒಂದು ಘಟ್ಟದಲ್ಲಿ ಉತ್ಪಾದನಾ ಸಂಬಂಧಗಳ ಜೊತೆ ಘರ್ಷಣೆಗೆ ತೊಡಗುತ್ತವೆ. ಅಂದರೆ ಆಸ್ತಿ ಸಂಬಂಧಗಳ ನಡುವೆ ಹೋರಾಟ ಅನಿವಾರ್ಯವಾಗುತ್ತದೆ. ಉತ್ಪಾದನಾ ಶಕ್ತಿಗಳ ಬೆಳವಣಿಗೆಯಿಂದಾಗಿ ಇದ್ದ ಉತ್ಪಾದನಾ ಸಂಬಂಧಗಳು ಮುರಿದುಬಿದ್ದು ಹೊಸ ಸಂಬಂಧಗಳು ರೂಪುಗೊಳ್ಳುತ್ತವೆ. ಈ ಪ್ರಕ್ರಿಯೆಯಿಂದಾಗಿ ಗುಲಾಮ–ಒಡೆಯ ಸಂಬಂಧ ತಪ್ಪಿ, ಗುಲಾಮನನ್ನು ಒಡೆಯನಾದವನು ಜೀವಮಾನವೆಲ್ಲ ಕಾಪಾಡುವ ಜವಾಬ್ದಾರಿ ತಪ್ಪಿ, ಒಡೆಯನು ಅಷ್ಟೇ ಪ್ರಯೋಜನವನ್ನು ಕಡಿಮೆ ಹೊಣೆಗೆ ಪಡೆಯುವ ಜೀತದಾಳು–ಜಮೀನ್ದಾರ ಸಂಬಂಧ ರೂಪುಗೊಂಡಿತು. ಅದನ್ನು ಸಮರ್ಥಿಸುವುದಕ್ಕೆ ಅಗತ್ಯವಾದ ತಾತ್ವಿಕ ಚಿಂತನೆಗಳೂ ಆ ಕಾಲದಲ್ಲಿ ಹುಟ್ಟಿಕೊಂಡವು.

ಆರ್ಥಿಕರಚನೆ ಮೂಲವಾಗಿದ್ದು ಅದನ್ನು ಅವಲಂಬಿಸಿಕೊಂಡೇ ಸಾಹಿತ್ಯ ಮೊದಲಾದುವುಗಳ ಬೆಳವಣಿಗೆ ನಿರ್ಧರಿತವಾಗುತ್ತದಾದರೂ, ಇವೂ ಕೂಡ ಪರಸ್ಪರ ಪ್ರಭಾವ ಬೀರುವುದರ ಜೊತೆಗೆ ಆರ್ಥಿಕ ಮೂಲದ ಮೇಲೂ ಪ್ರಭಾವ ಬೀರುತ್ತವೆ. ಆರ್ಥಿಕ ಮೂಲವೊಂದೇ ತನಗೆ ತಾನೇ ಎಲ್ಲಾ ಪ್ರಭಾವಗಳನ್ನೂ ನಿರ್ಮಿಸುತ್ತದೆ ಎಂದು ತಿಳಿಯುವುದು ಕುರುಡು ತಿಳುವಳಿಕೆಯಾಗುತ್ತದೆ.

ಸಮಾಜ ವರ್ಗಗಳಾಗಿ ಒಡೆದಾಗ ಬಳಕೆಯಿಂದ ಬೆಳೆಯಬೇಕಾದ ಜ್ಞಾನ, ಬಳಸಬೇಕಾದವರಿಂದ ದೂರವಾದ ವರ್ಗದ ಸ್ವತ್ತಾಗಿ ಬೆಳವಣಿಗೆಯಲ್ಲಿ ತೊಡಕುಗಳನ್ನು ಎದುರಿಸಿತು. ಬರವಣಿಗೆ ರೂಪುಗೊಂಡ ಮೇಲಂತೂ ಜ್ಞಾನದ ಮಾಧ್ಯಮಗಳು ಅದಷ್ಟು ಮಿತವಾದ ಪ್ರಜ್ಞೆಗೆ ಸೀಮಿತಗೊಳಿಸಿಕೊಂಡು ಉದ್ದೇಶಪೂರ್ವಕ ಪಾತ್ರವನ್ನು ವಹಿಸಿದವು. ಗಣಿತದ ಬೆಳವಣಿಗೆಯಿಂದಾಗಿ ಅವು ಮತ್ತಷ್ಟು ಗುಣಾತ್ಮಕವಾದವು. ವರ್ಗ ಸಮಾಜದ ರಚನೆಯಿಂದಾಗಿ ಕಾವ್ಯ ಮುಂತಾದ ಕಲೆಗಳ ಸ್ವರೂಪದಲ್ಲಿ ಬೆಳವಣಿಗೆಯಾದುದಲ್ಲದೆ ಆಶಯಗಳಲ್ಲೂ ಬದಲಾವಣೆಗಳು ಹುಟ್ಟಿಕೊಂಡವು.

ಆದಿಮಾನವ ಸಮಾಜವನ್ನುಳಿದರೆ ಇಡೀ ಮನುಷ್ಯನ ಚರಿತ್ರೆ ವರ್ಗಗಳ [illegible]ವೇ ಆಗಿರುವುದರಿಂದ ಪ್ರತಿಯೊಂದು ಕಾಲಘಟ್ಟಗಳಲ್ಲಿಯೂ ಆಳುವ ವರ್ಗದ ಆಲೋಚನೆಗಳೇ ಆಳುತ್ತಿರುತ್ತವೆಂಬುದು ಸ್ಪಷ್ಟ. ಏಕೆಂದರೆ ಆಳುವ ವರ್ಗವೇ ಆಳುವುದಕ್ಕೆ ಬೇಕಾದ ಬೌದ್ಧಿಕ ಪರಿಶ್ರಮವನ್ನು ಒದಗಿಸುತ್ತಿರುತ್ತದಲ್ಲದೆ, ಉತ್ಪಾದನಾ ಸಾಧನಗಳನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುತ್ತದೆ. ಆದ್ದರಿಂದ ಬೌದ್ಧಿಕ ಚಟುವಟಿಕೆಯನ್ನೂ ಆ ವರ್ಗವೇ ನಿಯಂತ್ರಿಸುತ್ತಿರುತ್ತದೆ.

ಆಳುವ ವರ್ಗದ ಆಲೋಚನೆಗಳು ಎಂದರೆ ಉತ್ಪಾದನಾ ಸಂಬಂಧಗಳೇ. ಅದರ ಮೂಲಕ ಗ್ರಹಿಸಬಹುದಾದ ವಿಚಾರವೆಂದರೆ, ಆ ಸಂಬಂಧದಿಂದಾಗಿ ಒಂದು ವರ್ಗ ಆಳುವ ಸ್ಥಾನದಲ್ಲಿರುವುದರಿಂದ ಅದೇ ಪ್ರಧಾನವಾಗಿರುತ್ತದೆ ಎಂದಷ್ಟೆ ಅರ್ಥ. ಇದರಿಂದ ಆಳುವ ವರ್ಗದ ಆಲೋಚನೆಗಳೆಂಬುವು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವುದಿಲ್ಲ, ಅವು ಉತ್ಪಾದನಾ ಸ್ವರೂಪವನ್ನು ಅವಲಂಬಿಸಿಕೊಂಡೇ ಇರುತ್ತವೆಯೇ ಹೊರತು ವ್ಯಕ್ತಿಗಳನ್ನು ಅಲ್ಲ ಎಂಬುದೂ ಸ್ಪಷ್ಟವಾಗುತ್ತದೆ. ಆದ್ದರಿಂದ ವರ್ಗ ವಿರೋಧಗಳಿರುವ ಸಮಾಜದಲ್ಲಿ ಸಾಹಿತ್ಯ ಕೂಡ ವರ್ಗ ಸಂಘರ್ಷಗಳಿಂದ ಪ್ರಭಾವಿತವಾಗುವುದು ಮಾತ್ರವಲ್ಲ ಆ ಸಮಾಜದ ರಾಜಕೀಯ ಮತ್ತು ತಾತ್ವಿಕ ಚಿಂತನೆಗಳಿಂದಲೂ ಪ್ರಭಾವಿತವಾಗುತ್ತದೆ. ಆದರೆ ಒಂದು ವರ್ಗದ ವಿಚಾರಗಳಿಂದ ಸಾಹಿತ್ಯ ಪ್ರಭಾವಿತವಾದರೂ ಕೂಡ, ಅದು ಯಾಂತ್ರೀಕೃತವಾದ ರೀತಿಯಲ್ಲಿ ಇರುವುದಿಲ್ಲ. ಕಲಾತ್ಮಕ ಸೃಷ್ಟಿ, ಸಮಾಜದ ಬೆಳವಣಿಗೆಯ ನಿಯಮಗಳಿಗೆ ಬದ್ಧವಾಗಿದ್ದರೂ ಕೂಡ ವಿಶೇಷ ರೀತಿಯ ಪ್ರಜ್ಞೆಯಾಗಿರುವುದರಿಂದ ಅದಕ್ಕೇ ವಿಶಿಷ್ಟವಾದ ಕೆಲವು ಲಕ್ಷಣಗಳು ಮತ್ತು ವಿಧಾನಗಳು ಮೈಗೂಡಿರುತ್ತವೆ. ಆದ್ದರಿಂದಲೇ ಕೃತಿ, ಒಂದು ವರ್ಗದ ಆಶಯಗಳನ್ನು ಹೇಳುತ್ತಿದ್ದರೂ ಕೂಡ ವಿಭಿನ್ನ ವ್ಯವಸ್ಥೆಯ ಸಮಾಜದಲ್ಲೂ ಗ್ರಾಹ್ಯವಾಗುತ್ತದೆ.

ಸಾಹಿತ್ಯ ಬೆಳವಣಿಗೆಯಾದಂತೆಲ್ಲ ಅದಕ್ಕೊಂದು ತಾತ್ಕಾಲಿಕ ಸ್ವಾತಂತ್ರ್ಯ ಲಭಿಸುತ್ತದೆ. ಅದಕ್ಕಾಗಿಯೇ ಒಂದು ವಿಶಿಷ್ಟ ಸಾಮಾಜಿಕ ರಚನೆಯ ಕಾಲದಲ್ಲಿ ಸೃಷ್ಟಿಯಾದ ಕೃತಿ, ಆ ಸಮಾಜ ರಚನೆ ಬದಲಾದಾಗಲೂ ತನ್ನ ಮಹತ್ವ ಉಳಿಸಿಕೊಂಡಿರುತ್ತದೆ. ಒಂದು ಸಾಹಿತ್ಯ ಕೃತಿಯನ್ನು ಒಂದೂ ಕಾಲದ ಸಾಮಾಜಿಕ ಸಂಘರ್ಷಗಳ ಪ್ರತಿನಿಧಿ ಎಂದು ನೋಡುವಾಗಲೂ ಅದನ್ನು ಶಾಶ್ವತಗೊಳಿಸಿದ ಮೌಲ್ಯಗಳಾವುವು ಎಂಬುದನ್ನು ಗಮನಿಸಬೇಕಾಗುತ್ತದೆ.

ಕ್ರಿಯಾತ್ಮಕ ಪುನರ್‌ಸೃಷ್ಟಿ

ಮನುಷ್ಯನ ಚಟುವಟಿಕೆಯ ಮಾಧ್ಯಮಗಳಲ್ಲಿ ಸಾಹಿತ್ಯವೂ ಒಂದು. ಅದು ತನ್ನ ಸುತ್ತಣ ವಾಸ್ತವವನ್ನು ಸಾಮಾಜಿಕ ಮತ್ತು ಸೌಂದರ್ಯಾತ್ಮಕ ದೃಷ್ಟಿಯಿಂದ ವಿಶಿಷ್ಟರೂಪದಲ್ಲಿ ಪ್ರತಿ[illegible] ಸಾಹಿತ್ಯ ಎನ್ನುವುದು ವಾಸ್ತವದ ಕ್ರಿಯಾತ್ಮಕ ಪುನರ್‌ಸೃಷ್ಟಿ. ಇದೇ ಸಾಹಿತ್ಯ ಮತ್ತು ಕಲೆಗಳ ಭೌತವಾದಿ ವಿಶ್ಲೇಷಣೆಯ ಮೂಲಸೂತ್ರ. ಸಾಹಿತ್ಯ, ವಾಸ್ತವವನ್ನು ಪ್ರತಿಬಿಂಬಿಸುವುದಷ್ಟೇ ಅಲ್ಲ, ವಾಸ್ತವವನ್ನು ಗ್ರಹಿಸುವ ಅರ್ಥಮಾಡಿಸುವ ಕೆಲಸವನ್ನೂ ಅದೇ ಕಾಲಕ್ಕೆ ಮಾಡುತ್ತದೆ. ಒಂದು ಜನಾಂಗದ ಕೃತಿ ಅದರ ಆಲೋಚನೆಗಳಿಂದ ನಿರ್ಧರಿತವಾಗುತ್ತದೆ. ಆ ಆಲೋಚನೆಗಳೂ ಆ ಸಂದರ್ಭದಿಂದ ಹುಟ್ಟಿರುತ್ತವೆ. ಆ ಸಂದರ್ಭವೂ ಅಂತಿಮ ವಿಶ್ಲೇಷಣೆಯಲ್ಲಿ ಅದರ ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳನ್ನು ಅವಲಂಬಿಸಿಕೊಂಡೇ ಇರುತ್ತದೆ.

ಸಾಹಿತ್ಯದಲ್ಲಿ ವ್ಯಕ್ತವಾಗುವ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ವಿಶ್ಲೇಷಿಸಲು ಆಯಾ ಜನಾಂಗದ ಚರಿತ್ರೆ ನೆರವಾಗುತ್ತದೆ. ಇದು ಚಾರಿತ್ರಿಕ–ಭೌತವಾದಿ ದೃಷ್ಟಿಕೋನದ ಮೂಲಕ ಸಾಧ್ಯವಾಗುತ್ತದೆ. ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಇರುವಿಕೆಯಿಂದ ನಿರ್ಧರಿತವಾಗುತ್ತದೆನ್ನುವ ತಿಳುವಳಿಕೆ ಕಾಲಕಾಲದ ಸಾಹಿತ್ಯ ಚಟುವಟಿಕೆಯ ವಿಶ್ಲೇಷಣೆಗೆ ಮಾರ್ಗದರ್ಶಿಯಾಗುತ್ತದೆ. ಏಕೆಂದರೆ ಮನುಷ್ಯನ ಸೌಂದರ್ಯಪ್ರಜ್ಞೆ ಮತ್ತು ಕಲಾಕೃತಿಗಳ ಹುಟ್ಟುಕೂಡ ಸಮಾಜದಲ್ಲಿ ಮನುಷ್ಯನ ಅವಿರತವಾದ ಬೆಳವಣಿಗೆಯ ಎಂದರೆ ಮನುಷ್ಯನ ಶ್ರಮದ ಫಲವಾಗಿದೆ.

ಆದ್ದರಿಂದ ಸಾಹಿತ್ಯ ತನಗೆ ತಾನೇ ಪ್ರತ್ಯೇಕವಾದದ್ದು ಎಂಬ ಮಾತಿಗೆ ಮಾರ್ಕ್ಸ್‌ವಾದದಲ್ಲಿ ಜಾಗವಿಲ್ಲ. ಮನುಷ್ಯನ ಸೌಂದರ್ಯಪ್ರಜ್ಞೆ ಶ್ರಮದ ಫಲವಾಗಿರುವುದರಿಂದ ಅದು ಅವನಿಗೆ ಹುಟ್ಟಿನಿಂದ ಬರದೆ ಸಮಾಜದಿಂದ ಗಳಿಸಿದ ಗುಣವಾಗಿದೆ. ಅದು ಎಲ್ಲರಿಗೂ ತಾನಾಗಿ ಬರುವುದಾಗಿದ್ದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೆಳವರ್ಗಗಳು ಹನ್ನೆರಡನೆ ಶತಮಾನದವರೆಗೆ ಮೂಕವಾಗಿರಬೇಕಾಗಿರಲಿಲ್ಲ. ಎರಡು ಸಾವಿರ ವರ್ಷಗಳ ಸಾಹಿತ್ಯ ಚರಿತ್ರೆಯಲ್ಲಿ ಆ ಒಂದು ಘಟ್ಟ ಕಳೆದರೆ, ಇಪ್ಪತ್ತನೇ ಶತಮಾನದವರೆಗೆ ಆ ವರ್ಗಗಳು ಮತ್ತೆ ಮೂಕವಾಗಿರಬೇಕಾಯಿತು.

ಸಾಹಿತ್ಯ-ವಿಜ್ಞಾನ

ಸಾಹಿತ್ಯದ ಗುಣಗಳನ್ನು ಕುರಿತು ಮಾತನಾಡುವಾಗಲೆಲ್ಲ ಕೆಲವರು ಸಾಹಿತ್ಯಕ್ಕೂ ವಿಜ್ಞಾನಕ್ಕೂ ಪರಸ್ಪರ ವಿರೋಧವನ್ನು ಆರೋಪಿಸುತ್ತಾರೆ. ಆದರೆ ಸಾಹಿತ್ಯ ಮತ್ತು ವಿಜ್ಞಾನ ಎರಡೂ ಭಿನ್ನ ಕ್ಷೇತ್ರಗಳಾಗಿದ್ದರೂ ಅವು ವಿರೋಧಿಗಳಾಗದೆ ಒಂದೇ ಗುರಿ ಹೊಂದಿವೆ. ಎರಡಕ್ಕೂ ಬೇರೆಬೇರೆ ಮಾಧ್ಯಮದಲ್ಲಿ ಚಟುವಟಿಕೆ ಇದ್ದರೂ ವಸ್ತು ಸತ್ಯವನ್ನು ಹೇಳುವುದೇ ಅವುಗಳ ಮುಖ್ಯ ಗುರಿ. ಬದುಕಿನ ಶೋಧನೆಯಲ್ಲಿ ಕಲಾತ್ಮಕ ಸತ್ಯ – ವೈಜ್ಞಾನಿಕ ಸತ್ಯಕ್ಕಿಂತ ಬೇರೆಯಾಗಿರುವುದಿಲ್ಲ. ಮನುಷ್ಯನ [illegible] ಬದುಕನ್ನು [illegible] ಕೆಲಸವನ್ನು ಎರಡೂ ಮಾಡುತ್ತವೆ. ವಿಜ್ಞಾನ ಕ್ಷೇತ್ರದಲ್ಲಾದ ಅನೇಕ ಸಾಧನೆಗಳು ಸಾಹಿತಿಗಳ ಬದುಕಿನ [illegible]ಯನ್ನು [illegible]ಸಿವೆ. ಸಾಹಿತ್ಯದ ಸಂಬಂಧ [illegible] ವಿಜ್ಞಾನಗಳ ಜೊತೆಗೂ [illegible]. ಸಮಾಜ ವಿಜ್ಞಾನದ ಅನೇಕ ಸಂಶೋಧನೆಗಳೂ ಸಾಹಿತ್ಯ ಕ್ಷೇತ್ರದ ಅರಿವನ್ನು ವಿಸ್ತಾರಗೊಳಿಸಿವೆ.

ವರ್ಗ ಸಮಾಜದಲ್ಲಿ ಸಾಹಿತ್ಯ ಕೂಡ ಚಿಂತನೆಗೆ ವಾಹಕವಾಗಿ ಕೆಲಸ ಮಾಡುತ್ತದೆ. ಯಾವುದೇ ಕಾಲದ ಸಾಹಿತ್ಯ ಕೃತಿಯಲ್ಲೂ ಕೃತಿಕಾರ ಹೇಳಬೇಕೆಂದು ಆಶಿಸುವ ಸಂದೇಶವೊಂದು ಇದ್ದೇ ತೀರುತ್ತದೆ. ಅದು ನಮ್ಮ ಆಲೋಚನೆಗೆ ಆಹಾರ ಒದಗಿಸುವುದಲ್ಲದೆ ಯಾವುದೇ ವಸ್ತುವನ್ನು ಕುರಿತದ್ದಾದರೂ ನಮ್ಮ ಗಮನ ಸೆಳೆಯುತ್ತದೆ. ಈ ತಾತ್ವಿಕ ಸಂದೇಶ ಕೃತಿಯಿಂದ ಬೇರೆಯಾಗಿರದೆ ಅಂತರ್ಗತವಾಗಿರುತ್ತದೆ. ಕಲೆಯ ಸ್ವರೂಪವೇ ತಾತ್ವಿಕವಾದದ್ದರಿಂದ ಅದು ಮನುಷ್ಯನ ಶೋಧನೆಯ ಮೂಲಕ ಬದುಕಿನ ಅರ್ಥವನ್ನು ತಿಳಿಸಿ ಅವನ ದೃಷ್ಟಿಕೋನವನ್ನು ರೂಪಿಸಲು ಪ್ರಭಾವಬೀರಬೇಕಾಗುತ್ತದೆ. ಕೃತಿಯ ಸಂದೇಶವನ್ನು ಅದರಿಂದ ಬೇರ್ಪಡಿಸುವುದು ಸಾಧ್ಯವಾಗದೆ ಇದ್ದಾಗಲೇ ಅದರ ಸಹಜ ಸ್ವರೂಪ ಸ್ಥಾಪಿತವಾಗುತ್ತದೆ. ಕೃತಿಯೊಂದು, ಸಮಾಜದ ಮಾದರಿಗಳನ್ನು ಸೃಷ್ಟಿಸುವುದರ ಮೂಲಕ ಇಡೀ ಸಮಾಜವನ್ನು ಚಿತ್ರಿಸಿ ಮಾನವರಲ್ಲಿ ನೈತಿಕ ಗುಣಗಳ ಬೆಳವಣಿಗೆಗೆ ಕಾರಣವಾಗಬೇಕು ಎಂದು ಹೇಳುವವರೂ ಇದ್ದಾರೆ.

ನನ್ನ ಕೃತಿಗೆ ಯಾವುದೇ ವಿಚಾರಗಳನ್ನು ಹೇಳುವ ಉದ್ದೇಶಗಳಿಲ್ಲ ಎನ್ನುವ ಕೃತಿಕಾರನ ಕೃತಿಯಲ್ಲೂ ವಿಚಾರ ಇಲ್ಲದೆ ಇರುವುದು ಸಾಧ್ಯವಿಲ್ಲ. ರೂಪ ಪ್ರಾಧಾನ್ಯವನ್ನು ಹೇಳುವ ಕೃತಿಕಾರರ ಕೃತಿಗಳೂ ಇದಕ್ಕೆ ಹೊರತಲ್ಲ. ಅವು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ವಿಚಾರಗಳನ್ನು ಹೇಳುತ್ತವೆ. ಕೃತಿಗಳಲ್ಲಿನ ಚಿಂತನೆ, ಆಲೋಚನೆಗಳೂ ಕಾಲಕಾಲಕ್ಕೆ ಅಂದರೆ ಆಯಾ ಕಾಲದಲ್ಲಿ ಬದಲಾದ ವರ್ಗಸಂಬಂಧಗಳನ್ನವಲಂಬಿಸಿ ಬದಲಾಗುತ್ತಿರುತ್ತವೆ. ಕೃತಿಯ ಮೌಲ್ಯ ನಿರ್ಧಾರವಾಗುವುದು, ಸತ್ಯನಿಷ್ಠೆ, ಕೃತಿಯ ಆಳ, ಅದರ ಆಲೋಚನೆಗಳ ಸಾಮಾಜಿಕ ಅರ್ಥಪೂರ್ಣತೆ ಇವುಗಳಿಂದ ಕೃತಿ ಹೇಳುವ ಸತ್ಯ, ಪರಿಸರ-ಇರುವಿಕೆಯ ಮೇಲೆ ಕಲಾತ್ಮಕವಾಗಿ ಹೇಳಿದ ತೀರ್ಪು ಕೂಡ ಆಗಿರುತ್ತದೆ.

ಧಾರ್ಮಿಕ ಪ್ರಭಾವ

ನಮ್ಮ ಸಾಹಿತ್ಯದ ಬಹುಪಾಲು ಧಾರ್ಮಿಕ ಪ್ರಭಾವದಿಂದ ಪ್ರೇರಿತವಾದದ್ದು. ಸಾಹಿತ್ಯ, ಕಲೆ ಮೊದಲಾದುವೆಲ್ಲ ಧರ್ಮದ ಚೌಕಟ್ಟಿನಲ್ಲೇ ಬಹಳಕಾಲ ಬದುಕುವಂತಾದ್ದರಿಂದ ಧರ್ಮ ಅವುಗಳ ಮೇಲೆ ತನ್ನ ಒಡೆತನ ಸ್ಥಾಪಿಸಿತು. ಪ್ರಭುತ್ವದ ಮೇಲೆ ಧರ್ಮದ ಹಿಡಿತ ಬಲವಾದದ್ದೂ ಇದಕ್ಕೆ ಪ್ರಮುಖ ಕಾರಣವಾಯಿತು. ಧರ್ಮದ ನಾಶದಿಂದ ಚಕ್ರಾಧಿಪತ್ಯಗಳ ಪತನವಾಯಿತು ಎಂದು ಕೆಲವರು ತಪ್ಪಾಗಿ ಹೇಳುತ್ತಾರೆ. ಹಾಗೆ ನೋಡಿದರೆ, ಚಕ್ರಾಧಿಪತ್ಯಗಳು ಉರುಳಿದ್ದರಿಂದ ಅವುಗಳನ್ನು ಅವಲಂಬಿಸಿ ಆಳುತ್ತಿದ್ದ ಧರ್ಮಗಳೂ ನಾಶವಾದವು ಎಂದು ಹೇಳುವುದೇ ಸರಿಯಾದದ್ದು. ವಾಸ್ತವವಾಗಿ ಧರ್ಮಕ್ಕೂ ಸಾಹಿತ್ಯಕ್ಕೂ ಯಾವುದೇ ಸಂಬಂಧವಿಲ್ಲ. ಧರ್ಮದ ಕಲ್ಪನೆಯಲ್ಲಿ ಜಗತ್ತನ್ನು ಸೃಷ್ಟಿಗೊಳಿಸಿ ಕೊಡಲಾಗಿದೆ. ಆದರೆ ಸಾಹಿತ್ಯ, ವಾಸ್ತವ ಜಗತ್ತನ್ನು ಕ್ರಿಯಾತ್ಮಕವಾಗಿ ಪುನರ್‌ಸೃಷ್ಟಿಸಿಕೊಡುತ್ತದೆ. ಒಂದು ಕಲ್ಪನೆಯ ಹಂತದಲ್ಲೇ ಸುಳ್ಳಿನತ್ತ ನಡೆದರೆ, ಮತ್ತೊಂದು ಸತ್ಯಶೋಧನೆಯ ನೆಲೆಗೆ ತಲುಪುತ್ತದೆ. ಸಾಹಿತ್ಯ ಮತ್ತು ಧರ್ಮಕ್ಕಿರುವ ಸಂಬಂಧ ಧರ್ಮ ಮತ್ತು ವಿಜ್ಞಾನಕ್ಕಿರುವುದಕ್ಕಿಂತ ಬೇರೆಯಾದುದಲ್ಲ.

ಇಷ್ಟಾದರೂ ಧರ್ಮ, ಇಪ್ಪತ್ತನೆಯ ಶತಮಾನದ ಆರಂಭಕಾಲದವರೆಗೆ, ಅಂದರೆ ಬಂಡವಾಳಶಾಹಿ ಉಗಮವದವರೆಗೆ ತನ್ನ ಹಿಡಿತವನ್ನು ಬಿಟ್ಟುಕೊಟ್ಟಿರಲಿಲ್ಲ. ಹಾಗೆ ನೋಡಿದರೆ ಧರ್ಮ, ಚರಿತ್ರೆಯಲ್ಲಿ ಎರಡು ರೀತಿಯ ಪಾತ್ರ ವಹಿಸಿದೆ. ವರ್ಗ ಶೋಷಣೆಯ ಸಮರ್ಥಕವಾಗಿರುವ ಅಧಿಕಾರ ವರ್ಗದ ಧರ್ಮ ಒಂದಾದರೆ, ಜನತೆಯ ಧರ್ಮ, ಶೋಷಿತರ ಪ್ರತಿಭಟನೆಯ ದನಿಯಾಗಿ ಕೆಲಸ ಮಾಡಿದೆ. ಪ್ರತಿಭಟನೆಯ ದನಿಯಾಗಿ ಜನತೆಯದಾಗಿದ್ದ ಧರ್ಮ, ಅಧಿಕಾರ ವರ್ಗದ ಧರ್ಮವಾದಾಗ ಜನತೆಯಿಂದ ದೂರವಾಗಿ ಪ್ರತಿಭಟನೆಯ ಸ್ವರೂಪವನ್ನು ಕಳೆದುಕೊಂಡಿದೆ. ಬೌದ್ಧ, ಜೈನ, ವೀರಶೈವ ಧರ್ಮಗಳ ಇತಿಹಾಸ ಇದನ್ನೇ ಹೇಳುತ್ತದೆ.

ಇಂಥ ಸಂದರ್ಭಗಳಲ್ಲಿ ಕವಿಗಳು ಅನುಭಾವದ ಜಗತ್ತಿಗೆ ಸಾಗಿಬಿಟ್ಟಿದ್ದಾರೆ. ತಮ್ಮ ಕಾಲದ ಸಂಘರ್ಷಕ್ಕೆ ತರ್ಕಬದ್ಧತೆಯನ್ನು ಕಂಡುಕೊಳ್ಳಲು ವಿಫಲರಾಗಿ ತರ್ಕವಿರೋಧಿ ನೆಲೆಗೆ ತಲುಪಿ ಸುಳ್ಳು ವಿಚಾರಗಳ ಪ್ರತಿಪಾದಕರಾಗಿದ್ದಾರೆ. ಇಂಥ ಬರಹಗಳಲ್ಲೂ ಏನನ್ನೋ ಹೇಳುವ ತವಕವಿದ್ದರೂ ಅದು ತರ್ಕವಿರೋಧಿಯಾಗಿರುತ್ತದೆ. ಅನುಭಾವಿಗಳು ಏನನ್ನೋ ಹೇಳಿದರೂ ಅದು ಸಾಮಾನ್ಯವಾಗಿ ಈ ಜಗತ್ತಿನದಾಗಿರದೆ ಸಾಮಾನ್ಯ ತಿಳುವಳಿಕೆಗೆ ವಿರೋಧಿಯಾಗಿರುತ್ತದೆ. ಆ ಕೃತಿಗಳ ಸಾಹಿತ್ಯಕ ಮಹತ್ವ ಎಷ್ಟೆ ಇದ್ದರೂ ಅದರ ಅಭದ್ರ ವೈಚಾರಿಕ ನೆಲೆಯಿಂದ ಅದು ತನ್ನ ಒಟ್ಟಾರೆ ಮಹತ್ವ ಕಳೆದುಕೊಳ್ಳುತ್ತದೆ. ಉತ್ಪಾದಿಸಿದುದನ್ನು ತನ್ನದಾಗಿಸಿಕೊಳ್ಳಲಾರದ ಉತ್ಪಾದಕನ ಅನಾಥಸ್ಥಿತಿ ಇಲ್ಲಿರುತ್ತದೆ. ಇದರಿಂದ ಪಲಾಯನ ಮಾಡುವ ಮಾರ್ಗವಾಗಿ ಅನುಭಾವ ಬೆಳೆಯುತ್ತದೆ.

ಸಾಹಿತ್ಯ–ರಾಜಕೀಯ

ಸಾಹಿತ್ಯ – ರಾಜಕೀಯಗಳ ಸಂಬಂಧದ ಬಗ್ಗೆ ಇತ್ತೀಚೆಗೆ ಹೆಚ್ಚು ಚರ್ಚೆ ಎದ್ದಿದೆ. ಜಗತ್ತಿನಲ್ಲಿ ಕೋಟ್ಯಂತರ ಮಂದಿ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಂಡು ಬದುಕನ್ನು ರೂಪಿಸಿಕೊಳ್ಳಲು ಹೋರಾಡುತ್ತಿರುವಾಗ ರಾಜಕೀಯಕ್ಕೂ ಸಾಹಿತ್ಯಕ್ಕೂ ಸಂಬಂಧ ಇರಬಾರದೆಂದು ಹೇಳುವುದು ಪ್ರತಿಗಾಮಿ ನೆಲೆಯ ಮಾತಾಗುತ್ತದೆ. ಸಾಹಿತ್ಯ ಕೃತಿ ರಾಜಕೀಯ ಸಿದ್ಧಾಂತದ ಕೈಪಿಡಿಯಲ್ಲ. ರಾಜಕೀಯ ಅದರ ಒಳಪದರುಗಳಲ್ಲಿ ಅಂತರ್ಗತವಾಗಬೇಕಾದದ್ದು. ಯಾವ ಕಾಲದಲ್ಲೂ ಸಾಹಿತ್ಯ ರಾಜಕೀಯ ಪ್ರಭಾವದಿಂದ ದೂರ ಉಳಿದಿರಲಿಲ್ಲ. 'ರಾಜಕೀಯದಿಂದ ದೂರವಿರುವುದು' ಎಂದು ಹೇಳುವುದೇ ಮತ್ತೊಂದು ರಾಜಕೀಯ ವಿಚಾರಗಳಿಗೆ ಸೇವೆ ಸಲ್ಲಿಸುವ ಉದ್ದೇಶವಾಗಿ ಮಾರ್ಪಾಟಾಗುತ್ತದೆ.

ಕೃತಿಕಾರ ವರ್ಗ ಸಮಾಜದಲ್ಲಿ ಒಂದು ವರ್ಗದ ಪ್ರತಿನಿಧಿಯಾಗಿರುತ್ತಾನೆ. ಅಂದಾಕ್ಷಣವೇ ಅವನು ಆ ವರ್ಗದ ವಿಚಾರಗಳನ್ನು ಮಾತ್ರ ಹೇಳುತ್ತಿದ್ದಾನೆಂದು ಅರ್ಥವಲ್ಲ. ಒಬ್ಬ ಸಾಹಿತಿ ತನ್ನ ವರ್ಗದ ವಾಸ್ತವ ಸಂಗತಿಗಳನ್ನು ವೈವಿಧ್ಯಮಯವಾಗಿ ಚಿತ್ರಿಸಿ ತನ್ನ ವರ್ಗಕ್ಕೆ ಸಹಾನುಭೂತಿ ಪರವಾದ ನಿಲುವನ್ನು ತಳೆದಿರಬಹುದು. ಆದರೂ ಅವನ ಕೃತಿ ವಸ್ತುನಿಷ್ಠವಾದದ್ದರ ಪ್ರತಿನಿಧಿಯಾದದ್ದರಿಂದ ಸಮಾಜದ ಸಂಘರ್ಷಗಳನ್ನು ಹೇಳುತ್ತದೆ. ಕೃತಿಕಾರನ ವರ್ಗ ಸಂಬಂಧವನ್ನು ಮೀರಿ ವಾಸ್ತವ ಬದುಕಿನ ಚಿತ್ರವನ್ನು ಒದಗಿಸುತ್ತದೆ. ಅವನ ಕೃತಿಯಲ್ಲಿ ಕಂಡು ಬರುವ ವೈರುಧ್ಯಗಳು ಅವನ ಕಾಲದವೂ ಆಗಿರುತ್ತವೆ. ಎಷ್ಟೋ ವೇಳೆ ಒಬ್ಬ ಚರಿತ್ರಕಾರ ಹೇಳುವುದಕ್ಕಿಂತ ಹೆಚ್ಚಿನದನ್ನು ಕೃತಿಕಾರ ಆ ಸಮಾಜದ ಬಗೆಗೆ ಹೇಳಿರುತ್ತಾನೆ. ಪ್ರತಿಗಾಮಿ ವಿಚಾರಗಳನ್ನು ಹೊಂದಿದ ಲೇಖಕ ರಚಿಸುವ ಕೃತಿಗಳು ಎಷ್ಟೋ ವೇಳೆ ಪ್ರಗತಿಪರ ವಿಚಾರಗಳಿಗೆ ನೆಲೆಯಾಗುವಂತೆಯೇ, ಪ್ರಗತಿಪರರೆಂದು ಕರೆದುಕೊಳ್ಳುವವರ ಕೃತಿ ಅವರಿಗೆ ವಿರೋಧಿಯಾದ ವಿಚಾರಗಳನ್ನು ಹೇಳಬಹುದು. ಏಕೆಂದರೆ ಸಮಾಜದ ಯಥಾವತ್ತಾದ ಪ್ರಾಮಾಣಿಕ ಅಭಿವ್ಯಕ್ತಿ ಅವರಿಗೆ ಎಷ್ಟು ಸಾಧ್ಯವಾಗಿದೆ ಎಂಬುದನ್ನು ಇವು ಅವಲಂಭಿಸುತ್ತವೆ. ಇಂಥ ಪ್ರಾಮಾಣಿಕ ವಸ್ತುನಿಷ್ಠ ಅಭಿವ್ಯಕ್ತಿ ಪ್ರಜ್ಞಾಪೂರ್ವಕವೂ ಹಾಗಲ್ಲದೆಯೂ ಆಗಿರಬಹುದು.

ಸಾಹಿತ್ಯ – ರಾಜಕೀಯಗಳ ಸಂಬಂಧದ ಬಗ್ಗೆ ಇತ್ತೀಚೆಗೆ ಹೆಚ್ಚು ಚರ್ಚೆ ಎದ್ದಿದೆ. ಜಗತ್ತಿನಲ್ಲಿ ಕೋಟ್ಯಂತರ ಮಂದಿ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಂಡು ಬದುಕನ್ನು ರೂಪಿಸಿಕೊಳ್ಳಲು ಹೋರಾಡುತ್ತಿರುವಾಗ ರಾಜಕೀಯಕ್ಕೂ ಸಾಹಿತ್ಯಕ್ಕೂ ಸಂಬಂಧ ಇರಬಾರದೆಂದು ಹೇಳುವುದು ಪ್ರತಿಗಾಮಿ ನೆಲೆಯ ಮಾತಾಗುತ್ತದೆ. ಸಾಹಿತ್ಯ ಕೃತಿ ರಾಜಕೀಯ ಸಿದ್ಧಾಂತದ ಕೈಪಿಡಿಯಲ್ಲ. ರಾಜಕೀಯ ಅದರ ಒಳಪದರುಗಳಲ್ಲಿ ಅಂತರ್ಗತವಾಗಬೇಕಾದದ್ದು. ಯಾವ ಕಾಲದಲ್ಲೂ ಸಾಹಿತ್ಯ ರಾಜಕೀಯ ಪ್ರಭಾವದಿಂದ ದೂರ ಉಳಿದಿರಲಿಲ್ಲ.

ಪ್ರತಿಯೊಂದು ಕಾಲದ ಸಾಹಿತ್ಯಕ್ಕೂ ಅದರದೇ ಆದ ವೈಶಿಷ್ಟ್ಯ ಮೈಗೂಡಿರುವುದರಿಂದ ಆ ಕಾಲದ ಚಾರಿತ್ರಿಕ ಸಂದರ್ಭದ ಅಧ್ಯಯನದಿಂದಲೇ ಆ ಸಾಹಿತ್ಯದ ವಿಶ್ಲೇಷಣೆ ಅರ್ಥಪೂರ್ಣವಾಗುತ್ತದೆ. ಸಾಹಿತ್ಯವನ್ನು ಭಾರತೀಯ ಸಾಹಿತ್ಯ ಇತ್ಯಾದಿ ಸರಳೀಕರಿಸಿ ಮಾತನಾಡದೆ, ಆಯಾ ಪ್ರಾದೇಶಿಕ ಭಾಷೆಗಳ ಸಾಹಿತ್ಯವನ್ನೂ, ಆಯಾ ಭಾಷೆಗಳ ಚರಿತ್ರೆಯನ್ನೂ ಆಯಾ ಸಮಾಜದೊಂದಿಗಿನ ಅವುಗಳ ಸಂಬಂಧ ಮತ್ತು ಅವುಗಳ ಬೆಳವಣಿಗೆಯ ಹಿಂದೆ ಕೆಲಸ ಮಾಡಿದ ವಿಶಿಷ್ಟ ವರ್ಗಶಕ್ತಿಗಳನ್ನೂ ಒಟ್ಟಾಗಿ ಗಮನಿಸಬೇಕಾಗುತ್ತದೆ.

ಬಂಡವಾಳ ಶಾಹಿಯಲ್ಲಿ

ಬಂಡವಾಳಶಾಹಿ ಸಮಾಜ ಸಾಹಿತ್ಯದ ಪ್ರಯೋಜನಗಳನ್ನು ಬದಲಾಯಿಸಿತು. ಪಾಳೇಗಾರಿ ಸಮಾಜದಲ್ಲಿ ಬದುಕಿದ್ದ ಕವಿಗೆ ಇತರ ಕುಶಲಕರ್ಮಿಗಳಿಗಿದ್ದಂತೆಯೇ ಭದ್ರವಾದ ನೆಲೆಯಿತ್ತು. ಆಗ ಅವನ ಕಾವ್ಯಕ್ಕೆ ಔಪಯೋಗಿಕ ಪ್ರಯೋಜನ ಮಾತ್ರವಿತ್ತು. ಆದರೆ ಬಂಡವಾಳ ಶಾಹಿಯಲ್ಲಿ ಕುಶಲಕರ್ಮಿ ಹೇಗೆ ಕಾರ್ಮಿಕನಾಗಿ ಬಂಡವಾಳಗಾರನಿಗೆ ತನ್ನ ಶ್ರಮವನ್ನು ಮಾರುವಂತಾಯಿತೋ ಹಾಗೆಯೇ ಕವಿ ತನ್ನ ಕೃತಿಯನ್ನು ಹಣಕ್ಕಾಗಿ ಮಾರುವ ಸ್ಥಿತಿ ಬಂತು. ರಾಜ ಮತ್ತು ಮಠಗಳಿಗೆ ಬರೆದು ಒಪ್ಪಿಸುತ್ತಿದ್ದವನಿಗೆ ಯಾರಿಗೆ ಬೇಕಾದರೂ ಮಾರುವ ಸ್ವಾತಂತ್ರ್ಯ ಸಿಕ್ಕಿತು. ಬಂಡವಾಳಶಾಹಿಯಲ್ಲಿ ಸಾಮಾಜಿಕ ಉತ್ಪಾದನೆ ಮತ್ತು ಖಾಸಗಿ ಉತ್ಪನ್ನಗಳ ಮಾಲೀಕತ್ವಗಳ ಮೂಲಭೂತ ವೈರುಧ್ಯದ ಫಲವನ್ನು ಸಾಹಿತ್ಯ–ಕಲೆಗಳೂ ಅನುಭವಿಸಿದವು. ಈ ವಸ್ತುಸ್ಥಿತಿ ಮತ್ತು ತನ್ನ ಆದರ್ಶಗಳಿಗೆ ಇರುವ ವೈರುಧ್ಯವನ್ನು ಹೆಚ್ಚು ಪ್ರಜ್ಞಾಪೂರ್ವಕವಾಗಿ ಗ್ರಹಿಸುವ ಬರಹಗಾರನ ಕೃತಿ ವಿಸ್ತಾರ ಮತ್ತು ವ್ಯಾಪ್ತಿಯಲ್ಲಿ ಬೆಳೆಯುವುದಲ್ಲದೆ ಬಂಡವಾಳಶಾಹಿ ಅಮಾನವೀಯ ಸಂಬಂಧಗಳ ಬಗೆಗೆ ಪ್ರತಿಭಟನೆಯೂ ಆಗಿರುತ್ತದೆ.

ಸಾಹಿತ್ಯದ ಪ್ರಯೋಜನ

ಇಂಥ ಸಂದರ್ಭದಲ್ಲಿಯೇ ಸಾಹಿತ್ಯದ ಪ್ರಯೋಜನದ ಬಗ್ಗೆ ತೀವ್ರ ಚರ್ಚೆಯೂ ಪ್ರಾರಂಭವಾಗುತ್ತದೆ. ಬಂಡವಾಳಶಾಹಿಯ ಉಗಮವಾಗುವವರೆಗೆ ಸಾಹಿತ್ಯದ ಪ್ರಯೋಜನದ ಬಗ್ಗೆ ಯಾರೂ ನಕಾರಾತ್ಮಕವಾಗಿರಲಿಲ್ಲ. ಪ್ರಾಚೀನ ಭಾರತೀಯ ಕಾವ್ಯಮೀಮಾಂಸಕರೆಲ್ಲ ಸಾಹಿತ್ಯದಿಂದ ಒಂದಲ್ಲ ಅನೇಕ ಪ್ರಯೋಜನಗಳನ್ನು ಆಶಿಸಿದ್ದರು. ಈ ಪ್ರಯೋಜನದ ದೃಷ್ಟಿ, ಕವಿ ಸಮಾಜ ಜೀವನದಲ್ಲಿ ಪಾಲ್ಗೊಂಡು ಅದರ ಪರಿಸ್ಥಿತಿಯ ಬಗ್ಗೆ ತೀರ್ಪು ಕೊಡುವಂತಾಗಿ ಬಹುಪಾಲು ಜನತೆ ಸೃಜನಾತ್ಮಕ ಕಲಾ ನಿರ್ಮಿತಿಯಲ್ಲಿ ಆಸಕ್ತಿ ವಹಿಸಿದಾಗ, ಚಾಲ್ತಿಯಲ್ಲಿರುತ್ತದೆ.

ಅದೇ ಸಾಹಿತಿ ಕಲಾಕೃತಿಯ ನಿರ್ಮಾಣದಲ್ಲಿ ತೀವ್ರ ಆಸಕ್ತಿಯನ್ನು ತಳೆದು ಸಾಮಾಜಿಕ ಪರಿಸರದಲ್ಲಿ ಅಡ್ಡಿ ಆತಂಕಗಳನ್ನು ಎದುರಿಸಬೇಕಾದಂತಹ ಸ್ಥಿತಿ ಬಂದಾಗ ಕಲೆಗಾಗಿ ಕಲೆ ಎನ್ನುವ ನಕಾರಾತ್ಮಕ ನೆಲೆಗೆ ತಲುಪುತ್ತಾನೆ. ಈ ಕಲೆಗಾಗಿ ಕಲೆ ಎನ್ನುವುದು "ದುಡ್ಡಿಗಾಗಿ ದುಡ್ಡು, ವಿಜ್ಞಾನಕ್ಕಾಗಿ ವಿಜ್ಞಾನ" ಎನ್ನುವಷ್ಟೇ ತಮಾಷೆಯ ವಿಚಾರವಾದರೂ ಕೂಡ ಬಹಳಷ್ಟು ಬರಹಗಾರರು ಈ ವಾದದತ್ತ ಹೊರಳಿದರು. ಆದರೆ ಕಲೆಗಾಗಿ ಕಲೆ ಎನ್ನುವುದು ಬಂಡವಾಳಶಾಹಿಯನ್ನು ವಿರೋಧಿಸಲೆಂದು ಹುಟ್ಟಿದ್ದಾಗಿ ಕಾಣಿಸಿಕೊಂಡರೂ ಅದು ನಿಂತ ನೆಲೆಯಿಂದ ಕಲೆ ದುಡ್ಡಿಗಾಗಿ ಎನ್ನುವಂತಾಗುವುದಲ್ಲದೆ ಬಂಡವಾಳಶಾಹಿಗೆ ಮುಖ ತಿರುಗಿಸಿದುದರಿಂದ ಅದಕ್ಕೆ ಪೋಷಕವೂ ಆಗುತ್ತದೆ. ಇದರಿಂದ ಕವಿ ತನ್ನ ಕಾಲದ ವೈರುಧ್ಯಗಳಿಗೂ ಮುಖ ತಿರುಗಿಸಿಬಿಡುತ್ತಾನೆ.

ಸಾಹಿತ್ಯ ಔಪಯೋಗಿಕ ಪಾತ್ರ ವಹಿಸಬೇಕೆಂಬ ವಿಚಾರದಲ್ಲಿ ರಾಜಕೀಯ ಶಕ್ತಿಗಳು ಯಾವಾಗಲೂ ಪರವಾದ ಅಭಿಪ್ರಾಯವನ್ನೇ ಹೊಂದಿರುತ್ತವೆ. ತೀವ್ರ ಪ್ರತಿಗಾಮಿ ರಾಜಕೀಯ ಶಕ್ತಿಗಳೂ ಸಾಹಿತ್ಯದ ಬಗೆಗೆ ಎಳ್ಳಷ್ಟು ಗಮನ ಹರಿಸದಿದ್ದರೂ ಕೂಡ ಅದು ತಮ್ಮನ್ನು ಸೇವಿಸಬೇಕೆಂದು ನಿರೀಕ್ಷಿಸುತ್ತವೆ. ಆದ್ದರಿಂದ ಕೃತಿಯೊಂದು ಹೊರಬಂದು ಸಮಾಜವನ್ನು ತಲುಪಿತೆಂದರೆ ಸಾಹಿತ್ಯದ ಪ್ರಯೋಜನ ಅನಿವಾರ್ಯವಾದ ಮುಂದಿನ ಫಲವಾಗಿರುತ್ತದೆ. ಇದು ಬೇಕು ಬೇಡಗಳಿಂದಾಚೆಯದಾಗಿರುವುದರಿಂದ ಕೃತಿಕಾರ ಬಹಳಷ್ಟು ಎಚ್ಚರ ವಹಿಸಬೇಕಾಗುತ್ತದೆ. ವಾಸ್ತವವಾದಿ ಬರಹಗಾರರು ಪ್ರಗತಿಪರ ದೃಷ್ಟಿಕೋನವನ್ನು ಪ್ರತಿಫಲಿಸುವುದು ಮಾತ್ರವಲ್ಲ. ನಿಜಸಂಗತಿಗಳನ್ನಾಧರಿಸಿದ ಶೋಧನೆಗೆ ತೊಡಗಬೇಕಾಗುತ್ತದೆ. ಹೀಗೆ ತೊಡಗುವಾಗ ಅವರು ತಮ್ಮ ದೃಷ್ಟಿಯಲ್ಲಿ ಪ್ರಗತಿಪರವಾದ ತಾತ್ವಿಕ ಮತ್ತು ರಾಜಕೀಯ ಬಲವನ್ನು ಹೊಂದುವುದು ಅಗತ್ಯವಾಗುತ್ತದೆ.

ಬದ್ಧತೆ

ಪ್ರಗತಿಪರ ವಿಚಾರ ಧಾರೆಯನ್ನು ಹೊಂದಿದಾಕ್ಷಣ ಅವರು ಯಾವುದೋ ಕ್ರಾಂತಿಕಾರಿ ಪಕ್ಷಕ್ಕೆ ಬದ್ಧರಾಗಿರಬೇಕಿಲ್ಲ. ಆದರೆ ಇಂಥ ಬದ್ಧತೆ, ಸಮಾಜದ ವೈಜ್ಞಾನಿಕ ಬೆಳವಣಿಗೆಯನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ. ಬದ್ಧತೆ ಇಲ್ಲವೆಂದು ಹೇಳಿಕೊಳ್ಳುವ ಬರಹಗಾರನ ಕೃತಿಯೂ ಕೂಡ, ಯಾವುದೋ ಒಂದು ಸೈದ್ಧಾಂತಿಕ ವಿಚಾರಗಳ ಪೋಷಣೆಗೆ ಸಹಕಾರಿಯಾಗಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಜಗತ್ತಿನ ಯಾವ ಕಾಲದ ಬರಹಗಾರನೂ ಕೂಡ ಬದ್ಧತೆಯಿಂದ ಮುಕ್ತನಾಗಿಲ್ಲವೆಂದು ಹೇಳಬಹುದು: ಇದು ಅಷ್ಟೇ ವಾಸ್ತವಾಂಶದಿಂದಲೂ ಕೂಡಿದೆ.

ಬರಹಗಾರ ಬದ್ಧನಾದರೆ ಅವನ ಸ್ವಾತಂತ್ರ್ಯ ನಷ್ಟವಾಗುತ್ತದೆಂದೂ, ಬರಹಗಾರ ಎಂದಿಗೂ ಪೂರ್ಣ ಸ್ವತಂತ್ರನಾಗಿರಬೇಕೆಂದೂ ಬದ್ಧತೆಯನ್ನು ವಿರೋಧಿಸುವವರು ಹೇಳುತ್ತಾರೆ. ಆದರೆ ವಸ್ತುಸ್ಥಿತಿ ಅದಕ್ಕೆ ವಿರೋಧವಾಗಿಯೇ ಇದೆ. ಹಣದ ಶಕ್ತಿಯನ್ನು ಅವಲಂಬಿಸಿದ ಸಮಾಜದಲ್ಲಿ ಅದರಲ್ಲೂ ಬಹುಪಾಲು ದುಡಿವ ಜನ ಬಡತನದಲ್ಲಿ ನರಳುತ್ತ, ಕೆಲವರು ಮಾತ್ರ ಪರಾವಲಂಬಿಗಳಾಗಿ ಭೋಗ ಜೀವನದಲ್ಲಿರುವಾಗ ಸ್ವಾತಂತ್ರ್ಯ ಎನ್ನುವುದು ಕನಸಿನ ಮಾತಾಗುತ್ತದೆ. ಅದು ತೆರೆಮರೆಯಲ್ಲಿ ಹಣದ ಚೀಲವನ್ನು ಅವಲಂಬಿಸಿಯೇ ಇರುತ್ತದೆ. ಏಕೆಂದರೆ ಬಂಡವಾಳಶಾಹಿ ಸಮಾಜದಲ್ಲಿರುವುದು ವ್ಯಾಪಾರ ಸ್ವಾತಂತ್ರ್ಯ ಮಾತ್ರ. ಇಂಥ ಸ್ವಾತಂತ್ರ್ಯದಲ್ಲಿ ಬರಹಗಾರ ಬರೆಯುವುದಕ್ಕಾಗಿ ಬದುಕದೆ, ಬದುಕುವುದಕ್ಕಾಗಿ ಬರೆಯಬೇಕಾಗುತ್ತದೆ. ವಸ್ತುಸ್ಥಿತಿ ಹೀಗಿದ್ದಾಗ ತಾವು ಪಕ್ಷಾತೀತ ಬರಹಗಾರರೆಂದೂ ಅತಿಮಾನುಷರೆಂದೂ ಕರೆದುಕೊಳ್ಳುವವರು ವಾಸ್ತವದಿಂದ ದೂರವಾಗಿದ್ದಾರೆಂದು ಅರ್ಥವಾಗುತ್ತದೆ. ಸ್ವಾತಂತ್ರ್ಯದ ಸುಳ್ಳು ಮುಖವಾಡಕ್ಕಿಂತ, ಸಾರ್ವತ್ರಿಕ ಮಾನವಕಲ್ಯಾಣಕ್ಕಾಗಿ ಸಾಹಿತ್ಯ ಇದೆ ಎಂದು ಬರಹಗಾರ ತಿಳಿದಷ್ಟೂ ಅವನಿಂದ ಉತ್ತಮಕೃತಿ ಹೊರಬರುತ್ತದೆ. ಸಾಹಿತ್ಯವು ಹೋರಾಟದ ಯಂತ್ರಕ್ಕೆ ಚಕ್ರದಹಲ್ಲು ಮತ್ತು ಸ್ಕ್ರೂಗಳಾಗಬೇಕು ಎಂದು ಲೆನಿನ್ ಹೇಳಿದ ಮಾತು ಇಲ್ಲಿ ಗಮನಾರ್ಹವಾದದ್ದು.

ಸಾಹಿತ ವಿಮರ್ಶೆ–ಚರಿತ್ರೆ

ಸಾಹಿತ್ಯವನ್ನು ವಿಮರ್ಶಿಸಿ ವಿಶ್ಲೇಷಿಸುವಾಗ ಸಾಹಿತ್ಯದ ಚರಿತ್ರೆಯನ್ನು ಅಭ್ಯಾಸ ಮಾಡುವ ಅಗತ್ಯ ಬಹಳ ಇದೆ. ಚರಿತ್ರೆಯ ಹಾಗೆ, ಸಾಹಿತ್ಯ ಘಟನೆಗಳ ಕಾಲಾನುಗುಣದ ಪಟ್ಟಿಯನ್ನು ಕೊಡುವುದಿಲ್ಲ, ಅದು ಆಧಾರಗಳಿಂದ ರೂಪುಗೊಂಡದ್ದಲ್ಲ ಅಥವಾ ಯಾವುದೇ ಸೂತ್ರಗಳ ನಿರ್ಮಾಣಕ್ಕೆ ಅದು ತೊಡಗುವುದಿಲ್ಲ. ಆದರೆ ಅದು ಚರಿತ್ರಕಾರನನ್ನೂ ಮೀರಿ, ಚರಿತ್ರೆಯ ಒಳತಿರುಳನ್ನು ಹೇಳಬಹುದಾದ ಸಾಧ್ಯತೆಗಳಿವೆ. ಎಲ್ಲಿ ಚರಿತ್ರಕಾರ ಮೌನಿಯಾಗುತ್ತಾನೋ ಅಲ್ಲಿ ಸಾಹಿತ್ಯ ಮಾತನಾಡಬಹುದು. ಏಕೆಂದರೆ ಮನುಷ್ಯರೇ ತಮ್ಮ ಚರಿತ್ರೆಯ ನಿರ್ಮಾಪಕರಾದ್ದರಿಂದ, ಸಾಹಿತ್ಯ ಮನುಷ್ಯರ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಆದರೆ ಜನ ಚರಿತ್ರೆಯನ್ನು ತಮ್ಮ ಇಷ್ಟಬಂದಂತೆ, ತಾವೇ ಆಯ್ಕೆ ಮಾಡಿಕೊಂಡ ಸಂದರ್ಭವೊಂದರಲ್ಲಿ ನಿರ್ಮಿಸಲಾರರು. ಕಳೆದುಹೋದ ಎಲ್ಲ ತಲೆಮಾರುಗಳ ಪರಂಪರೆಯೂ ಬದುಕುತ್ತಿರುವವರ ಮಿದುಳಿನ ಮೇಲೆ ಕೂತಿರುತ್ತದೆ. ಈ ಹಿನ್ನೆಲೆಯಲ್ಲಿ ಹೋರಾಟಕ್ಕೆ ಅದರಲ್ಲೂ ಕ್ರಾಂತಿಕಾರಿ ಹೋರಾಟಕ್ಕೆ ಸಿದ್ಧವಾಗಬೇಕಾದಾಗ ಚರಿತ್ರೆಯನ್ನು ಐತಿಹಾಸಿಕ ಭೌತವಾದಿ ದೃಷ್ಟಿಯಿಂದ ವಿಶ್ಲೇಷಿಸುವುದು ಅಗತ್ಯವಾಗುತ್ತದೆ. ಸಾಹಿತ್ಯ ಚರಿತ್ರೆಯ ವಿಚಾರಕ್ಕೂ ಇದು ನಿಜ.

ಆದ್ದರಿಂದ ಎಲ್ಲ ಚರಿತ್ರೆಯನ್ನೂ ಹೊಸದಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಏಕೆಂದರೆ ಸಮಾಜದ ಬೇರೆ ಬೇರೆ ಘಟ್ಟಗಳು ರೂಪುಗೊಂಡುದಕ್ಕೆ ಕಾರಣವಾಗಿರುವ ಸಂದರ್ಭಗಳ ಕೂಲಂಕುಷ ಅಧ್ಯಯನದ ನಂತರವೇ ಆ ಸಮಾಜಕ್ಕೆ ಸಂಬಂಧಿಸಿದ ತಾತ್ವಿಕ, ಧಾರ್ಮಿಕ, ರಾಜಕೀಯ ವಿಚಾರಗಳನ್ನು ಕುರಿತು ಮಾತನಾಡಲು ಸಾಧ್ಯವಾಗುತ್ತದೆ. ಪ್ರತಿಯೊಂದು ಚಾರಿತ್ರಿಕ ಕಾಲಘಟ್ಟದಲ್ಲೂ ಅದರದೇ ಆದ ಸೌಂದರ್ಯ ಮೀಮಾಂಸೆಯ ಸೂತ್ರಗಳಿರುತ್ತವೆ. ಅವುಗಳಿಗನುಗುಣವಾಗಿ ವಿಶಿಷ್ಟವಾದ ಕೃತಿಗಳು ಸೃಷ್ಟಿಯಾಗಿರುವುದಲ್ಲದೆ ಬೇರೆ ಸಂದರ್ಭಗಳಲ್ಲಿ ಅವು ಹುಟ್ಟುವುದು ಸಾಧ್ಯವಿಲ್ಲದಂತಿರುತ್ತದೆ.

ಪ್ರತಿಯೊಂದು ಕಾಲದ ಸಾಹಿತ್ಯಕ್ಕೂ ಅದರದೇ ಆದ ವೈಶಿಷ್ಟ್ಯ ಮೈಗೂಡಿರುವುದರಿಂದ ಆ ಕಾಲದ ಚಾರಿತ್ರಿಕ ಸಂದರ್ಭದ ಅಧ್ಯಯನದಿಂದಲೇ ಆ ಸಾಹಿತ್ಯದ ವಿಶ್ಲೇಷಣೆ ಅರ್ಥಪೂರ್ಣವಾಗುತ್ತದೆ. ಸಾಹಿತ್ಯವನ್ನು ಭಾರತೀಯ ಸಾಹಿತ್ಯ ಇತ್ಯಾದಿ ಸರಳೀಕರಿಸಿ ಮಾತನಾಡದೆ, ಆಯಾ ಪ್ರಾದೇಶಿಕ ಭಾಷೆಗಳ ಸಾಹಿತ್ಯವನ್ನೂ, ಆಯಾಭಾಷೆಗಳಚರಿತ್ರೆಯನ್ನೂ ಆಯಾ ಸಮಾಜದೊಂದಿಗಿನ ಅವುಗಳ ಸಂಬಂಧ ಮತ್ತು ಅವುಗಳ ಬೆಳವಣಿಗೆಯ ಹಿಂದೆ ಕೆಲಸ ಮಾಡಿದ ವಿಶಿಷ್ಟ ವರ್ಗ ಶಕ್ತಿಗಳನ್ನೂ ಒಟ್ಟಾಗಿ ಗಮನಿಸಬೇಕಾಗುತ್ತದೆ.

ಸಾಹಿತ್ಯ ಅಥವಾ ಸೌಂದರ್ಯದ ಮೌಲ್ಯಗಳು ತಲೆಮಾರುಗಳ ಅಂತರದಲ್ಲಿ ಕೂಡ ಬದಲಾಗಬಹುದು. ಆದ್ದರಿಂದ ಕ್ರಾಂತಿಕಾರಿ ಸ್ಥಿತ್ಯಂತರಕ್ಕೆ ಅಣಿಯಾಗುತ್ತಿರುವ ಸಮಾಜದಲ್ಲಿನ ಬರಹಗಾರನಿಗೆ ಹಳೆಯ ಸಾಹಿತ್ಯಕ ಮೌಲ್ಯಗಳಿಗನುಗುಣವಾಗಿ ಬರೆಯಬೇಕೆಂದು ಹೇಳುವುದು ಅವಿವೇಕ. ಒಂದು ಕಾಲದ ಸಾಹಿತ್ಯಕ ಮೌಲ್ಯಗಳು ಮತ್ತೊಂದು ಕಾಲಕ್ಕೂ ಮುಂದುವರೆದರೂ ಕೂಡ ಆ ಕಾಲದ ಪ್ರಧಾನ ಮೌಲ್ಯಗಳು ಹಿಂದಿನದಕ್ಕಿಂತ ಬೇರೆಯಾಗೇ ಇರುತ್ತವೆ.

ಮಾರ್ಕ್ಸ್‌ವಾದೀ ವಿಮರ್ಶೆ

ಈ ಎಲ್ಲ ತಿಳುವಳಿಕೆಯ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆ ಬೇರೆಲ್ಲ ವಿಮರ್ಶಾಧೋರಣೆಗಳಿಗಿಂತ ಬೇರೆಯದಾಗಿರುತ್ತದೆ. ಏಕೆಂದರೆ ಅದು ತನ್ನ ಅಂತಸ್ಸತ್ವದಲ್ಲಿ ಸಾಮಾಜಿಕವಾಗಿರುವುದಲ್ಲದೆ ವೈಜ್ಞಾನಿಕವಾಗಿಯೂ ಇರುತ್ತದೆ. ವಿಮರ್ಶಕ ಮತ್ತು ಸಾಹಿತ್ಯ ಚರಿತ್ರಕಾರ ಇಬ್ಬರೂ ಬೇರೆ ಬೇರೆ ಎನ್ನುವ ಕೃತಕ ಭೇದ ಇಲ್ಲಿ ಮರೆಯಾಗುತ್ತದೆ. ವಿಮರ್ಶಕ ಮೂಲಭೂತವಾಗಿ ಸಾಹಿತ್ಯ ಚರಿತ್ರಕಾರನಾದಾಗ ಮಾತ್ರ ಕೃತಿಯ ಸಾಮಾಜಿಕ ವಿಶ್ಲೇಷಣೆ ಸಾಧ್ಯವಾಗುತ್ತದೆ ಎನ್ನುವ ಅಂಶ ಇದರಲ್ಲಿ ಮುಖ್ಯ. ಸಾಮಾಜಿಕ ವಿಶ್ಲೇಷಣೆಯೇ ಸಾಹಿತ್ಯ ವಿಮರ್ಶೆಯ ಪ್ರಮುಖ ಮತ್ತು ಅತ್ಯಗತ್ಯವಾದ ಕೆಲಸವಾಗೂ ಇರುತ್ತದೆ.

ಮಾರ್ಕ್ಸ್‌ವಾದಿ ವಿಮರ್ಶಕ ಪ್ರತಿಯೊಂದು ಕೃತಿಯನ್ನೂ ಆ ಕಾಲದ ಸಾಮಾಜಿಕಸಂದರ್ಭದಲ್ಲಿಟ್ಟು ನೋಡುವುದು ಅನಿವಾರ್ಯ. ಏಕೆಂದರೆ ಕೃತಿಕಾರನ ಪ್ರಜ್ಞಾವಲಯಕ್ಕೆ ಸೇರಿಯೋ ಸೇರದೆಯೋ, ಅವನು ಪ್ರತಿನಿಧಿಸುವ ವರ್ಗದ ವಿಚಾರಗಳು ಅಲ್ಲಿ ಪ್ರತಿಫಲಿತವಾಗಿದ್ದು, ಆಯಾ ಕಾಲದ ವರ್ಗ ಸಂಬಂಧಗಳು ಮತ್ತು ವರ್ಗಹಿತಗಳನ್ನು ಅದು ತಿಳಿಸುತ್ತಿರುತ್ತದೆ. ಅಲ್ಲದೆ ವರ್ಗಸಂಘರ್ಷದ ಪ್ರಭಾವದಿಂದಾಗಿ ಎರಡೂ ವರ್ಗಗಳ ಅಂಶಗಳೂ ಅದರಲ್ಲಿ ಪ್ರಕಟವಾಗಬಹುದು. ಆದ್ದರಿಂದ ಸದಾ ಲೇಖಕನ ವರ್ಗ ಮೂಲವನ್ನು ಹಿಡಿದು ಕೃತಿಯ ಆಲೋಚನೆಗಳನ್ನು ನಿರ್ಧರಿಸದೆ ಕೃತಿಯನ್ನು ಸಾಮಾಜಿಕ ಚೌಕಟ್ಟಿನೊಳಗಿಟ್ಟು ವಿಶ್ಲೇಷಿಸುವುದು ಸೂಕ್ತವಾಗುತ್ತದೆ.

ಸಾಹಿತ್ಯಕ್ಕೂ ವಾಸ್ತವಕ್ಕೂ ಇರುವ ಸಂಬಂಧವೇನೆಂಬುದನ್ನು ದ್ವಂದ್ವಮಾನ ಭೌತವಾದ ಖಚಿತವಾಗಿ ವಿವರಿಸಿದೆ. ಸಾಹಿತ್ಯ, ವಾಸ್ತವದಿಂದಾಚೆಗಿರುವ ಆದರ್ಶದ ಪ್ರತಿಸೃಷ್ಟಿ ಎಂಬ ಭಾವವಾದಿಗಳ ಮಾತನ್ನು ಇದು ತಳ್ಳಿಹಾಕಿದೆ. ಸಾಹಿತ್ಯ ಅತೀತ–ಅಲೌಕಿಕ ಎಂಬ ಭ್ರಮೆಯನ್ನು ತಪ್ಪಿಸಿ, ಅದನ್ನು ಮಾನವ ಜಗತ್ತಿನ ಭದ್ರ ನೆಲೆಗೆ ತಂದು ನಿಲ್ಲಿಸಿದೆ. ಈ ವಾಸ್ತವವಾದ ಸಾಹಿತ್ಯಲೋಕದ ಒಂದು ಮಹತ್ತರ ಸಾಧನೆಯಾಗಿದ್ದು ಧರ್ಮ ಇದರೊಂದಿಗೆ ಸ್ಪರ್ಧಿಸದಂತೆ ಆಗಿದೆ. ಕಲಾಕಾರನ ಕೆಲಸ ಕೇವಲ ಹುಡುಕುವುದಲ್ಲ, ಅವನು ಒಳಿತು ಕೆಡಕಂಗಳಾಚೆ ನಿಲ್ಲುವುದೂ ಸಾಧ್ಯವಿಲ್ಲ ಎಂದು ಹೇಳಿ, ಅವನು, ಅವನ ಕೃತಿ ಮಾನವ ಜನಾಂಗದ ಭವಿಷ್ಯದತ್ತಲೇ ಗಮನ ಹರಿಸಬೇಕು ಎಂಬ ಮಹತ್ತರ ಗುರಿಯನ್ನು ತೋರಿಸಿಕೊಟ್ಟಿದೆ.

★

ಮಾತಾಡುತ್ತೇನೆ

ಕಣಜ ತುಂಬಿದವರ
ಮನೆಯ ಕಟ್ಟಿದವರ
ನೂಲು ತೆಗೆವವರ ಕುರಿತು
ಬರಹದಿಂದ, ಭಾಷಣದಿಂದ.
ನಾಟಕದಿಂದ, ಹಾಡಿನಿಂದ
ಮಾತಾಡ ಬಯಸುತ್ತೇನೆ.

ಜಿ.ಸ.

ನೂತನ ಸರ್ಕಾರದ ನೂರು ದಿವಸ

ದೃಢ ನಿಲುವು—ದಿಟ್ಟ ಹೆಜ್ಜೆ

★ ಜನತೆ ನಮಗಿತ್ತಿರುವ ಆದೇಶ, ಅಧಿಕಾರಗಳ ನಿಜವಾದ ಅರ್ಥ — ಈವರೆಗೆ ನೀಡಿದ ಆಶ್ವಾಸನೆಗಳ ಈಡೇರಿಕೆ.

★ ಈ ನೂರು ದಿನಗಳ ಅವಧಿಯಲ್ಲಿ ಮೂಲಭೂತ ಸ್ವರೂಪದ ಪ್ರಗತಿಪರ ನಿರ್ಧಾರಗಳನ್ನು ಕೈಗೊಂಡು ಜನತೆಗಿತ್ತ ವಚನ ಪಾಲನೆಗೆ ನೂತನ ಸರ್ಕಾರ ಪಣತೊಟ್ಟಿದೆ. ಜನತೆಯ ಆಶೋತ್ತರಗಳ ಸಾಧನೆಯ ಗುರಿಯತ್ತ ನಿಮ್ಮ ಸರ್ಕಾರ ಮಹತ್ವಪೂರ್ಣ ಹೆಜ್ಜೆ ಇಟ್ಟಿದೆ.

★ ಆಡಳಿತಾಧಿಕಾರದ ವಿಕೇಂದ್ರೀಕರಣಕ್ಕೆ ಬದ್ಧವಾದ ನೂತನ ಸರ್ಕಾರ ಎಲ್ಲಾ ನಗರ ಕಾರ್ಪೋರೇಷನ್ನುಗಳು, ಪುರಸಭೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಿದೆ.

★ ಹರಿಜನ, ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಹಿಂದುಳಿದ ವರ್ಗಗಳ ಆಯೋಗ ಮತ್ತು ಅಲ್ಪಸಂಖ್ಯಾತರ ಆಯೋಗವನ್ನು ರಚಿಸಿದೆ.

★ ಹರಿಜನ — ಗಿರಿಜನರ ಯುವಜನಾಂಗದ ಪ್ರತಿಭಾಪುರಸ್ಕಾರಕ್ಕಾಗಿ ಪ್ರಾಯಶಃ ದೇಶದಲ್ಲೇ ಪ್ರಥಮವಾದ ವಿನೂತನ ಕ್ರಮವನ್ನು ಕೈಗೊಳ್ಳಲಾಗಿದೆ. ಅದರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ, ವಿವಿಧ ವಿಷಯಗಳಲ್ಲಿ ಪದವಿ ಪಡೆದ 87 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ಕರ್ನಾಟಕ ಸರ್ಕಾರದ ಅಧಿಕಾರಿ ವರ್ಗಕ್ಕೆ ನೇರವಾಗಿ ನೇಮಿಸಿಕೊಳ್ಳಲಾಗುವುದು.

★ 'ಅಂತ್ಯೋದಯ' — ರಾಜ್ಯದ ಪ್ರತಿ ಹಳ್ಳಿಯಲ್ಲಿ ಐದು ಕಡುಬಡಕುಟುಂಬಗಳನ್ನು ಆಯ್ಕೆ ಮಾಡಿ, ಅವರಿಗೆ ಸ್ವಾವಲಂಬಿಗಳಾಗಲು ಎಲ್ಲ ಸೌಲಭ್ಯ ಒದಗಿಸಿ, ಬಡತನದ ರೇಖೆಯಿಂದ ಮೇಲೆತ್ತುವ ಕ್ಷೇಮಾಭ್ಯುದಯ ಯೋಜನೆ.

★ ಕಾರ್ಮಿಕರ ಕನಿಷ್ಠ ವೇತನದ ಪರಿಷ್ಕರಣೆ. ಮೇ ತಿಂಗಳ ಒಂದನೇ ತಾರೀಖು ಸಂಬಳ ಸಹಿತ ರಜೆ.

★ ಬಹು ದಿನಗಳ ಬೇಡಿಕೆ, ವೃತ್ತಿ ತೆರಿಗೆಯ ರದ್ದು. ತಿಂಗಳಿಗೆ 1200 ರೂಪಾಯಿಗಿಂತ ಕಡಿಮೆ ವೇತನ ಪಡೆಯುವವರು ಮತ್ತು ವರ್ಷಕ್ಕೆ ನಲವತ್ತು ಸಾವಿರ ರೂಪಾಯಿಗಿಂತ ಕಡಿಮೆ ವಹಿವಾಟು ಮಾಡುವ ವ್ಯಾಪಾರಸ್ಥರು ಇನ್ನು ಮುಂದೆ ವೃತ್ತಿ ತೆರಿಗೆ ಕೊಡಬೇಕಾಗಿಲ್ಲ.

★ ಬೆಲೆ ಏರಿಕೆಯನ್ನು ತಡೆಯಲು ಪರಿಣಾಮಕಾರಿ ಕ್ರಮ. ನ್ಯಾಯಬೆಲೆ ಅಂಗಡಿಗಳ ಮೂಲಕ ಮಾರಾಟ ಮಾಡುವ ಎಲ್ಲ ದರ್ಜೆಯ ಅಕ್ಕಿಯ ಬೆಲೆಯನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ.

★ ರೈತರ ಮುಂದಿರುವ ಹಲವಾರು ಸಮಸ್ಯೆಗಳ ನಿವಾರಣೆಯ ಮೊದಲ ಹಂತವಾಗಿ, ವಿವಿಧ ರೀತಿಯ ಸಾಲ ಮರುಪಾವತಿಯಲ್ಲಿ ಸುಮಾರು ಮುವತ್ತಾರು ಕೋಟಿ ರೂಪಾಯಿ ಪರಿಹಾರ ಕೊಡಲಾಗಿದೆ.

★ ಪಕ್ಷಾಂತರ ನಿಷೇಧಿಸುವ ವಿಧೇಯಕವನ್ನು ತಂದಿರುವ, ದೇಶದಲ್ಲೇ ಎರಡನೇಯ ರಾಜ್ಯ — ಕರ್ನಾಟಕ.

★ ಭ್ರಷ್ಟಾಚಾರ ಮೂಲೋಚ್ಚಾಟನೆಗೆ ತೀವ್ರಕ್ರಮ — ಲೋಕ ಆಯುಕ್ತದ ರಚನೆ.

★ ವೃದ್ಧಾಪ್ಯವೇತನ ಹಾಗೂ ಅಂಗವಿಕಲರಿಗೆ ಕೊಡುವ ಮಾಸಾಶನವನ್ನು ಐವತ್ತು ರೂಪಾಯಿಗೆ ಹೆಚ್ಚಿಸಲಾಗಿದೆ.

★ ಜನತೆಯ ಕುಂದುಕೊರತೆಗಳನ್ನು ವಿಚಾರಿಸಲು ಪ್ರತ್ಯೇಕ ಮಂತ್ರಿ ಶಾಖೆಯನ್ನೇ ರಚಿಸಿದೆ.

★ ಕನ್ನಡವನ್ನು ಎಲ್ಲ ಮಟ್ಟದಲ್ಲೂ ಆಡಳಿತ ಭಾಷೆಯಾಗಿ ಮಾಡಿರುವುದು ಮಾತ್ರವಲ್ಲ, ಇದು ಕಳೆದ ಫೆಬ್ರುವರಿ 15 ರಿಂದ ಕಡ್ಡಾಯವಾಗಿ, ಯಶಸ್ವಿಯಾಗಿ ಕಾರ್ಯಗತವಾಗುತ್ತಿದೆ.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ,

ಬೆಂಗಳೂರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO